## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ۔


بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

**ವರ್ಷ:** 03

**ಕನ್ನಡ ಬದರ್ ವಾರ ಪತ್ರಿಕೆ**
**WEEKLY BADAR QADIAN KANNADA**

**ಸಂಚಿಕೆ:** 39

**ವಾರ್ಷಿಕ ಶುಲ್ಕ ರೂ.600/–**

**ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.**

**29 ಸೆಪ್ಟೆಂಬರ್ 2022, 29 ತಬೂಕ್ 1401 ಹಿಜರಿ ಶಮ್‌ಸಿ,**
**02 ರಬೀ ಉಲ ಅವ್ವಲ್ 1444 ಹಿಜರಿ ಖಮರಿ.**


## ಅಲ್ಲಾಹನ ಉಪದೇಶ

خُذُوْا مَآ اٰتَيْنٰكُمْ بِقُوَّةٍ
وَّاذْكُرُوْا مَا فِيْهِ لَعَلَّكُمْ تَتَّقُوْنَ

**(ಅಲ್ ಅಅ್‌ರಾಫ್ : 172)**

**ಅಂದರೆ: ನೀವು ಭಯಭಕ್ತಿವುಳ್ಳವರಾಗಲಿಕ್ಕಾಗಿ ನಾವು ನಿಮಗೆ ನೀಡಿದುದನ್ನು ಬಿಗಿಯಾಗಿ ಹಿಡಿದುಕೊಂಡು ಅದರಲ್ಲಿರುವುದನ್ನು ನೀವು ಜ್ಞಾಪಿಸಿಕೊಳ್ಳಿ.**

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

**ನಮಾಝ್‌ಅನ್ನು ತಡೆಯುವವರೆಗೂ ನೀವು ಪ್ರತಿಯೊಬ್ಬರೂ ನಮಾಝಿನಲ್ಲಿಯೇ ಇರುತ್ತೀರಿ**

(2119) ಹಝ್ರತ್ ಅಬು ಹುರೈರಾ(ರ) ವರದಿ ಮಾಡುತ್ತಾರೆ, ಪ್ರವಾದಿ(ಸ) ಹೇಳಿದರು: ನಿಮ್ಮಲ್ಲಿ ಯಾರು (ಮಸೀದಿಯಲ್ಲಿ) ಬಾ ಜಮಾಅತ್ ನಮಾಝ್ ನಿರ್ವಹಿಸುತ್ತಾರೋ ಅವರಿಗೆ ಇಪ್ಪತ್ತಕ್ಕೂ ಹೆಚ್ಚು ಪ್ರಮಾಣದ ಶ್ರೇಷ್ಠತೆಯನ್ನು ನೀಡಲಾಗಿದೆ, ಇದನ್ನು ಮಾರುಕಟ್ಟೆಯಲ್ಲಿ ಅಥವಾ ತನ್ನ ಮನೆಯಲ್ಲಿ ನಮಾಝ್ ನಿರ್ವಹಿಸುವವರೊಂದಿಗೆ ಹೋಲಿಸಲಾಗಿದೆ, ಏಕೆಂದರೆ ಅವನು ಚೆನ್ನಾಗಿ ವುಝು ಮಾಡಿದ ನಂತರ ನಮಾಝ್‌ನ ಉದ್ದೇಶದಿಂದ ಮಾತ್ರ ಮಸೀದಿಗೆ ಬಂದಾಗ ಮತ್ತು ನಮಾಝ್ ಮಾತ್ರ ಅವನನ್ನು ಎಬ್ಬಿಸಿದರೆ, ನಂತರ ಅವನು ಇಡುವ ಪ್ರತಿಯೊಂದು ಹೆಜ್ಜೆಯೊಂದಿಗೆ, ಅವನು ಖಂಡಿತವಾಗಿಯೂ ಒಂದು ಮಟ್ಟಕ್ಕೆ ಏರುತ್ತಾನೆ ಅಥವಾ ಅವನ ಒಂದು ದೋಷವು ಕಡಿಮೆಯಾಗುತ್ತದೆ ಮತ್ತು ಅವನು ಪ್ರಾರ್ಥಿಸುವ ಸ್ಥಳದಲ್ಲಿ ಅವನು ಇರುವವರೆಗೂ ದೇವದೂತರು ನಿಮ್ಮ ಕರುಣೆಗಾಗಿ ಪ್ರಾರ್ಥಿಸುತ್ತಿರುತ್ತಾರೆ (ಮತ್ತು ಅವರು ಹೇಳುತ್ತಾರೆ) ಓ ಸರ್ವಶಕ್ತನಾದ ಅಲ್ಲಾಹನೇ! ನಿನ್ನ ವಿಶೇಷ ಕರುಣೆಯಿಂದ ಅವನನ್ನು ಅನುಗ್ರಹಿಸು. ಓ ಅಲ್ಲಾಹನೇ! ಅವನ ಮೇಲೆ ಕರುಣೆದೋರಿಸು. ಅವನು ವುಝು ಮಾಡದೆ ಇರುವವರೆಗೂ ಈ ಪ್ರಾರ್ಥನೆಯು ಮುಂದುವರಿಯುತ್ತದೆ, (ಅಥವಾ) ಅಲ್ಲಿ ಯಾರನ್ನೂ ನೋಯಿಸುವುದಿಲ್ಲ ಮತ್ತು ಪ್ರವಾದಿ(ಸ) ಹೇಳಿದರು: ನಿಮ್ಮಲ್ಲಿ ಪ್ರತಿಯೊಬ್ಬರು ನಮಾಝ್‌ಅನ್ನು ನಿಲ್ಲಿಸುವವರೆಗೂ ನಮಾಝಿನಲ್ಲಿಯೇ ಇರುತ್ತೀರಿ.

**ವಿಶೇಷ ಸೂಚನೆ**

"ಬದರ್" ವಾರಪತ್ರಿಕೆಯ ಚಂದಾದಾರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.
ಮೊಬೈಲ್ ಸಂಖ್ಯೆ: 9866358609
(ವ್ಯವಸ್ಥಾಪಕರು)

## ಕೆಲವೊಮ್ಮೆ ಪ್ರವಾದಿ ಮುಹಮ್ಮದ್(ಸ)ರವರು ಯೇಸುವಿನ ವಯಸ್ಸನ್ನು ಹೇಳುವ ಮೂಲಕ ಅವರು ಮರಣಹೊಂದಿದ್ದಾರೆ ಮತ್ತು ವಾಗ್ದಾತ್ತ ಮಸೀಹ್ ಹಾಗೂ ಇಸ್ರಾಈಲ್‌ರ ಮಸೀಹರ ಮುಖಚರ್ಯೆಯು ಪ್ರತ್ಯೇಕಿಸುವ ಮೂಲಕ ಅವರು ನಿಧನಹೊಂದಿದ್ದಾರೆ ಎಂದು ಸಾಕ್ಷಿ ಹೇಳುತ್ತಿದ್ದರು

**ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

ಸರ್ವಶಕ್ತನಾದ ಅಲ್ಲಾಹನ ಮಾತು(ಕಲಾಮ್) ಮೂವತ್ತು ಆಯತ್‌ಗಳಲ್ಲಿ ನಮ್ಮನ್ನು ಬೆಂಬಲಿಸುತ್ತದೆ. ಉದಾಹರಣೆಗೆ ಅದು **ಯಾಈಸಾ ಇನ್ನಿ ಮುತವಫ್ಫೀಕ** (ಆಲಿ ಇಮ್ರಾನ್: 56) **ಫಲಮ್ಮ ತವಫ್ಫೈತನೀ** ಎಂದು ಹೇಳಿ ಮತ್ತೊಂದೆಡೆ **ಮಾ ಮುಹಮ್ಮದುನ್ ಇಲ್ಲಾ ರಸೂಲುನ್ ಖದ್ ಖಲತ್ ಮಿನ್ ಖಬ್ಲಿಹಿರ್ರುಸುಲು** (ಆಲಿ ಇಮ್ರಾನ್: 145) ಎಂದು ವಿವರಿಸಿ. ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ನಾವು ಸ್ಥಾಪಿಸಲ್ಪಟ್ಟ ಮಾರ್ಗವು ನಿಜವಾದ ಮಾರ್ಗವಾಗಿದೆ ಎಂದು ಕೂಗಿ ಕೂಗಿ ಹೇಳುತ್ತಿದ್ದಾನೆ ಮತ್ತು ಇದರ ಮೇಲೆಯೇ ರಸೂಲುಲ್ಲಾಹ್(ಸ) ರವರು ಹಝ್‌ರತ್ ಮಸೀಹ್(ಅ) ರನ್ನು ಹಝ್‌ರತ್ ಯಹ್ಯಾ(ಅ) ಅವರೊಂದಿಗೆ ಮೆಅ್‌ರಾಜ್‌ನಲ್ಲಿ ಕಂಡಿರುತ್ತಾರೆ. ಮತ್ತು ಜೀವಂತ ಮತ್ತು ಸತ್ತವರ ನಡುವೆ ಇರಬೇಕಾದ ವ್ಯತ್ಯಾಸವು ಅವರಿಬ್ಬರ ನಡುವೆ ಯಾವುದೇ ರೀತಿಯ ವಿಶೇಷ ವ್ಯತ್ಯಾಸವನ್ನು ವಿವರಿಸಲಿಲ್ಲ ಎಂಬುದು ಖಚಿತವಾದ ವಿಷಯವಾಗಿದೆ. ಕೆಲವೊಮ್ಮೆ ಪವಿತ್ರ ಪ್ರವಾದಿ (ಸಲ್ಲಲ್ಲಾಹು ಅಲೈಹಿವಸಲ್ಲಮ್) ಅವರು ಅವರ ವಯಸ್ಸನ್ನು ಹೇಳುವ ಮೂಲಕ ಅವರು ಮರಣಹೊಂದಿದರು ಎಂದು ಸಾಕ್ಷಿ ಹೇಳುತ್ತಿದ್ದರು, ಮತ್ತು ಕೆಲವೊಮ್ಮೆ ವಾಗ್ದತ್ತ ಮೆಸ್ಸಿಹ್ ಮತ್ತು ಇಸ್ರಾಈಲ್‌ರ ಮೆಸ್ಸಿಹ್‌ರ ಮುಖಚರ್ಯೆಯನ್ನು ಪ್ರತ್ಯೇಕಿಸುವ ಮೂಲಕ ಅವರು ನಿಧನರಾದರು ಎಂದು ಹೇಳುತ್ತಿದ್ದರು. ಈ ಸಾಕ್ಷ್ಯಗಳು ಹದೀಸ್ ಮತ್ತು ಖುರ್‌ಆನ್‌ನಿಂದ ಸಾಬೀತಾಗಿರುವುದು. ಇದರ ಹೊರತಾಗಿ, ಪವಿತ್ರ ಪ್ರವಾದಿ(ಸ) ರವರ ನಿಧನದಿಂದ ಎಲ್ಲಾ ಪ್ರವಾದಿಗಳು ಮರಣಹೊಂದಿದ್ದಾರೆ ಎಂಬುದಕ್ಕೆ ಸಹಾಬರವರು ಸಾಕ್ಷಿ ನೀಡುತ್ತಾರೆ. ಹಝ್‌ರತ್ ಉಮರ್(ರ) ರವರು ಪ್ರವಾದಿ(ಸ)ರವರ ಬಗ್ಗೆ ಹೇಳಿದರು, ಅವರು ಇನ್ನೂ ನಿಧನಹೊಂದಿಲ್ಲ, ಮತ್ತು ಅವರು ತಮ್ಮ ಕತ್ತಿಯನ್ನು ಹಿಸುಕಿ ಎದ್ದು ನಿಂತರು, ಆದರೆ ಹಝ್‌ರತ್ ಅಬುಬಕರ್ ಸಿದ್ದೀಖ್(ರ) ರವರು ನಿಂತು ಈ ಧರ್ಮೋಪದೇಶವನ್ನು ಪಠಿಸುತ್ತಾರೆ: **ಮಾ ಮುಹಮ್ಮದುನ್ ಇಲ್ಲಾ ರಸೂಲುನ್ ಖದ್ ಖಲತ್ ಮಿನ್ ಖಬ್ಲಿಹಿರ್ರುಸುಲು** (ಆಲಿ ಇಮ್ರಾನ್: 145) ಈಗ ಈ ಸಂದರ್ಭದಲ್ಲಿ, ಇದು ಖಿಯಾಮತ್ತಿನ ಕ್ಷೇತ್ರವಾಗಿತ್ತು ಅಂದರೆ ಒಂದೆಡೆ ಪವಿತ್ರ ಪ್ರವಾದಿ(ಸ) ರವರು ಇಹಲೋಕ ತ್ಯಜಿಸಿರುತ್ತಾರೆ ಮತ್ತು ಎಲ್ಲಾ ಸಹಾಬರವರು ಒಂದು ಕಡೆ ಕೂಡಿದ್ದಾರೆ. ಉಸಾಮ(ರ)ರವರ ಸೈನ್ಯವು ಕೂಡ ಹೊರಟಿರಲಿಲ್ಲ. ಹಝ್‌ರತ್ ಉಮರ್(ರ) ರವರ ಕೋರಿಕೆಯ ಮೇರೆಗೆ ಹಝ್‌ರತ್ ಅಬೂಬಕರ್(ರ) ಗಟ್ಟಿ ಧ್ವನಿಯಲ್ಲಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ನಿಧನ ಹೊಂದಿದ್ದಾರೆ ಎಂದು ಹೇಳಿದರು. ಇದನ್ನು ವಿಷಧಿಕರಿಸಲು **ಮಾ ಮುಹಮ್ಮದುನ್ ಇಲ್ಲಾ ರಸೂಲ್** ಅನ್ನು ಪ್ರಸ್ತಾಪಿಸುತ್ತಾರೆ. ಈಗ ಸಹಾಬಿಗಳ ಭ್ರಮೆಯಲ್ಲೂ ಹಝ್‌ರತ್ ಈಸಾ(ಅ.ಸ) ರವರು ಜೀವಂತವಾಗಿದ್ದಾರೆ ಎಂದು ಇರುತ್ತಿದ್ದರೆ ಅವರೆಲ್ಲರು ಖಂಡಿತವಾಗಿಯೂ ಹೇಳುತ್ತಿದ್ದರು. ಆದರೆ ಎಲ್ಲರೂ ಮೌನವಾಗಿದ್ದರು ಮತ್ತು ಮಾರುಕಟ್ಟೆಗಳಲ್ಲಿ ಈ ಆಯತ್ ಅನ್ನು ಪಠಿಸುತ್ತಿದ್ದರು ಮತ್ತು ಈ ಆಯತ್ ಈಗಲೇ ಅವತರಿಸಿದಂತೆ ತೋರುತ್ತಿತ್ತು ಎಂದು ಹೇಳುತ್ತಿದ್ದರು.

ಮುಆದ್‌ಅಲ್ಲಾಹ್ (ದೇವರ ಆಶ್ರಯ ಬೇಡುತ್ತೇನೆ), ಸಹಾಬಿಗಳು ಕಪಟವಿಶ್ವಾಸಿಗಳಾಗಿರಲಿಲ್ಲ ಅವರು ಹಝ್‌ರತ್ ಅಬೂಬಕರ್(ರ) ರವರಿಗೆ ಹೆದರಿ ಮೌನವವಹಿಸಿ ಹಝ್‌ರತ್ ಅಬೂಬಕರ್(ರ) ರವರನ್ನು ರದ್ದುಗೊಳಿಸಲಿಲ್ಲ. ಇಲ್ಲ ಸತ್ಯಸಂಗತಿ ಏನೆಂದರೆ ಹಝ್‌ರತ್ ಅಬೂಬಕರ್(ರ) ರವರು ಪ್ರಸ್ತಾಪಿಸಿದ ವಿಷಯವಾಗಿತ್ತು. ಆದ್ದರಿಂದ ಎಲ್ಲಾ ಸಹಾಬಗಳು ಅವರ ಮಾತನ್ನು ಅಂಗೀಕರಿಸಿದರು. ಇದು ಸಹಾಬಿಗಳ ಒಮ್ಮತವಾಗಿತ್ತು. ಪೈಗಂಬರ್(ಸ) ಮತ್ತೆ ಬರುತ್ತಾರೆ ಎಂದು ಹಝ್‌ರತ್ ಉಮರ್(ರ) ಕೂಡ ಹೇಳುತ್ತಿದ್ದರು. ಈ ತರ್ಕವು ಪರಿಪೂರ್ಣವಾಗದಿದ್ದರೆ (ಮತ್ತು ಅದು ಪರಿಪೂರ್ಣವಾಗುವುದಾದರೆ, ಇದಕ್ಕೆ ಹೊರತಾಗಿಲ್ಲ, ಏಕೆಂದರೆ ಹಝ್‌ರತ್ ಈಸ(ಅ) ಜೀವಂತವಾಗಿ ಆಕಾಶಕ್ಕೆ ಹೋಗಿದ್ದರೆ ಮತ್ತು ಪುನಃ ಹಿಂದಿರುಗಿ ಬರುತ್ತಿದ್ದರೆ ಈ ವಾದವು ತಮಾಷೆಯಾಗುತ್ತಿತ್ತು) ಆದರೆ ಹಝ್‌ರತ್ ಉಮರ್(ರ) ಸ್ವತಃ ಅದನ್ನು ನಿರಾಕರಿಸುತ್ತಿದ್ದರು.

**(ಮಲ್‌ಫೂಝಾತ್, ಸಂಪುಟ–1, ಪುಟ–397, ಪ್ರಕಟಿತ ಖಾದಿಯಾನ್ 2018)**

لَآ اِلٰهَ اِلَّا اللّٰهُ مُحَمَّدٌ رَّسُوْلُ اللّٰه

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِي الْعَالَمِ ۞ شَرُّ السُّمُوْمِ عَدَاوَةُ الصُّلَحَاءِ

**ಒಂದು ಸಾವಿರ ರೂಪಾಯಿಯ ಗೌರವಾನ್ವಿತ**

**ಬಹುಮಾನದ ಸವಾಲು**

**ಎಷ್ಟೆಲ್ಲ ಆರ್ಯ ಸಮಾಜದವರು ಬ್ರಿಟಿಷ್ ಇಂಡಿಯದಲ್ಲಿದ್ದಾರೆ. ಅವರ 5 ಶೇಕಡವಾದರು ನಾಲ್ಕು ವೇದಗಳನ್ನು ಸಂಸ್ಕೃತದಲ್ಲಿ ಬಲ್ಲವರಿದ್ದಾರೆ ಎಂಬುದನ್ನು ಯಾರಾದರೂ ಸಾಬೀತುಪಡಿಸಬೇಕು.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಈ ಗೌರಾನ್ವಿತ ಬಹುಮಾನದ ಪಂಥಾಹ್ವಾನ ನಾವು ಅವರ ಗ್ರಂಥ "ನಸೀಮ್ ದಾವತ್" ರೂಹಾನಿ ಖಝಾಯನ್ ಸಂಪುಟ 19 ರಿಂದ ಪ್ರಸ್ತುತಪಡಿಸುತ್ತಿದ್ದೇವೆ 1903ರ ಪ್ರಾರಂಭದಲ್ಲಿ ಖಾದಿಯಾನಿನ ಕೆಲವು ನವಮುಸ್ಲಿಮ್ ಆರ್ಯ ಮಿತ್ರರು ಅತ್ಯಂತ ನಿಷ್ಠೆ ಮತ್ತು ಅನುಕಂಪದ ಭಾವನೆಯೊಂದಿಗೆ ಒಂದು ಪತ್ರಿಕೆ "ಆರ್ಯ ಸಮಾಜ ಮತ್ತು ಖಾದಿಯಾನ್‌ನ ಪ್ರತಿಸ್ಪರ್ಧಿ "ಶೀರ್ಷಿಕೆಯಿಂದ ಪ್ರಕಟಿಸಿದರು. ಅತ್ಯಂತ ಸಹನೆ ಮತ್ತು ಸಜ್ಜನಿಕೆಯಿಂದ ಆರ್ಯ ಹಿಂದೂಗಳನ್ನು ಮತ್ತು ಸಿಖ್ಖರನ್ನು ಆಹ್ವಾನಿಸಿದರು. ಪರಸ್ಪರ ಐಕ್ಯತೆಯೊಂದಿಗೆ ಯಾವುದೇ ಒಂದು ಮಾರ್ಗ ಹುಡುಕಿ ಕಂಡು ಹಿಡಿಯಬೇಕು. ಆ ಮೂಲಕ ಯಾವ ಧರ್ಮ ಸತ್ಯವಾಗಿದೆ ಎಂದು ತಿಳಿಯುವಂತಾಗಬೇಕು. ಆ ನವ ಮುಸ್ಲಿಮರು ಈ ಸಂಬಂಧ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರೊಂದಿಗೆ ಯಾವುದೇ ಸಲಹೆ ಪಡೆಯಲಿಲ್ಲ. ತಮ್ಮದೇ ಪ್ರಕಾರ ಪತ್ರಿಕೆ ಹೊರಡಿಸಿದರು. ಖಾದಿಯಾನಿನ ಆರ್ಯ ಸಮಾಜದವರು ಭಾವಿಸಿದರು. ಈ ಪತ್ರಿಕೆ ಹೊರಡಿಸುವುದರಲ್ಲಿ ಅವಶ್ಯವಾಗಿ ಹಝ್ರತ್ ಮಸೀಹ್ ಮೌಊದ್(ಅ) ರವರ ಕೈವಾಡ ಇರಬಹುದು ಎಂದು. ಹಾಗೆ ಅವರು ಅದರ ಉತ್ತರವಾಗಿ "ಖಾದಿಯಾನಿ ಪೋಪಿನ ಚೇಲಾಗಳ ಒಂದು ಕುಚೇಷ್ಟೆಗೆ ಉತ್ತರ "ಶೀರ್ಷಿಕೆಯೊಂದಿಗೆ ಪತ್ರಿಕೆ ಹೊರಡಿಸಿದರು ಶೀರ್ಷಿಕೆಯಿಂದಲೇ ತಿಳಿಯಬಹುದಾಗಿತ್ತು. ಅವರು ತಮ್ಮ ಎಲ್ಲ ಕೋಪತಾಪಗಳನ್ನು ಹಝ್ರತ್ ಮಸೀಹ್ ಮೌಊದ್(ಅ) ರವರ ಮೇಲೆ ಹಾಕಿದ್ದರು. ಅಷ್ಟಕ್ಕೆ ಅವರು ನಿಲ್ಲಲಿಲ್ಲ. ಬದಲು ಅಲ್ಲಿಂದ ಮುಂದುವರೆದು ನಮ್ಮ ಪ್ರೀತಿಯ ನೇತಾರರಾದ, ಎರಡೂ ಲೋಕಗಳ ಸರದಾರರಾದ ಸಯ್ಯದ್‌ನಾ ಹಝ್ರತ್ ಮುಹ್ಮದ್ ಮುಸ್ತಫಾ(ಸ) ರವರಿಗೂ ಸಹ ಬಯ್ಯತೊಡಗಿದರು. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರು ಅದರ ವಿವರ ನೀಡುತ್ತಾ ಹೇಳಿದರು.

### ಅಲ್ಲಾಹನು ನನಗೆ ಸಂಬೋಧಿಸಿ ಹೇಳಿರುವನು ಆ ಬರಹಕ್ಕೆ ಉತ್ತರ ನೀಡು.

"ಇಂದು ಖಾದಿಯಾನಿನ ಆರ್ಯ ಸಮಾಜದ ಒಂದು ಪತ್ರಿಕೆ ನನ್ನ ಗಮನಕ್ಕೆ ಬಂದಿದೆ. ಅದರ ಮೇಲೆ 7 ಫೆಬ್ರವರಿ 1903 ತಾರೀಖು ನಮೂದಿಸಲಾಗಿದೆ ಜಶ್ಮನೂರ್ ಮುದ್ರಣಾಲಯ ಅಮೃತ್ಸರದಲ್ಲಿ ಅದನ್ನು ಮುದ್ರಿಸಲಾಗಿದೆ. ಅದರ ಶೀರ್ಷಿಕೆ ಪತ್ರಿಕೆಯ ಮೇಲೆ ಬರೆಯಲಾಗಿ. "ಖಾದಿಯಾನಿ ಪೋಪನ ಚೆಲಾಗಳ ಒಂದು ಕುಚೇಷ್ಟೆಗೆ ಉತ್ತರ "ಅ ಪತ್ರಿಕೆಯಲ್ಲಿ ನಮ್ಮ ನೇತಾರ ಒಡೆಯ ಹಝ್ರತ್ ರಸೂಲುಲ್ಲಾಹ್(ಸ) ರವರ ಬಗ್ಗೆ, ನನ್ನ ಬಗ್ಗೆ ಮತ್ತು ನನ್ನ ಜಮಾಅತಿನ ಆದರಣಿಯ ಬಾಂಧವರ ಬಗ್ಗೆ ನಿಂದಿಸುವ ಎಷ್ಟೊಂದು ಕಠಿಣ ಪದಗಳನ್ನು ಮತ್ತು ಬಯ್ಗುಳಗಳನ್ನು ಬಳಸಿದ್ದಾರೆಂದರೆ ಒಂದು ಹಂತದಲ್ಲಿ ಇಂತಹ ಜನರಿಗೆ ಉತ್ತರವೇ ನೀಡಬಾರದು ಎನಿಸುತ್ತಿತ್ತು. ಆದರೆ ಅಲ್ಲಾಹನು ತನ್ನ ವಿಶೇಷ ದಿವ್ಯವಾಣಿ ಮೂಲಕ ನನಗೆ ಸಂಬೋಧಿಸಿ ಹೇಳಿದನು. ಈ ಬರಹಕ್ಕೆ ಉತ್ತರ ನೀಡು. ಉತ್ತರ ನೀಡಲು ನಾನು ನಿನ್ನ ಜೊತೆಗಿದ್ದೇನೆ. ಆಗ ನನಗೆ ಈ ಸುವಾರ್ತೆಯಿಂದ ತುಂಬ ಸಂತೋಷ ದೊರೆಯಿತು. ಉತ್ತರ ನೀಡುವುದರಲ್ಲಿ ನಾನು ಒಬ್ಬಂಟಿಯಾಗಿ ಉಳಿದಿಲ್ಲ ಎಂದು. ಆಗ ನಾನು ನನ್ನ ದೇವನಿಂದ ಶಕ್ತಿ ಪಡೆದು ಹೇಳಿರುವೆನು. ಮತ್ತು ಅವನ ಆತ್ಮದ ಸಹಾಯದೊಂದಿಗೆ ಈ ಪತ್ರಿಕೆ ಬರೆದಿರುವೆನು. ಅಲ್ಲಾಹನು ನನಗೆ ನೆರವು ನೀಡಿದಂತೆ ನಾನು ಬಯಸಿದ್ದೇನೆಂದರೆ ನನ್ನ ಗುರುಗಳಾದ ಪ್ರವಾದಿ(ಸ) ಮತ್ತು ನನಗೆ ನೀಡಿದ ಬಯ್ಗುಳಗಳನ್ನು ಉಪೇಕ್ಷಿಸಿ ಮೃದು ಭಾವನೆಯಿಂದ ಉತ್ತರ ನೀಡುವೆನು ಮತ್ತು ಈ ವಿಚಾರ ಅವನ ಸುಪರ್ಧಿಗೆ ಬಿಡುವೆನು. (ನಸೀಮ್ ದಾವತ್, ರೂಹಾನಿ ಖಝಾಇನ್, ಸಂಪುಟ-19, ಪುಟ-363).

ಅಹ್ಮದಿಯರಾದ ಆರ್ಯರು ಮೊದಲು ನಾಲ್ಕು ವೇದಗಳನ್ನು ಅಧ್ಯಯನ ಮಾಡಬೇಕಾಗಿತ್ತು. ಮತ್ತು ಇಸ್ಲಾಮಿ ಶಿಕ್ಷಣಕ್ಕೆ ತುಲನೆ ಮಾಡಿ ನೋಡಬೇಕಾಗಿತ್ತು. ಆಗಲೂ ಇಸ್ಲಾಂ ಧರ್ಮವನ್ನು ಸತ್ಯವೆಂದು ಭಾವಿಸಿದರೆ ನಿಸ್ಸಂಶಯವಾಗಿ ಮುಸಲ್ಮಾನನಾಗಬಹುದಿತ್ತು. ಎಂದು ಆ ಪತ್ರಿಕೆಯಲ್ಲಿ ಆರೋಪ ಮಾಡಿದ್ದರು. ಅದಕ್ಕೆ ಉತ್ತರ ನೀಡುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು:

### ಆರ್ಯ ಆದವರು ಯಾರಿಂದ ವೇದಗಳನ್ನು ಓದಿದ್ದಾರೆ? ಮೊದಲು ಅವರು ತಾನು ವೇದ ಓದಿದ ಬಗ್ಗೆ ಸಾಕ್ಷಿ ನೀಡಲಿ.

ಈಗ ನಾವು ಆರ್ಯ ಸಾಹಿಬರುಗಳ ಆ ಅಪಾದನೆಗೆ ಉತ್ತರ ನೀಡುತ್ತೇವೆ. ಅವರು ತಮ್ಮ ಪತ್ರಿಕೆಯಲ್ಲಿ ನಮ್ಮ ಜಮಾಅತಿನ ನವಮುಸ್ಲಿಮ್ ಆರ್ಯರ ಮೇಲೆ ಮಾಡಿದ್ದರು ಆಗ ನಾವು ಸರಿ ಎಂದು ಭಾವಿಸುತ್ತಿದ್ದೆವು. ಆದರೆ ವಾಸ್ತವವಾಗಿ ಅವರು ಇತರ ಮುಸಲ್ಮಾನರಾಗಿದ್ದರು. ಅವರ ಪ್ರಕಾರ ಮೊದಲು ನಾಲ್ಕೂ ವೇದಗಳನ್ನು ಓದಬೇಕಿತ್ತು. ವೇದಗಳನ್ನು ಓದಿದ ನಂತರ ಆರ್ಯ ಧರ್ಮಕ್ಕೆ ಮತ್ತು ಇಸ್ಲಾಂ ಧರ್ಮಕ್ಕೆ ತುಲನೆ ಮಾಡಿ ನೊಡಬೇಕಿತ್ತು. ಮತ್ತೆ ಸತ್ಯಸಂಶೋಧನೆ ನಂತರ ಮುಸಲ್ಮಾನನಾಗಬೇಕಿತ್ತು. ಅವರಿಗೆ ತಿಳಿದಿರಲಿ ಎಲ್ಲಿಯವರೆಗೆ ನಮ್ಮ ನವ ಮುಸ್ಲಿಂ ಆರ್ಯರ ಸತ್ಯಸಂಶೋಧನೆಯ ಪ್ರಶ್ನೆ ಇದೆ. ಅವರು ಅದನ್ನು ಪಾಲಿಸಿಯೇ ಇಸ್ಲಾಂ ಧರ್ಮ ಸ್ವೀಕರಿಸಿದ್ದಾರೆ. ಉಳಿದ ಅಪಾದನೆ ಎಂದರೆ ನಾಲ್ಕು ವೇದಗಳನ್ನು ಎಂದು ಓದಿದ್ದಾರೆ? ಈ ಅಪಾದನೆ ಸರಿಯಾಗಬೇಕಾದರೆ ಮೊದಲು ಆರೋಪ ಮಾಡುವವರು ತಾವು ವೇದಗಳನ್ನು ಓದಿದ ಸಾಕ್ಷ ನೀಡಬೇಕಾಗಿತ್ತು. ವಿಷಾದದ ಸಂಗತಿ ಎಂದರೆ ಅಪಾದನೆ ಮಾಡುವಾಗ ಅವರು ನ್ಯಾಯ ಮತ್ತು ದೇವಭಯದಿಂದ ಕಾರ್ಯಕೈಗೊಳ್ಳಲಿಲ್ಲ. ಅವರು ಸತ್ಯಪಾಲನೆಯಿಂದ ಈ ಆರೋಪ ಮಾಡುವುದಾದರೆ ನಮಗೆ ತೋರಿಸಲಿ. ಅವರಲ್ಲಿ ರಮ ರಾಮ ಎಂದು ಜಪಿಸುವ ಎಲ್ಲ ಜನರು, ಅವರು ಸನಾತನ ಧರ್ಮಿಯರಾಗಿದ್ದರು. ಕೆಲ ವರ್ಷದಿಂದ ಅವರು ಆರ್ಯರಾಗಿದ್ದಾರೆ. ಅವರು ಯಾವ ಪಂಡಿತನಿಂದ ವೇದಗಳನ್ನು ಓದಿದ್ದಾರೆ. ಏಕೆಂದರೆ ಧರ್ಮ ಪರಿವರ್ತನೆಗೋಸ್ಕರ ಮೊದಲು ವೇದಗಳನ್ನು ಓದುವುದು ಅವಶ್ಯವೆಂದಾದರೆ, ಈ ಶರತ್ತಿನಿಂದ ಆರ್ಯರು ಹೇಗೆ ಹೊರಗುಳಿಯಲು ಸಾಧ್ಯ? (ಅದೇ ಪುಟ 367).

### ಇಡೀ ಭಾರತದಲ್ಲಿ ಕೆಲವರನ್ನು ಬಿಟ್ಟರೆ ವೇದವನ್ನು ಬಲ್ಲವರನ್ನು ಬೆರಳವಣಿಕೆಯಲ್ಲಿ ಗಣಿಸಬಹುದು.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಯಾವ ಅಪಾದನೆ ಆರ್ಯರು ನವಮುಸ್ಲಿಮರ ಬಗ್ಗೆ ಮಾಡಿರುವರು. ಅದೇ ಅಪಾದನೆ ಅವರ ಮೇಲೂ ಸಾಧಕವಾಗುತ್ತದೆ. ಏಕೆಂದರೆ ಒಂದು ಕಾಲವಿತ್ತು. ಅವರು ರಾಮಚಂದ್ರ, ಕೃಷ್ಣ ಮತ್ತು ಇತರ ಅವತಾರಪುರುಷರನ್ನು ಪರಮೇಶ್ವರ ಎಂದು ತಿಳಿಯುತ್ತಿದ್ದರು. ಮೂರ್ತಿಪೂಜೆಯನ್ನು ವೇದದ ಮಾರ್ಗದರ್ಶನ ಎಂದು ಭಾವಿಸುತ್ತಿದ್ದರು. ಎಲ್ಲದ್ದಕ್ಕಿಂತ ಹೆಚ್ಚೆಂದರೆ ವೇದಗಳ ತತ್ವ ಅನುಸಾರವಾಗಿ ತನ್ನನ್ನು ಪರಮೇಶ್ವರ ಕಡೆಯಿಂದ ಬಂದವರು ಎಂದು ಭಾವಿಸುತ್ತಿದ್ದರು. ಆರ್ಯ ಆದ ನಂತರ ಆ ಎಲ್ಲ ಭಾವನೆಗಳು ಪಲ್ಲಟಗೊಂಡವು. ಪರಮೇಶ್ವರನಿಂದ ಬಂದವರು, ಅನಾದಿ ಮತ್ತು ಸೃಷ್ಟಿಯಲ್ಲದೆ ಸ್ವಯಂ ಅನಾದಿ ಮತ್ತು ಪರಮೇಶ್ವರನೊಂದಿಗೆ ಭಾಗಿಯಾದರು. ಅಂದರೆ ಇಷ್ಟೆಲ್ಲ ಕ್ರಾಂತಿ ಮಾಡಲು ಅವರ ವಿಶ್ವಾಸದ ಪ್ರಕಾರ ಅವರಿಗೆ ಅವಶ್ಯವಾಗಿರಲಿಲ್ಲವೇ? ಅವರಲ್ಲಿ ಪ್ರತಿಯೊಬ್ಬರು ನಾಲ್ಕು ವೇದಗಳನ್ನು ಓದಬೇಕಿತ್ತು. ಮತ್ತೆ ತನ್ನ ಪುರಾತನ ಧರ್ಮ ಸನಾತನ ಧರ್ಮವನ್ನು ಬಿಟ್ಟು ಆರ್ಯ ಸಮಾಜಕ್ಕೆ ಸೇರಬೇಕಿತ್ತು. ಹಾಗೆ ಖಾದಿಯಾನಿನ ಆರ್ಯ ಸಮಾಜದವರು ನವ ಮುಸ್ಲಿಂ ಆರ್ಯ ಮೇಲೆ ಅಪಾದನೆ ಮಾಡುವ ಸಮಯ ಸುಳ್ಳು ಮತ್ತು ಸತ್ಯವನ್ನು ಮರೆಮಾಚಲಿಲ್ಲ ಎಂದರೆ ನಮಗೆ ತೋರಿಸಿಕೊಡಲಿ. ಅವರ ಆರ್ಯ ಸಂಘಟನೆಯಲ್ಲಿ ಎಷ್ಟು ಜನರು (ಋಗ್ವೇದ, ಯಜರ್‌ವೇದ ಮತ್ತು ಸಾಮವೇದ ಹಾಗೂ ಅಥರ್‌ವೇದ) ಎಲ್ಲ ತಿಳಿದವರಿದ್ದಾರೆ? ಈ ವಿಷಯದಲ್ಲಿ ಅವರು ಸತ್ಯವಂತರಾದರೆ, ತಮ್ಮ ಸಂಘಟನೆಯ ಎಲ್ಲರೂ ವೇದ ಪಠಿಸಿದ್ದನ್ನು ಸಾಬೀತುಪಡಿಸಿದರೆ, ಕನಿಷ್ಠಮಟ್ಟ ನಾವು ಅವರಿಗೆ ಸಜ್ಜನ ಮನುಷ್ಯರು ಎಂದು ನಂಬುವೆವು. ಅವರು ತನ್ನ ಅಪಾದನೆಯಲ್ಲಿ ಇಂತಹ ಸುಳ್ಳು ಮಾತನ್ನು ಪ್ರಸ್ತಾಪಿಸಲಿಲ್ಲ. ಸ್ವಯಂ ಅವರು ಪಾಲನೆ ಮಾಡುತ್ತಿರಲಿಲ್ಲ. ಇದು ಯಾರಿಗೆ ತಾನೇ ತಿಳಿದಿಲ್ಲ. ಖಾದಿಯಾನಿನ ಎಲ್ಲ ಜನರಿಗೆ ಈ ಗುಂಪು ಒಂದು ಮಾರುಕಟ್ಟೆಯ

*(ಪುಟ 09 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ನೆನಪಿಡಿರಿ, ಸೈನಿಕರ ಆಧಿಕ್ಯದ ಕಾರಣದಿಂದ ಅಲ್ಲಾಹನು ತನ್ನ ಪ್ರವಾದಿ(ಸ)ರೊಂದಿಗೆ ನಮಗೆ ವಿಜಯ ಮತ್ತು ಸಹಾಯ ದಯಪಾಲಿಸಿರಲಿಲ್ಲ. ನಮ್ಮ ಸ್ಥಿತಿ ಏನಾಗಿತ್ತು ಎಂದರೆ, ನಾವು ಅವರ ಜೊತೆ ಯುದ್ಧ ಮಾಡುತ್ತಿದ್ದಾಗ ನಮ್ಮ ಬಳಿ ಕೇವಲ ಎರಡು ಕುದುರೆಗಳು ಇರುತ್ತಿದ್ದುವು ಮತ್ತು ಒಂಟೆಗಳ ಮೇಲೂ ಸರದಿ ಪ್ರಕಾರ ಸವಾರರಾಗುತ್ತಿದ್ದೆವು. ಉಹದ್ ಯುದ್ಧದಂದು ನಾವು ಹಝ್ರ್‌ರತ್ ಪೈಗಂಬರ್(ಸ)ರ ಜೊತೆಗೆ ಇದ್ದೆವು. ನಮ್ಮ ಬಳಿ ಒಂದೇ ಕುದುರೆಯಿತ್ತು. ಅದರಲ್ಲಿ ಹಝ್ರ್‌ರತ್ ಪೈಗಂಬರ್(ಸ) ಸವಾರರಾಗಿದ್ದರು. ಆದಾಗ್ಯೂ ಅಲ್ಲಾಹನು ನಮಗೆ ನಮ್ಮ ಶತ್ರುಗಳ ಮೇಲೆ ವಿಜಯ ದಯಪಾಲಿಸುತ್ತಿದ್ದನು ಮತ್ತು ನಮಗೆ ನೆರವು ನೀಡುತ್ತಿದ್ದನು. ಹೇ ಅಮ್ರ್, ನೆನಪಿಡಿರಿ, ಪಾಪಗಳನ್ನು ಇಷ್ಟಪಡದವನು ಅಲ್ಲಾಹನನ್ನು ಅತ್ಯಂತ ಹೆಚ್ಚು ಅನುಸರಿಸುವವನಾಗಿದ್ದಾನೆ. ಸ್ವತಃ ಕೂಡ ಅಲ್ಲಾಹನ ಅನುಸರಣೆ ಮಾಡಿರಿ ಮತ್ತು ತನ್ನ ಜೊತೆಗಾರರೊಡನೆ ಕೂಡ ಅಲ್ಲಾಹನನ್ನು ಅನುಸರಿಸಲು ಆಜ್ಞೆನೀಡಿರಿ.**

**ರಸೂಲುಲ್ಲಾಹ್[ಸ] ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ್, ಸಿದ್ದೀಖೆ ಅಕ್ಬರ್ ಹಝ್ರ್‌ರತ್ ಅಬೂಬಕರ್ ಸಿದ್ದೀಖ್[ರ]ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **26–08–2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಆಕ್ರಮಣ ನಡೆಸುವ ವಿರೋಧಿಗಳನ್ನು ತಡೆಯಲು ಹಝ್ರ್‌ರತ್ ಅಬೂಬಕರ್[ರ] ಸಿರಿಯದ ಕಡೆ ಕಳುಹಿಸಿದ ಸೈನ್ಯಗಳ ಪ್ರಸ್ತಾಪ ನಡೆಯುತ್ತಿತ್ತು. ಮೂರರ ಪ್ರಸ್ತಾಪ ಕಳೆದ ಖುತ್ಬದಲ್ಲಿ ನಡೆಸಿದ್ದೆ. ನಾಲ್ಕನೇ ಸೇನೆ ಹಝ್ರ್‌ರತ್ ಅಮ್ರ್ ಬಿನ್ ಆಸ್(ರ)ರದ್ದಾಗಿತ್ತು. ಅದರ ಬಗ್ಗೆ ಹೀಗೆ ಬರೆಯಲಾಗಿದೆ: ಹಝ್ರ್‌ರತ್ ಅಬೂಬಕರ್(ರ) ನಾಲ್ಕನೇ ಸೇನೆಯನ್ನು ಸಿರಿಯದ ಕಡೆಗೆ ಹಝ್ರ್‌ರತ್ ಅಮ್ರ್ ಬಿನ್ ಆಸ್(ರ)ರ ನಾಯಕತ್ವದಲ್ಲಿ ಕಳುಹಿಸಿದ್ದರು. ಸಿರಿಯಗೆ ಹೋಗುವುದಕ್ಕೆ ಮುಂಚೆ ಖುಝ್ಝಾಅ ಗೋತ್ರದ ಒಂದು ಭಾಗದ ಸದಖಗಳನ್ನು ವಸೂಲು ಮಾಡಲಿಕ್ಕಾಗಿ ಹಝ್ರ್‌ರತ್ ಅಮ್ರ್ ಬಿನ್ ಆಸ್(ರ)ರನ್ನು ನೇಮಿಸಲಾಗಿತ್ತು. ಮತ್ತೊಂದು ಅರ್ಧ ಭಾಗದ ಸದಖಗಳನ್ನು ವಸೂಲು ಮಾಡಲಿಕ್ಕಾಗಿ ಹಝ್ರ್‌ರತ್ ವಲೀದ್ ಬಿನ್ ಉಖ್ಬ(ರ)ರನ್ನು ನೇಮಿಸಲಾಗಿತ್ತು. ಹಝ್ರ್‌ರತ್ ಅಬೂಬಕರ್(ರ) ಸಿರಿಯದ ಕಡೆಗೆ ವಿವಿಧ ಸೈನ್ಯಗಳನ್ನು ಕಳುಹಿಸಲು ಉದ್ದೇಶಿಸಿದಾಗ, ಹಝ್ರ್‌ರತ್ ಅಮ್ರ್ ಬಿನ್ ಆಸ್(ರ)ರನ್ನು ಸಿರಿಯಕ್ಕೆ ಕಳುಹಿಸಲು ಅವರು ಇಚ್ಛಿಸಿದ್ದರು. ಆದರೆ ಹಝ್ರ್‌ರತ್ ಅಮ್ರ್ ಬಿನ್ ಆಸ್(ರ) ಧರ್ಮತ್ಯಾಗದ ಪಿತೂರಿಯನ್ನು ಕೊನೆಗೊಳಿಸಲು ಮಾಡಿದ ಕಾರ್ಯ ಸಾಧನೆಯ ಕಾರಣದಿಂದ ಅವರಿಗೆ ಆಯ್ಕೆಯ ಅಧಿಕಾರವನ್ನು ನೀಡಲಾಯಿತು. ಬೇಕಾದರೆ ಖುಝ್ಝಾಅದಲ್ಲೇ ತಂಗಬಹುದು ಅಥವಾ ಸಿರಿಯದ ಕಡೆಗೆ ಹೋಗಿ ಅಲ್ಲಿಯ ಮುಸ್ಲಿಮರಿಗೆ ಬೆಂಬಲ ಕೊಡಬಹುದು. (ಅಲ್‌ಬಿದಾಯ ವನ್ನಹಾಯ, ಸಂಪುಟ–4, ಭಾಗ–7, ಪುಟ–3, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001) (ಹಝ್ರ್‌ರತ್ ಸಯ್ಯಿದುನಾ ಅಬೂಬಕರ್ ಸಿದ್ದೀಖ್(ರ), ಮುಹಮ್ಮದ್ ಹುಸೈನ್ ಹೈಕಲ್ ಅನುವಾದಕ, ಪುಟ–340, ಬುಕ್ ಕಾರ್ನರ್ ಶೋರೂಮ್ ಜ್ಹೇಲಮ್)

ಹೀಗೆ ಹಝ್ರ್‌ರತ್ ಅಬೂಬಕರ್(ರ) ಹಝ್ರ್‌ರತ್ ಅಮ್ರ್ ಬಿನ್ ಆಸ್‌ರಿಗೆ ಹೀಗೆ ಪತ್ರ ಬರೆದರು: ಎಲೈ ಅಬೂ ಅಬ್ದುಲ್ಲಾಹ್, ನಿಮಗೆ ಇಹಲೋಕ ಮತ್ತು ಪರಲೋಕ ಜೀವಿತದಲ್ಲಿ ಅತ್ಯುತ್ತಮವಾಗಿರುವಂತಹ ಒಂದು ಕೆಲಸದಲ್ಲಿ ನಿಮ್ಮನ್ನು ನಿರತಗೊಳಿಸಲು ಬಯಸುತ್ತೇನೆ. ಆದರೆ ನೀವು ಈಗ ಮಾಡುತ್ತಿರುವ ಕಾರ್ಯ ನಿಮಗೆ ಹೆಚ್ಚು ಪ್ರಿಯವೆಂದಾದರೆ ನಿಮ್ಮ ಇಷ್ಟ.

ಇದಕ್ಕೆ ಮರುತ್ತರವಾಗಿ ಹಝ್ರ್‌ರತ್ ಅಮ್ರ್ ಬಿನ್ ಆಸ್(ರ) ಹೀಗೆ ಪತ್ರ ಬರೆದರು: ನಾನು ಇಸ್ಲಾಮಿನ ಬಾಣಗಳಲ್ಲಿ ಒಂದು ಬಾಣವಾಗಿರುವೆನು. ಅಲ್ಲಾಹನ ನಂತರ ಈಗ ನಿಮಗೆ ಮಾತ್ರ ಈ ಬಾಣಗಳನ್ನು ಚಲಾಯಿಸಬಹುದು ಮತ್ತು ಒಟ್ಟುಸೇರಿಸಬಹುದು. ಆ ಬಾಣಗಳಲ್ಲಿ ಅತ್ಯಂತ ಕಟುವಾದ, ಭಯಾನಕವಾದ ಮತ್ತು ಅತ್ಯುತ್ತಮವಾದ ಬಾಣವನ್ನು, ಅಪಾಯವಿದೆ ಎಂದು ನಿಮಗೆ ಅನಿಸುವ ಕಡೆಗೆ ಚಲಾಯಿಸಿರಿ. (ತಾರೀಖ್ ಅತ್ತಬರಿ, ಭಗ–3, ಪುಟ–332, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2012)

ಎಂದರೆ, ನಾನು ಎಲ್ಲ ವಿಧದ ಅಪಾಯದಲ್ಲಿ ಹೋಗಲು ತಯಾರಿದ್ದೇನೆ.

ಹಝ್ರ್‌ರತ್ ಅಮ್ರ್ ಬಿನ್ ಅಸ್ ಮದೀನಾಕ್ಕೆ ಬಂದಾಗ, ಹಝ್ರ್‌ರತ್ ಅಬೂಬಕರ್(ರ) ಅವರು ಮದೀನಾದಿಂದ ಹೊರಗೆ ಹೋಗಿ ಶಿಬಿರ ಹೂಡಲು ಆದೇಶಿಸಿದರು, ಇದರಿಂದ ಜನರು ತಮ್ಮೊಂದಿಗೆ ಸೇರುತ್ತಾರೆ. ಖುರೈಷಿಗಳ ಗಣ್ಯರಿಂದ ಅನೇಕ ಜನರು ಅವರೊಂದಿಗೆ ಬಂದು ಸೇರಿಕೊಂಡರು. ಸಿರಿಯದ ಕಡೆಗೆ ಹೋಗಬೇಕೆಂದು ತೀರ್ಮಾನವಾದಾಗ ಅಮ್ರ್ ಬಿನ್ ಆಸ್(ರ)ರನ್ನು ಮದೀನಕ್ಕೆ ಕರೆಯಲಾಯಿತು. ಆಗ ಜನರು ಅವರ ಬಳಿಗೆ ಬಂದು ಒಟ್ಟು ಸೇರಲಿಕ್ಕಾಗಿ ಮದೀನದ ಹೊರಗೆ ಶಿಬಿರ ಹೂಡಲು ಅವರನ್ನು ಆದೇಶಿಸಲಾಯಿತು. ಖುರೈಶಿನ ಅನೇಕ ಶ್ರೇಷ್ಠ ಜನರು ಅವರ ಸುತ್ತ ಒಟ್ಟುಸೇರಿದರು. ಹಝ್ರ್‌ರತ್ ಅಮ್ರ್ ಬಿನ್ ಆಸ್(ರ) ಹೊರಡಲು ನಿರ್ಧರಿಸಿದಾಗ ಹಝ್ರ್‌ರತ್ ಅಬೂಬಕರ್(ರ) ಅವರಿಗೆ ವಿದಾಯ ಹೇಳಲು ಹೊರಟರು ಮತ್ತು ಹೀಗೆ ನಿರ್ದೇಶನಗಳನ್ನು ಕೊಟ್ಟರು: ಹೇ ಅಮ್ರ್, ನೀವು ಅಭಿಪ್ರಾಯ ಮತ್ತು ಅನುಭವದ ಮಾಲಿಕರಾಗಿದ್ದೀರಿ. ಯುದ್ಧದ ಬಗ್ಗೆ ನಿಮಗೆ ಬಹಳ ಅರಿವಿದೆ. ನೀವು ನಿಮ್ಮ ಸಮುದಾಯದ ಶ್ರೇಷ್ಠ ಮತ್ತು ಸಾತ್ವಿಕ ಮುಸ್ಲಿಮರೊಡನೆ ಹೋಗುತ್ತಿದ್ದೀರಿ ಮತ್ತು ನೀವು ನಿಮ್ಮ ಸಹೋದರರನ್ನು ಭೇಟಿಯಾಗುವಿರಿ. ಆದ್ದರಿಂದ ಅವರಿಗೆ ಒಳಿತು ಮಾಡುವುದರಲ್ಲಿ ಅಸಡ್ಡೆ ತೋರಿಸಬೇಡ. ನಿಮ್ಮ ಸಲಹೆ ಶ್ಲಾಘನೀಯ ಮತ್ತು ಕೊನೆಗೆ ಅನುಗ್ರಹೀತವಾಗಿರಬಹುದು. ಅದನ್ನು ನಿಸ್ಸಂಶಯವಾಗಿಯೂ ಉಪಯೋಗಿಸಿರಿ. ಆದರೆ ಅವರ ಉತ್ತಮ ಸಲಹೆಗಳನ್ನು ತಡೆಯಬೇಡಿರಿ. ಹಝ್ರ್‌ರತ್ ಅಮ್ರ್ ಬಿನ್ ಆಸ್(ರ) ಹೇಳಿದರು: ನನ್ನ ಬಗ್ಗೆ ನಿಮ್ಮ ಭಾವನೆಯನ್ನು ನಾನು ಸತ್ಯಪಡಿಸಿ ತೋರಿಸಿದರೆ ಮತ್ತು ನಿಮಗೆ ನನ್ನ ಬಗ್ಗೆ ಇರುವ ಅಭಿಪ್ರಾಯ ತಪ್ಪಾಗದೇ ಇರುವುದಾದರೆ ಎಷ್ಟು ಚೆನ್ನ. ಹಝ್ರ್‌ರತ್ ಅಮ್ರ್ ಬಿನ್ ಆಸ್(ರ) ತನ್ನ ಸೇನೆಯೊಂದಿಗೆ ಹೊರಟರು. ಸೇನೆಯಲ್ಲಿ ಆರೇಳು ಸಾವಿರ ಸೈನಿಕರಿದ್ದರು. ಅವರು ಹೋಗಲು ಉದ್ದೇಶಿಸಿದ್ದ ಸ್ಥಳ ಪೆಲಸ್ತೀನ್ ಆಗಿತ್ತು.

ಹಝ್ರ್‌ರತ್ ಅಮ್ರ್ ಬಿನ್ ಆಸ್(ರ) ಅವರು ಒಂದು ಸಾವಿರ ಯೋಧರನ್ನು ಒಳಗೊಂಡ ಸೇನೆಯನ್ನು ತಯಾರು ಮಾಡಿದರು ಮತ್ತು ಅದು ಹಝ್ರ್‌ರತ್ ಅಬ್ದುಲ್ಲಾಹ್ ಬಿನ್ ಅಮ್ರ್(ರ)ರ ನಾಯಕತ್ವದಲ್ಲಿ ರೋಮಿನ ಕಡೆಗೆ ಹೊರಟಿತು. ಈ ತಂಡ ರೋಮನರೊಡನೆ ಮುಖಾಮುಖಿಯಾಯಿತು ಮತ್ತು ಶತ್ರುಗಳ ಶಕ್ತಿಯನ್ನು ಚೂರಾಗಿಸಿ ಅವರ ಮೇಲೆ ವಿಜಯ ಸಾಧಿಸಿತು ಮತ್ತು ಕೆಲವು ಬಂಧಿಗಳೊಡನೆ ಮರಳಿ ಬಂತು.

ರೋಮಿನ ಸೈನ್ಯ ರವೇಸಿನ ನೇತೃತ್ವದಲ್ಲಿ ಮುಸ್ಲಿಮರ ಮೇಲೆ ಅಚಾನಕ್ಕಾಗಿ ದಾಳಿ ನಡೆಸಲು ತಯಾರಿ ಮಾಡುತ್ತಿದೆ ಎಂದು ಈ ಬಂಧಿಗಳನ್ನು ವಿಚಾರಿಸಿದಾಗ ಹಝ್ರ್‌ರತ್ ಅಮ್ರ್ ಬಿನ್ ಆಸ್(ರ)ರಿಗೆ ತಿಳಿದುಬಂತು. ಈ ಮಾಹಿತಿಯ ಬೆಳಕಿನಲ್ಲಿ ಅವರು ತನ್ನ ಸೇನೆಯನ್ನು ಕ್ರಮಪಡಿಸಿದರು. ರೋಮನರು ದಾಳಿ ನಡೆಸಿದಾಗ ಅವರ ದಾಳಿಯನ್ನು ತಡೆಯಲು ಮುಸ್ಲಿಮರು ಸಫಲರಾದರು ಮತ್ತು ಶತ್ರುಗಳು ಮರಳಿ ಹೋಗುವಂತಾಯಿತು. ಅನಂತರ ಅವರ ಮೇಲೆ ಮರುದಾಳಿ ನಡೆಸಿ

ಶತ್ರುಗಳ ಶಕ್ತಿಯನ್ನು ನಾಶಪಡಿಸಿ ಅವರನ್ನು ಪರಾರಿಯಾಗುವಂತೆ ಮತ್ತು ಯುದ್ಧ ಮೈದಾನವನ್ನು ಬಿಟ್ಟು ಹೋಗುವಂತೆ ಮಾಡಿದರು. ಇಸ್ಲಾಮಿನ ಸೇನೆ ಅವರನ್ನು ಹಿಂಬಾಲಿಸಿತು ಮತ್ತು ಸಾವಿರಾರು ರೋಮನ್ ಸೈನಿಕರು ವಧಿಸಿಲ್ಪಟ್ಟರು. ಇದರೊಂದಿಗೆ ಈ ಯುದ್ಧ ಕೊನೆಗೊಂಡಿತು.
(ಸಯ್ಯದುನಾ ಅಬೂಬಕರ್ ಸಿದ್ದೀಖ್(ರ) ಶಖ್ಸಿಯ್ಯತ್ ಔರ್ ಕಾರ್ನಾಮೆ, ಅಲಿ ಮುಹಮ್ಮದ್ ಸಲಾಬಿ, ಅನುವಾದಕ, ಪುಟ-448-449, ಅಲ್‌ಫುರ್ಖಾನ್ ಟ್ರಸ್ಟ್ ಖಾನ್‌ಗಡ್ ಪಾಕಿಸ್ತಾನ)

ಈ ಸೈನ್ಯಗಳನ್ನು ಕಳುಹಿಸಿ ಹಝ್ರತ್ ಅಬೂಬಕರ್(ರ) ನೆಮ್ಮದಿಯ ನಿಟ್ಟುಸಿರು ಬಿಟ್ಟರು. ಅಲ್ಲಾಹನು ಈ ಸೈನ್ಯಗಳಿಗೆ ರೋಮನರ ಮೇಲೆ ವಿಜಯ ನೀಡುವನು ಎಂದು ಅವರಿಗೆ ಪರಿಪೂರ್ಣ ಭರವಸೆಯಿತ್ತು. ಏಕೆಂದರೆ, ಸೈನ್ಯಗಳಲ್ಲಿ ಸಾವಿರಕ್ಕೆ ಮೇಲ್ಪಟ್ಟು ಮುಹಾಜಿರ್ ಮತ್ತು ಅನ್ಸಾರ್ ಸಹಾಬಿಯರು ಇದ್ದರು. ಅವರಾದರೋ ಪ್ರತಿಯೊಂದು ಸಂದರ್ಭದಲ್ಲಿ ಅತ್ಯಂತ ನಿಷ್ಠೆಯ ಪುರಾವೆ ನೀಡಿದ್ದರು. ಇಸ್ಲಾಮಿನ ಆರಂಭದಲ್ಲಿ ಆ ಸಹಾಬಿಯರು ಹಝ್ರತ್ ಪೈಗಂಬರ್(ಸ)ರ ತೋಳಿಗೆ ತೋಳು ಸೇರಿಸಿ ಯುದ್ಧಗಳಲ್ಲಿ ಭಾಗಿಯಾಗಿದ್ದರು. ಅವರಲ್ಲಿ ಬದ್ರ್ ಯುದ್ಧದಲ್ಲಿ ಭಾಗಿಯಾದವರು ಕೂಡ ಇದ್ದರು. ಅವರ ಬಗ್ಗೆ ಹಝ್ರತ್ ಪೈಗಂಬರ್(ಸ) ಹೀಗೆ ದುಆ ಮಾಡಿದ್ದರು: ಹೇ ಅಲ್ಲಾಹ್, ನೀನು ಇಂದು ಈ ಸಣ್ಣ ಸಂಘವನ್ನು ನಾಶ ಮಾಡಿದರೆ, ನಂತರ ಭೂಮಿಯಲ್ಲಿ ಎಂದಿಗೂ ನಿನ್ನನ್ನು ಆರಾಧಿಸುವವರು ಇರಲಾರರು. (ಹಝ್ರತ್ ಅಬೂಬಕರ್ ಸಿದ್ದೀಖ್ ಅಕ್ಬರ್(ರ), ಮುಹಮ್ಮದ್ ಹುಸೈನ್ ಹೈಕಲ್, ಅನುವಾದಕ ಶೇಖ್ ಮುಹಮ್ಮದ್ ಅಹ್ಮದ್ ಪಾನೀಪತಿ, ಪುಟ-322, ಇಲ್ಮೊ ಇರ್ಫಾನ್ ಪಬ್ಲಿಷರ್ಸ್ ಲಾಹೋರ್ 2004)

ರೋಮಿನ ಅರಸನಾದ ಹಿರ್ಕಲ್ ಆ ದಿನಗಳಲ್ಲಿ ಪೆಲಸ್ತೀನಿನಲ್ಲಿದ್ದನು. ಮುಸ್ಲಿಮರ ತಯಾರಿಯ ಸುದ್ದಿ ಅವನಿಗೆ ಮುಟ್ಟಿದಾಗ ಅವನು ಪ್ರಾದೇಶಿಕ ಸರದಾರರನ್ನು ಒಟ್ಟುಗೂಡಿಸಿದನು ಮತ್ತು ಅವರ ಮುಂದೆ ಆವೇಶಭರಿತ ಭಾಷಣಗಳನ್ನು ಮಾಡಿ ಅವರನ್ನು ಮುಸ್ಲಿಮರ ವಿರುದ್ಧ ಯುದ್ಧ ಮಾಡಲು ಹುರಿದುಂಬಿಸಿದನು. ಅವನು ಮುಸ್ಲಿಮರ ಕುರಿತು ಹೀಗೆ ಭಾಷಣದಲ್ಲಿ ಹೇಳಿದನು: ಈ ಹಸಿದ, ಬೆತ್ತಲೆ, ಅನಾಗರಿಕ ಜನರು ಅರೇಬಿಯದ ಮರುಭೂಮಿಯಿಂದ ಹೊರಟು ನಿಮ್ಮ ಮೇಲೆ ದಾಳಿ ನಡೆಸಲು ಬಯಸುತ್ತಿದ್ದಾರೆ. ಇನ್ನೆಂದಿಗೂ ನಿಮ್ಮತ್ತ ನೋಡಲು ಧೈರ್ಯಪಡದ ರೀತಿಯಲ್ಲಿ ನೀವು ಅವರಿಗೆ ತಿರುಗೇಟು ನೀಡಿರಿ. ಯುದ್ಧ ಸಾಮಾನುಗಳು ಮತ್ತು ಸೈನಿಕರ ಮೂಲಕ ನಿಮಗೆ ನೆರವು ನೀಡಲಾಗುವುದು. ನಿಮ್ಮ ಮೇಲೆ ನೇಮಿಸಲಾಗುವ ಸೇನಾಧಿಪತಿಗಳನ್ನು ಮನಸ್ಸಾರೆ ಅನುಸರಿಸಿರಿ. ವಿಜಯ ನಿಮ್ಮದಾಗಿರುವುದು. ಪೆಲಸ್ತೀನಿನ ಜನರನ್ನು ಮುಸ್ಲಿಮರ ವಿರುದ್ಧ ಹುರಿದುಂಬಿಸಿದ ನಂತರ ಅವನು ಡಮಸ್ಕಸಿಗೆ ಹೋದನು. ಅಲ್ಲಿಂದ ಹಿಮಸ್ ಮತ್ತು ಅಂತಾಕಿಯಗೆ ತಲುಪಿದನು. ಪೆಲಸ್ತೀನನಲ್ಲಿ ಮಾಡಿದಂತೆ ಆ ಪ್ರದೇಶಗಳಲ್ಲೂ ಆವೇಶದ ಭಾಷಣಗಳನ್ನು ಮಾಡಿ ಅಲ್ಲಿಯ ಜನರನ್ನು ಮುಸ್ಲಿಮರ ವಿರುದ್ಧ ಯುದ್ಧ ಮಾಡಲು ಹುರಿದುಂಬಿಸಿದನು. ಅಂತಾಕಿಯವನ್ನು ಸ್ವತಃ ಕೇಂದ್ರವಾಗಿರಿಸಿಕೊಂಡು ಮುಸ್ಲಿಮರ ವಿರುದ್ಧ ತಯಾರಿಗಳನ್ನು ಆರಂಭಿಸಿದನು. (ಹಝ್ರತ್ ಅಬೂಬಕರ್ ಸಿದ್ದೀಖ್(ರ) ಮುಹಮ್ಮದ್ ಹುಸೈನ್ ಹೈಕಲ್, ಪುಟ-347, ಅನುವಾದ ಮುಹಮ್ಮದ್ ಅಹ್ಮದ್ ಪಾನೀಪತಿ, ಇಲ್ಮೊ ಇರ್ಫಾನ್ ಪಬ್ಲಿಷರ್ಸ್ ಲಾಹೋರ್ 2004)

ರೋಮ್‌ನವರ ಸಿರಿಯಾದಲ್ಲಿ ಎರಡು ಸೈನ್ಯಗಳನ್ನು ಹೊಂದಿತ್ತು. ಒಂದು ಫ್ಯಾಲೆಸ್ತೈನ್‌ನಲ್ಲಿ ಮತ್ತು ಇನ್ನೊಂದು ಅಂಟಾಕಿಯಾದಲ್ಲಿ ಮತ್ತು ಈ ಎರಡೂ ಪಡೆಗಳು ಈ ಕೆಳಗಿನ ಸ್ಥಳಗಳಲ್ಲಿ ತಮ್ಮ ಕೇಂದ್ರಗಳನ್ನು ಹೊಂದಿದ್ದವು. ಮೊದಲನೇಯದು ಅಂಟಾಕಿಯ: ಇದು ರೋಮನ್ ಸಾಮ್ರಾಜ್ಯದ ಸಮಯದಲ್ಲಿ ಸಿರಿಯಾದ ರಾಜಧಾನಿಯಾಗಿತ್ತು. ಎರಡನೇಯದು **ಕಿನಾಸ್ಸರೀನ್**: ಇದು ಸಿರಿಯಾದ ಗಡಿಯಾಗಿದ್ದು, ಇದು ವಾಯುವ್ಯದಲ್ಲಿ ಪರ್ಷಿಯಾವನ್ನು ಎದುರಿಸುತ್ತಿದೆ. ಮೂರನೇ **ಹಿಮ್ಸ್**: ಇದು ಈಶಾನ್ಯದಲ್ಲಿ ಪರ್ಷಿಯಾವನ್ನು ಎದುರಿಸುತ್ತಿರುವ ಸಿರಿಯಾದ ಗಡಿಯಾಗಿದೆ. ನಾಲ್ಕನೇಯದ್ದು ಅಮ್ಮನ್: ಬಾಲ್ಕಾದ ರಾಜಧಾನಿ ಇಲ್ಲಿ ಬಲವಾದ ಮತ್ತು ಸುರಕ್ಷಿತ ಕೋಟೆಯಾಗಿತ್ತು. ಐದನೇ ಅಜ್‌ನಾದೈನ್: ಇದು ಫ್ಯಾಲೆಸ್ತೈನ್‌ನ ದಕ್ಷಿಣದಲ್ಲಿರುವ ರೋಮ್‌ನ ಮಿಲಿಟರಿ ಕೇಂದ್ರವಾಗಿತ್ತು, ಇದು ಅರೇಬಿಯಾದ ಪೂರ್ವ ಮತ್ತು ಪಶ್ಚಿಮ ಗಡಿಗಳನ್ನು ಮತ್ತು ಈಜಿಪ್ಟ್‌ನ ಗಡಿಗಳನ್ನು ಸೇರುತ್ತದೆ. ಆರನೇ **ಖೈಸಾರಿಯಾ**: ಇದು ಫ್ಯಾಲೆಸ್ತೈನ್‌ನ ಉತ್ತರದಲ್ಲಿರುವ ಹೈಫಾದಿಂದ ಹದಿಮೂರು ಕಿಲೋಮೀಟರ್ ದೂರದಲ್ಲಿದೆ ಮತ್ತು ಅದರ ಅವಶೇಷಗಳು ಇನ್ನೂ ಉಳಿದಿವೆ. ರೋಮನ್ ಹೈಕಮಾಂಡ್‌ನ ಕೇಂದ್ರವು ಅಂಟಾಕಿಯಾ ಅಥವಾ ಹೋಮ್ಸ್ ಆಗಿತ್ತು. ( ಅಲಿ ಮುಹಮ್ಮದ್ ಅಲ್-ಸಲಾಬಿ ಅವರಿಂದ ಸಯ್ಯಿದುನಾ ಅಬುಬಕರ್ ಸಿದ್ದಿಕ್(ರ) ಶಖ್ಸಿಯ್ಯತ್ ಔರ್ ಕಾರ್ನಾಮೆ, ಅನುವಾದಿಸಿದ ಪುಟ-450, ಅಲ್-ಫುರ್ಕಾನ್ ಟ್ರಸ್ಟ್ ಖಾಂಗರ್ ಪಾಕಿಸ್ತಾನ)

ಒಂದು ವರದಿಯ ಪ್ರಕಾರ ಹರ್ಕಲಿನಿಗೆ ಇಸ್ಲಾಮಿನ ಸೈನ್ಯದ ಆಗಮನದ ಸುದ್ದಿ ಲಭಿಸಿದಾಗ, ಯುದ್ಧದಿಂದ ಹಿಂದೆಸರಿಯಲು ಅವನು ತನ್ನ ಸಮುದಾಯಕ್ಕೆ ಸಲಹೆ ನೀಡಿದ್ದನು. ಅವನು ಹೇಳಿದನು: ನೀವು ಮುಸ್ಲಿಮರ ಜೊತೆಗೆ ಸಂಧಾನ ಮಾಡಿಕೊಳ್ಳಿರಿ. ಸಿರಿಯದ ಅರ್ಧ ಕೃಷಿ ಪ್ರದೇಶ ಕೊಡುವುದಾಗಿ ಸಂಧಾನ ಮಾಡಿಕೊಂಡರೆ, ಉಳಿದ ಅರ್ಧ ನಿಮ್ಮ ಬಳಿ ಇರುವುದು. ಸಿರಿಯದ ಸಂಪೂರ್ಣ ಪ್ರದೇಶ ಮತ್ತು ರೋಮಿನ ಅರ್ಧ ಪ್ರದೇಶವನ್ನು ಮುಸ್ಲಿಮರು ವಶ ಪಡಿಸಿಕೊಳ್ಳುವುದಕ್ಕಿಂತ ಇದು ಉತ್ತಮ. ಆದರೆ ರೋಮಿನ ಜನರು ಅವನ ಮಾತನ್ನು ಒಪ್ಪಲಿಲ್ಲ ಮತ್ತು ಅಲ್ಲಿಂದ ಎದ್ದು ಹೋದರು. ಆದ್ದರಿಂದ ಅವನು ಅವರನ್ನು ಒಟ್ಟು ಸೇರಿಸಿ ಹಿಮಸಿಗೆ ಕೊಂಡು ಹೋದನು. ಅಲ್ಲಿ ಅವನು ಸೈನಿಕರನ್ನು ಮತ್ತು ಸೈನ್ಯಗಳನ್ನು ತಯಾರು ಮಾಡಲು ಶುರು ಮಾಡಿದನು. ಹಿಮಸಿನ ನಂತರ ಅವನು ಅಂತಾಕಿಯಗೆ ಹೋದನು. ಹಿರ್ಕಲಿನ ಬಳಿ ಬಹಳಷ್ಟು ಸೈನಿಕರಿದ್ದರು. ಮುಸ್ಲಿಮರ ಸೇನೆಯ ಪ್ರತಿಯೊಂದು ಭಾಗವನ್ನು ಎದುರಿಸುವ ಮೂಲಕ ದುರ್ಬಲಗೊಳಿಸಲಿಕ್ಕಾಗಿ ಮುಸ್ಲಿಮರ ಪ್ರತಿಯೊಂದು ಸೇನೆಯ ಎದುರಾಗಿ ಬೇರೆ ಬೇರೆ ಸೇನೆಯನ್ನು ಕಳುಹಿಸಲು ಅವನು ತೀರ್ಮಾನಿಸಿದನು. ಹೀಗೆ ಅವನು ತನ್ನ ಸಹೋದರ ತಝಾರುಕಿನಿಗೆ ಹಝ್ರತ್ ಅಮ್ರ್(ರ)ರ ವಿರುದ್ಧ ಹೋರಾಡಲು ತೊಂಬತ್ತು ಸಾವಿರ ಸೈನಿಕರನ್ನು ನೀಡಿದನು. ಜರ್ಜಾ ಬಿನ್ ತೋಜ಼ಲ್‌ರನ್ನು ಹಝ್ರತ್ ಯಝೀದ್ ಬಿನ್ ಅಬೂಸುಫ್‌ಯಾನಿನ ವಿರುದ್ಧ ಹೋರಾಡಲು ಕಳುಹಿಸಿದನು. ಅದೇ ರೀತಿಯಲ್ಲಿ ಖೈಖ ಬಿನ್ ನಸ್ತವಸನಿಗೆ ಅರವತ್ತು ಸಾವಿರ ಸೈನಿಕರನ್ನು ನೀಡಿ ಹಝ್ರತ್ ಅಬೂ ಉಬೈದ(ರ)ರ ವಿರುದ್ಧ ಕಳುಹಿಸಿದನು. ಹಝ್ರತ್ ಶುರಹ್‌ಬೀಲ್ ಹಸನ(ರ)ರನ್ನು ಎದುರಿಸಲು ಬರಾಖಿಸ್‌ನನ್ನು ಕಳುಹಿಸಿದನು. (ಅಲ್‌ಕಾಮಿಲ್ ಫಿತ್ತಾರೀಖ್, ಸಂಪುಟ-2, ಪುಟ-255, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2006) (ಹಝ್ರತ್ ಅಬೂಬಕರ್ ಸಿದ್ದೀಖ್(ರ), ಹೈಕಲ್, ಪುಟ-347)

ಹಿರ್ಕಲ್ ಅಂತಾಕಿಯದಲ್ಲಿದ್ದಾನೆ ಮತ್ತು ನಿಮಗಿಂತ ಮುಂಚಿನ ಯಾವುದೇ ಸಮುದಾಯವನ್ನು ಎದುರಿಸಲು ಅವನ ತಂದೆ ತಾತಂದಿಯರಲ್ಲಿ ಯಾರೂ ಕೂಡ ತಯಾರು ಮಾಡಿರದಷ್ಟು ದೊಡ್ಡ ಸೇನೆಯನ್ನು ಅವನು ನಿಮ್ಮನ್ನು ಎದುರಿಸಲು ತಯಾರು ಮಾಡಿರುವನು ಎಂಬ ಸುದ್ದಿಯನ್ನು ಒಬ್ಬ ವ್ಯಕ್ತಿಯು ಜಾಬಿಯದಲ್ಲಿದ್ದ ಹಝ್ರತ್ ಅಬೂ ಉಬೈದ ಬಿನ್ ಜರ್ರಾಹ್(ರ)ರಿಗೆ ಮುಟ್ಟಿಸಿದರು.

ಆಗ ಅವರು ರೋಮಿನ ಅರಸನಾದ ಹಿರ್ಕಲಿನ ಉದ್ದೇಶಗಳ ಬಗ್ಗೆ ಪತ್ರದ ಮೂಲಕ ಹಝ್ರತ್ ಅಬೂಬಕರ್(ರ)ರಿಗೆ ತಿಳಿಸಿದರು. ಹಝ್ರತ್ ಅಬೂಬಕರ್(ರ) ಅದಕ್ಕೆ ಉತ್ತರ ಕೊಡುತ್ತಾ ಹೀಗೆ ಪತ್ರ ಬರೆದರು: ನಿಮ್ಮ ಪತ್ರ ನನಗೆ ಲಭಿಸಿದೆ. ನೀವು ರೋಮಿನ ಹರ್ಖಲಿನ ಕುರಿತು ಬರೆದಿರುವ ಸಂಗತಿಗಳನ್ನು ನಾನು ಮನವರಿಕೆ ಮಾಡಿದೆ. ಅಂತಾಕಿಯದಲ್ಲಿ ಅವನು ತಂಗಿರುವುದು ಅವನ ಮತ್ತು ಅವನ ಜೊತೆಗಾರರ ಸೋಲಿಗೆ ಹಾಗೂ ಮುಸ್ಲಿಮರ ವಿಜಯಕ್ಕೆ ಇರುವ ಮುನ್ನುಡಿಯಾಗಿದೆ. (ಸೂಚನೆಯಾಗಿದೆ.) ಭಯಪಡಬೇಕಾದ ಯಾವುದೇ ಸಂಗತಿಯಿಲ್ಲ. ಹರ್ಕಲ್ ತನ್ನ ದೇಶದ ಜನರನ್ನು ಒಟ್ಟುಗೂಡಿಸಿದ್ದನ್ನು ಮತ್ತು ಬಹಳಷ್ಟು ಸಂಖ್ಯೆಯಲ್ಲಿ ಜನರು ಒಟ್ಟು ಸೇರಿರುವುದರ ಕುರಿತು ನೀವು ಬರೆದಿದ್ದೀರಿ. ಅವನು ಹಾಗೆ ಮಾಡುವನು ಎಂದು ನಿಮಗೂ ನನಗೂ ಮೊದಲೇ ಗೊತ್ತಿತ್ತು. ಏಕೆಂದರೆ, ಯಾವುದೇ ಸಮುದಾಯವರು ಯುದ್ಧ ಮಾಡದೇ ತನ್ನ ಅರಸನನ್ನು ಬಿಡಲಾರರು ಮತ್ತು ತಮ್ಮ ದೇಶವನ್ನು ತೊರೆಯಲಾರರು. ಶತ್ರುಗಳು ಜೀವಿತವನ್ನು ಇಷ್ಟಪಡುವ ರೀತಿಯಲ್ಲಿ ಮರಣವನ್ನು ಇಷ್ಟಪಡುವ ಅನೇಕ ಮುಸ್ಲಿಮರು ಯುದ್ಧ ಮಾಡುವವರಲ್ಲಿ ಇರುವರು ಎಂದು ನನಗೆ ಗೊತ್ತಿದೆ. ಅಲ್‌ಹಮ್ದುಲಿಲ್ಲಾಹ್. ಅವರು ತಮ್ಮ ಯುದ್ಧದಲ್ಲಿ ಅಲ್ಲಾಹನಿಂದ ದೊಡ್ಡದಾದ ಪ್ರತಿಫಲದ ಪ್ರತೀಕ್ಷೆಯನ್ನು ಹೊಂದಿರುವರು. ಯುವತಿಗಳು ಮತ್ತು ಬೆಲೆಬಾಳುವ ಸಂಪತ್ತಿಗಿಂತ ಹೆಚ್ಚಿನ ಪ್ರೀತಿ ಅವರಿಗೆ ಅಲ್ಲಾಹನ ಮಾರ್ಗದಲ್ಲಿ ಯುದ್ಧ ಮಾಡುವುದರಲ್ಲಿದೆ. ಅವರಲ್ಲಿ ಒಬ್ಬ ಮುಸ್ಲಿಮನು ಯುದ್ಧ ಸಮಯದಲ್ಲಿ ಸಾವಿರ ಮುಶ್ರಿಕರಿಗಿಂತ ಉತ್ತಮ. ನೀವು ನಿಮ್ಮ ಸೈನ್ಯದೊಂದಿಗೆ ಅವರ ಜೊತೆಗೆ ಮುಖಾಮುಖಿಯಾಗು. ನಿಮ್ಮ ಜೊತೆಗೆ ಇರದ ಮುಸ್ಲಿಮರ ಬಗ್ಗೆ ಯೋಚಿಸಿ ಚಿಂತಿತರಾಗಬೇಡಿರಿ. ಖಂಡಿತವಾಗಿಯೂ ಅಲ್ಲಾಹನು ನಿಮ್ಮ ಜೊತೆಗೆ ಇದ್ದಾನೆ. ಅದರ ಜೊತೆಗೆ ನಿಮಗೆ ಸಾಕಾಗುವಷ್ಟು ಯೋಧರನ್ನು ನಾನು ನಿಮ್ಮ ಸಹಾಯಕ್ಕಾಗಿ ಕಳುಹಿಸುತ್ತಾ ಇರುವೆನು. ಅದರ ನಂತರ ಇನ್ನೂ ಹೆಚ್ಚಿನ ಆವಶ್ಯಕತೆ ಇರದು. ವಸ್ಸಲಾಮ್
(ತಾರೀಖ್ ಅಲ್‌ಖಮೀಸ್, ಸಂಪುಟ-3, ಪುಟ-212-213, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2009)

ಹಝ್ರತ್ ಅಮ್ರ್ ಬಿನ್ ಆಸ್(ರ) ಕೂಡ ಹಝ್ರತ್ ಅಬೂಬಕರ್(ರ)ರಿಗೆ ಪತ್ರ ಬರೆದರು. ಹಝ್ರತ್ ಅಬೂಬಕರ್(ರ) ಅದಕ್ಕೆ ಉತ್ತರಿಸುತ್ತಾ ಹೀಗೆ ಬರೆದರು: ರೋಮನರ ಸೈನಿಕರು ಒಟ್ಟುಗೂಡಿರುವ ಬಗ್ಗೆ ಪ್ರಸ್ತಾಪಿಸಲಾದ ನಿಮ್ಮ ಪತ್ರ ನನಗೆ ಲಭಿಸಿದೆ. ನೆನಪಿಡಿರಿ, ಸೈನಿಕರ ಆಧಿಕ್ಯದ ಕಾರಣದಿಂದ ಅಲ್ಲಾಹನು ತನ್ನ ಪ್ರವಾದಿ(ಸ)ರೊಂದಿಗೆ ನಮಗೆ ವಿಜಯ ಮತ್ತು ಸಹಾಯ ದಯಪಾಲಿಸಿರಲಿಲ್ಲ. ನಮ್ಮ ಸ್ಥಿತಿ ಏನಾಗಿತ್ತು ಎಂದರೆ, ನಾವು ಅವರ ಜೊತೆ ಯುದ್ಧ ಮಾಡುತ್ತಿದ್ದಾಗ ನಮ್ಮ ಬಳಿ ಕೇವಲ ಎರಡು ಕುದುರೆಗಳು ಇರುತ್ತಿದ್ದುವು ಮತ್ತು ಒಂಟೆಗಳ ಮೇಲೂ ಸರದಿ ಪ್ರಕಾರ ಸವಾರರಾಗುತ್ತಿದ್ದೆವು. ಉಹದ್ ಯುದ್ಧದಂದು ನಾವು ಹಝ್ರತ್ ಪೈಗಂಬರ್(ಸ)ರ ಜೊತೆಗೆ ಇದ್ದೆವು. ನಮ್ಮ ಬಳಿ ಒಂದೇ ಕುದುರೆಯಿತ್ತು. ಅದರಲ್ಲಿ ಹಝ್ರತ್ ಪೈಗಂಬರ್(ಸ) ಸವಾರರಾಗಿದ್ದರು. ಆದಾಗ್ಯೂ ಅಲ್ಲಾಹನು ನಮಗೆ ನಮ್ಮ ಶತ್ರುಗಳ ಮೇಲೆ ವಿಜಯ ದಯಪಾಲಿಸುತ್ತಿದ್ದನು ಮತ್ತು ನಮಗೆ ನೆರವು ನೀಡುತ್ತಿದ್ದನು. ಹೇ ಅಮ್ರ್, ನೆನಪಿಡಿರಿ, ಪಾಪಗಳನ್ನು ಇಷ್ಟಪಡದವನು ಅಲ್ಲಾಹನನ್ನು ಅತ್ಯಂತ ಹೆಚ್ಚು ಅನುಸರಿಸುವವನಾಗಿದ್ದಾನೆ. ಸ್ವತಃ ಕೂಡ ಅಲ್ಲಾಹನ ಅನುಸರಣೆ ಮಾಡಿರಿ ಮತ್ತು ತನ್ನ ಜೊತೆಗಾರರೊಡನೆ ಕೂಡ ಅಲ್ಲಾಹನನ್ನು ಅನುಸರಿಸಲು ಆಜ್ಞೆ ನೀಡಿರಿ. (ಸ್ಯಯ್ಯದ್‌ನಾ ಅಬೂಬಕರ್ ಸಿದ್ದೀಖ್(ರ) ಶಖ್ಸಿಯ್ಯತ್ ಔರ್ ಕಾರ್ನಾಮೆ, ಅಲಿ ಮಯಹ್ಮದ್ ಸಲಾಬಿ, ಅನುವಾದಕ ಪುಟ–452–453, ಅಲ್‌ಫುರ್ಖಾನ್ ಟ್ರಸ್ಟ್ ಖಾನ್‌ಗಡ್ ಪಾಕಿಸ್ತಾನ)

ಹಝ್ರತ್ ಯಝೀದ್ ಬಿನ್ ಅಬೂಸುಫ್‌ಯಾನ್(ರ) ಕೂಡ ಅಲ್ಲಿಯ ಪರಿಸ್ಥಿತಿಗಳ ಬಗ್ಗೆ ಬರೆದು ಹಝ್ರತ್ ಅಬೂಬಕರ್(ರ)ರಿಂದ ಸಹಾಯವನ್ನು ಬೇಡಿದರು. ಅದಕ್ಕೆ ಉತ್ತರವಾಗಿ ಹಝ್ರತ್ ಅಬೂಬಕರ್(ರ) ಹೀಗೆ ಬರೆದರು: ಶತ್ರುಗಳೊಡನೆ ನಮ್ಮ ಮುಖಾಮುಖಿಯಾದರೆ, ನಿಮ್ಮ ಸಂಗಡಿಗರನ್ನು ಜೊತೆಗೆ ಸೇರಿಸಿ ಅವರ ಮೇಲೆ ದಾಳಿ ನಡೆಸಿರಿ ಮತ್ತು ಯುದ್ಧ ಮಾಡಿರಿ. ಅಲ್ಲಾಹನು ನಿಮ್ಮನ್ನು ಅಪಮಾನಿತಗೊಳಿಸಲಾರನು. ಅಲ್ಲಾಹನ ಆದೇಶ ಪ್ರಕಾರ ಸಣ್ಣ ಗುಂಪು ದೊಡ್ಡ ಗುಂಪಿನ ಮೇಲೆ ವಿಜಯ ಸಾಧಿಸುವುದು ಎಂದು ಅಲ್ಲಾಹನು ನಮಗೆ ತಿಳಿಸಿರುವನು. ಆದಾಗ್ಯೂ ನಿಮಗೆ ಸಾಕಾಗುವಷ್ಟು ಯೋಧರನ್ನು ನಾನು ನಿಮ್ಮ ಸಹಾಯಕ್ಕಾಗಿ ಕಳುಹಿಸುತ್ತಾ ಇದ್ದೇನೆ ಮತ್ತು ಹೆಚ್ಚಿನ ಆವಶ್ಯಕತೆ ಇರದು. ಇನ್‌ಶಾ ಅಲ್ಲಾಹ್. ವಸ್ಸಲಾಮ್– ಹಝ್ರತ್ ಅಬೂಬಕರ್(ರ)ರವರು ತಮ್ಮ ಹಸ್ತಾಕ್ಷರವನ್ನು ನೀಡಿದರು.

ಈ ಪತ್ರವನ್ನು ಹಝ್ರತ್ ಯಝೀದ್‌ರ ಬಳಿಗೆ ಕೊಂಡು ಹೋಗಲು ಹಝ್ರತ್ ಅಬೂಬಕರ್(ರ) ಹಝ್ರತ್ ಅಬ್ದುಲ್ಲಾಹ್ ಬಿನ್ ಕರ್ದಿಗೆ ಕೊಟ್ಟರು. ಹಝ್ರತ್ ಅಬ್ದುಲ್ಲಾಹ್ ಆ ಪತ್ರವನ್ನು ತೆಗೆದು ಹಝ್ರತ್ ಯಝೀದ್‌ರ ಬಳಿಗೆ ತಲುಪಿದರು. ಆ ಪತ್ರವನ್ನು ಮುಸ್ಲಿಮರ ಮುಂದೆ ಓದಿ ಹೇಳಿದರು. ಇದರಿಂದ ಮುಸ್ಲಿಮರು ಸಂತೋಷಗೊಂಡರು. (ತಾರೀಖ್ ಅಲ್‌ಖಮೀಸ್, ಸಂಪುಟ–3, ಪುಟ–213, ದಾರುಲ್ ಕುತುಬ್ ಇಲ್ಮಿಯ ಬೈರೂತ್ 2009)

ಇಸ್ಲಾಮಿನ ಸೈನಿಕರ ಸಹಾಯಕ್ಕಾಗಿ ಸಿರಿಯಗೆ ಹೋಗಲು ಆದೇಶ ನೀಡುತ್ತಾ ಹಝ್ರತ್ ಹಾಶಿಂ ಬಿನ್ ಉತ್ಬ(ರ)ರೊಡನೆ ಹಝ್ರತ್ ಅಬೂಬಕರ್(ರ) ಹೀಗೆ ಹೇಳಿದರು: ಮುಸ್ಲಿಮರು ಪತ್ರ ಬರೆದು ಸತ್ಯನಿಷೇಧಿಗಳಾದ ಶತ್ರುಗಳನ್ನು ಎದುರಿಸಲಿಕ್ಕಾಗಿ ಸಹಾಯವನ್ನು ಬೇಡಿರುವರು. ಆದ್ದರಿಂದ ನೀವು ನಿಮ್ಮ ಸಂಗಡಿಗರನ್ನು ಜೊತೆಗೆ ಸೇರಿಸಿ ಅವರ ಬಳಿಗೆ ಹೋಗಿರಿ. ನಿಮ್ಮ ಜೊತೆಗೆ ಹೋಗಲಿಕ್ಕಾಗಿ ನಾನು ಜನರನ್ನು ತಯಾರು ಮಾಡುತ್ತಿದ್ದೇನೆ. ನೀವು ಇಲ್ಲಿಂದ ಹೊರಟು ಹಝ್ರತ್ ಅಬೂ ಉಬೈದ(ರ)ರನ್ನು ಭೇಟಿಯಾಗಿರಿ. ಹಝ್ರತ್ ಅಬೂಬಕರ್(ರ) ಜನರ ಮುಂದೆ ನಿಂತರು ಮತ್ತು ಅಲ್ಲಾಹನಿಗೆ ಸ್ತುತಿಸಿದರು. ಅದರ ನಂತರ ಹೇಳಿದರು: ಖಂಡಿತವಾಗಿಯೂ ನಿಮ್ಮ ಮುಸ್ಲಿಮ್ ಸಹೋದರರಲ್ಲಿ ಕೆಲವರು ಕ್ಷೇಮವಾಗಿರುವರು ಮತ್ತು ಕೆಲವರು ಗಾಯಾಳುವಾಗಿರುವರು. ಶತ್ರುಗಳ ಹೃದಯಗಳಲ್ಲಿ ಅಲ್ಲಾಹನು ಮುಸ್ಲಿಮರ ಕುರಿತು ಭಯ ಹುಟ್ಟಿಸಿದ್ದಾನೆ. ಶತ್ರುಗಳು ತಮ್ಮ ಕೋಟೆಗಳಲ್ಲಿ ಅಭಯ ಪಡೆದು ಅವುಗಳ ಬಾಗಿಲುಗಳನ್ನು ಮುಚ್ಚಿರುವರು.

ರೋಮಿನ ಅರಸನಾದ ಹಿರ್ಖಲ್ ಓಡಿ ಹೋಗಿ ಸಿರಿಯದ ಮೂಲೆಯಲ್ಲಿರುವ ಒಂದು ಗ್ರಾಮದಲ್ಲಿ ಅಭಯ ಪಡೆದಿದ್ದಾನೆ ಎಂದು ಮುಸ್ಲಿಮರ ಕಡೆಯಿಂದ ಬಂದ ದೂತ ನಮಗೆ ಸುದ್ದಿ ಮುಟ್ಟಿಸಿದ್ದಾನೆ. ಹಿರ್ಖಲ್ ಆ ಜಾಗದಿಂದ ಬಹಳ ದೊಡ್ಡದಾದ ಒಂದು ಸೈನ್ಯವನ್ನು ಮುಸ್ಲಿಮರನ್ನು ಎದುರಿಸಲು ಕಳುಹಿಸಿರುವನು ಎಂದೂ ಮಾಹಿತಿ ಲಭಿಸಿದೆ. ಮುಸ್ಲಿಂ ಸಹೋದರರ ಸಹಾಯಕ್ಕಾಗಿ ನಿಮ್ಮ ಒಂದು ಸೈನ್ಯವನ್ನು ಕಳುಹಿಸಲು ನಾನು ಬಯಸುತ್ತೇನೆ. ಅಲ್ಲಾಹನು ಅದರ ಮೂಲಕ ಅವರಿಗೆ ಬೆಂಬಲ ನೀಡುವನು ಮತ್ತು ಶತ್ರುಗಳನ್ನು ಅಪಮಾನಿತಗೊಳಿಸುವನು. ಶತ್ರುಗಳ ಹೃದಯಗಳಲ್ಲಿ ಭಯ ಹುಟ್ಟಿಸುವನು. ಅಲ್ಲಾಹನು ನಿಮ್ಮ ಮೇಲೆ ಕರುಣೆದೋರಲಿ. ಹಾಶಿಂ ಬಿನ್ ಉತ್ಬರೊಂದಿಗೆ ತಯಾರಾಗು ಮತ್ತು ಒಳಿತು ಮತ್ತು ಪ್ರತಿಫಲದ ಪ್ರತೀಕ್ಷೆ ಇರಿಸು. ನೀವು ಯಶಸ್ಸು ಸಾಧಿಸಿದರೆ, ವಿಜಯ ಮತ್ತು ಯುದ್ಧ ಸಂಪತ್ತನ್ನು ಗಳಿಸುವಿರಿ. ಪರಾಜಿತಗೊಂಡರೆ, ಶಹಾದತ್ ಮತ್ತು ಗೌರವ ಗಳಿಸುವಿರಿ.

ಅನಂತರ ಹಝ್ರತ್ ಅಬೂಬಕರ್(ರ) ಮನೆಗೆ ಬಂದರು ಮತ್ತು ಜನರು ಹಾಶಿಂ ಬಿನ್ ಉತ್ಬರ ಬಳಿ ಒಟ್ಟು ಸೇರಿದರು. ಅವರು ಒಂದು ಸಾವಿರದಷ್ಟು ಆದಾಗ, ಅವರೊಡನೆ ಯುದ್ಧಕ್ಕಾಗಿ ಹೊರಡಲು ಆಜ್ಞಾಪಿಸಲಾಯಿತು. ಹಾಶಿಂ ಸಲಾಂ ಹೇಳಿ ಅಲ್ಲಿಂದ ಹೊರಟರು. ಹಝ್ರತ್ ಅಬೂಬಕರ್(ರ) ಹೇಳಿದರು: ಹೇ ಹಾಶಿಂ, ನಾವು ಹಿರಿಯರ ಸಲಹೆ ಮತ್ತು ಯೋಜನೆಗಳಿಂದ ಪ್ರಯೋಜನ ಪಡೆಯುತ್ತಿದ್ದೆವು. ಮತ್ತು ಯುವಕರ ಸಹನೆ, ಶಕ್ತಿ ಮತ್ತು ಧೈರ್ಯದ ಮೇಲೆ ಭರವಸೆ ಹೊಂದುತ್ತಿದ್ದೆವು. ಅಲ್ಲಾಹನು ನಿಮ್ಮೊಳಗೆ ಈ ಎಲ್ಲ ಗುಣಗಳನ್ನು ಒಟ್ಟು ಸೇರಿಸಿರುವನು. ನೀವು ಈಗ ಯುವಕ, ಮತ್ತು ಒಳಿತಿನ ಕಡೆಗೆ ಹೋಗುವವನಾಗಿರುವಿ.

ಶತ್ರುಗಳೊಡನೆ ಮುಖಾಮುಖಿಯಾಗುವಾಗ ಧೈರ್ಯದಿಂದ ಹೋರಾಡು ಮತ್ತು ಸಹನೆದೋರು. ನೆನಪಿಡಿರಿ, ಅಲ್ಲಾಹನ ಮಾರ್ಗದಲ್ಲಿ, ನೀವು ಇರಿಸುವ ಹೆಜ್ಜೆಗಳು, ನೀವು ಮಾಡುವ ಖರ್ಚುಗಳು, ನೀವು ಅನುಭವಿಸುವ ಬಾಯಾರಿಕೆ, ಆಯಾಸ ಮತ್ತು ಹಸಿವನ್ನು ಅಲ್ಲಾಹನು ಸತ್ಕರ್ಮವಾಗಿ ಬರೆದಿಡುವನು. ಅಲ್ಲಾಹನು ಔದಾರ್ಯ ಮಾಡುವವನ ಪ್ರತಿಫಲವನ್ನು ವ್ಯರ್ಥಗೊಳಿಸಲಾರನು.

ಹಾಶಿಂ ಹೇಳಿದರು: ಅಲ್ಲಾಹನು ನನ್ನ ಒಳಿತನ್ನು ಬಯಸುವನಾದರೆ, ಅವನು ಹಾಗೆಯೇ ಮಾಡುವನು. ನಾನು ಸಹ ಹೀಗೆಯೇ ಮಾಡುವೆನು. ಶಕ್ತಿ ಮತ್ತು ಸಾಮರ್ಥ್ಯವನ್ನು ನೀಡುವವನು ಅಲ್ಲಾಹನೇ ಆಗಿದ್ದಾನೆ. ನಾನು ಕೊಲ್ಲಲ್ಪಡದಿದ್ದರೆ, ನಾನು ಅವರೊಂದಿಗೆ ಹೋರಾಡುವೆನು, ಪುನಃ ಹೋರಾಡುವೆನು, ಪುನಃ ಹೋರಾಡುವೆನು ಎಂದು ನನಗೆ ಪ್ರತೀಕ್ಷೆಯಿದೆ. ಅನಂತರ ಅವರ ದೊಡ್ಡಪ್ಪರಾದ ಹಝ್ರತ್ ಸಅದ್ ಬಿನ್ ಅಬೀ ವಖಾಸ್ ಹೇಳಿದರು: ಹೇ ನನ್ನ ಸಹೋದರ ಪುತ್ರಾ, ನೀನು ಚಲಾಯಿಸುವ ಬಾಣಗಳು, ಹಲ್ಲೆಗಳು ಅಲ್ಲಾಹನ ಸಂಪ್ರೀತಿ ಗಳಿಸಲಿಕ್ಕೆ ಆಗಿರಲಿ. ಬಹು ಬೇಗನೇ ನೀನು ಅಲ್ಲಾಹನ ಕಡೆಗೆ ಹೋಗುವಿ. ನೀನು ಮಾಡುವ ಸತ್ಕರ್ಮಗಳ ಮತ್ತು ಸತ್ಯದ ಹೆಜ್ಜೆಗಳು ಇಹಲೋಕದಿಂದ ಪರಲೋಕದ ವರೆಗೆ ನಿನ್ನ ಜೊತೆಗೆ ಇರುವುವು.

ಹಾಶಿಂ ಹೇಳಿದರು: ಹೇ ನನ್ನ ದೊಡ್ಡಪ್ಪ, ನನ್ನ ಬಗ್ಗೆ ಕಿಂಚಿತ್ತೂ ಚಿಂತಿತರಾಗಬೇಡಿರಿ. ನನ್ನ ಯಾತ್ರೆ ಮತ್ತು ತಂಗುದಾಣ, ಬೆಳಿಗ್ಗೆ ರಾತ್ರಿಯ ಚಲನವಲನ, ನನ್ನ ಪ್ರಯತ್ನಗಳು, ಯುದ್ಧ ಕಾರ್ಯಾಚರಣೆಗಳು, ಈಟಿಯಿಂದ ಗಾಯಾಳು ಮಾಡುವುದು, ಖಡ್ಗದಿಂದ ಹಲ್ಲೆ ನಡೆಸುವುದು ಜನರಿಗೆ ತೋರಿಸಲಿಕ್ಕೆ ಆಗಿದ್ದರೆ, ನಾನು ನಷ್ಟ ಹೊಂದಿದವನಾಗುವೆ. ಎಂದರೆ, ನನ್ನ ಪ್ರತಿಯೊಂದು ಕೃತ್ಯ ಅಲ್ಲಾಹನಿಗಾಗಿ ಆಗಿರುವುದು. ಜನರಿಗಾಗಿ ಅಲ್ಲ.

ಹಝ್ರತ್ ಸಈದ್ ಬಿನ್ ಆಮಿರ್ ಬಿನ್ ಹದ್ಮೀಮ್(ರ)ರನ್ನು ಯುದ್ಧ ಮಾಡಲಿಕ್ಕಾಗಿ ಸಿರಿಯಗೆ ಕಳುಹಿಸಲು ಹಝ್ರತ್ ಅಬೂಬಕರ್(ರ) ಬಯಸಿದರು. ಅವರು ಹಝ್ರತ್ ಅಬೂಬಕರ್(ರ)ರ ಬಳಿಗೆ ಬಂದರು ಮತ್ತು ಸಿರಿಯದ ಕಾರ್ಯಾಚರಣೆಯ ಬಗ್ಗೆ ತನ್ನ ಕೋರಿಕೆಗಳನ್ನು ಮುಂದಿರಿಸಿದರು ಮತ್ತು ಯುದ್ಧ ಮಾಡಲು ಇರುವ ತನ್ನ ಅಭಿಲಾಷೆಯನ್ನು ವ್ಯಕ್ತಪಡಿಸಿಕೊಂಡರು. ಆಗ ಹಝ್ರತ್ ಅಬೂಬಕರ್(ರ) ಹೇಳಿದರು: ಹೇ ಸಈದ್, ಎಲ್ಲರಿಗಿಂತ ಕರುಣೆದೋರುವವನು ನಿಮ್ಮ ಮೇಲೆ ಕರುಣೆದೋರಲಿ. ನಿಮ್ಮ ಬಗ್ಗೆ ನನಗೆ ತಿಳಿದಿರುವ ಸಂಗತಿಗಳೇನೆಂದರೆ, ನೀವು ಸಹನೆದೋರುವವರೂ, ಸಂಬಂಧಿಗಳೊಂದಿಗೆ ಕರುಣೆದೋರುವವರೂ, ಬೆಳಿಗ್ಗೆ ತಹಜ್ಜುದ್ ನಮಾಝ್ ನಿರ್ವಹಿಸುವವರೂ, ಬಹಳವಾಗಿ ಅಲ್ಲಾಹನ ಸ್ಮರಣೆ ಮಾಡುವವರೂ ಆಗಿರುವಿರಿ ಎಂದಾಗಿದೆ.

ಆಗ ಹಝ್ರತ್ ಸಈದ್ ಹೇಳಿದರು: ಅಲ್ಲಾಹನು ನಿಮ್ಮ ಮೇಲೆ ಕರುಣೆದೋರಲಿ, ಅಲ್ಲಾಹನು ಅದಕ್ಕಿಂತ ಹೆಚ್ಚು ನನ್ನ ಮೇಲೆ ಔದಾರ್ಯಗಳನ್ನು ಮಾಡುತ್ತಾನೆ. ಇವೆಲ್ಲವೂ ಅವನದ್ದೇ ಕೃಪೆ ಮತ್ತು ಔದಾರ್ಯವಾಗಿದೆ. ನೀವು ಸತ್ಯವನ್ನು ಬಹಿರಂಗವಾಗಿ ಹೇಳುವವರೂ, ನ್ಯಾಯದೊಂದಿಗೆ ಸುದೃಢವಾಗಿ ನಿಲ್ಲುವವರೂ ಸತ್ಯವಿಶ್ವಾಸಿಗಳೊಂದಿಗೆ ಕರುಣೆದೋರುವವರೂ ಸತ್ಯನಿಷೇಧಿಗಳೊಂದಿಗ ಅತ್ಯಂತ ಕಠಿಣರೂ ಆಗಿರುವಿರಿ. ಆಗ ಹಝ್ರತ್ ಅಬೂಬಕರ್(ರ) ಹೇಳಿದರು: ಸಾಕು ಸಈದ್, ಸಾಕು. ಅಲ್ಲಾಹನು ನಿಮ್ಮ ಮೇಲೆ ಕರುಣೆದೋರಲಿ. ಹೋಗಿ ಯುದ್ಧಕ್ಕಾಗಿ ತಯಾರಿ ನಡೆಸು. ನಾನು ಸಿರಿಯದ ಕಡೆಗೆ ಒಂದು ಸೇನೆಯನ್ನು ಕಳುಹಿಸುವೆನು ಮತ್ತು ನಿನ್ನನ್ನು ಅದರ ಸೇನಾಧಿಪತಿಯನ್ನಾಗಿ

ಮಾಡುವೆನು. ಅನಂತರ ಹಝ್ರತ್ ಬಿಲಾಲ್(ರ)ರೊಡನೆ ಇದರ ಬಗ್ಗೆ ಜನರ ಮಧ್ಯೆ ಘೋಷಿಸಲು ಹಝ್ರತ್ ಅಬೂಬಕರ್(ರ) ಹೇಳಿದರು. ಹಝ್ರತ್ ಸಈದ್(ರ) ಹೊರಡಲು ಉದ್ದೇಶಿಸಿದಾಗ ಹಝ್ರತ್ ಅಬೂಬಕರ್(ರ)ರ ಸನ್ನಿಧಿಯಲ್ಲಿ ಹಝ್ರತ್ ಬಿಲಾಲ್(ರ) ಹಾಜರಾಗಿ ಹೀಗೆ ಹೇಳಿದರು: ಹೇ ಖಲೀಫತುರ್‌ರಸೂಲ್, ನೀವು ನನ್ನನ್ನು ಅಲ್ಲಾಹನಿಗಾಗಿ ಸ್ವತಂತ್ರಗೊಳಿಸಿರುವಿರಿ ಎಂದಾದರೆ, ನನ್ನ ಪ್ರಭುವಿನ ಮಾರ್ಗದಲ್ಲಿ ಯುದ್ಧ ಮಾಡಲು ನನಗೆ ನೀವು ಅನುಮತಿ ಕೊಡಿರಿ. ಕುಳಿತುಕೊಳ್ಳುವುದಕ್ಕಿಂತ ನನಗೆ ಯುದ್ಧ ಮಾಡುವುದು ಹೆಚ್ಚು ಪ್ರಿಯ.

ಆಗ ಹಝ್ರತ್ ಅಬೂಬಕರ್(ರ) ಹೀಗೆ ಹೇಳಿದರು: ಅಲ್ಲಾಹನು ಅದಕ್ಕೆ ಸಾಕ್ಷಿ, ನಾನು ನಿಮ್ಮನ್ನು ಅಲ್ಲಾಹನಿಗಾಗಿಯೇ ಸ್ವತಂತ್ರಗೊಳಿಸಿದ್ದೆ. ಅದಕ್ಕೆ ಬದಲಾಗಿ ಯಾವುದೇ ರೀತಿಯ ಕೃತಜ್ಞತೆ ಮತ್ತು ಪ್ರತಿಫಲವನ್ನು ಬಯಸುವುದಿಲ್ಲ. ಈ ಭೂಮಿ ಬಹಳ ವಿಶಾಲ. ನೀವು ಇಷ್ಟವಿರುವ ಮಾರ್ಗದಲ್ಲಿ ಹೋಗಿರಿ. ಹಝ್ರತ್ ಬಿಲಾಲ್ ಹೇಳಿದರು: ಹೇ ಸಿದ್ದೀಖ್, ಬಹುಶಃ ನಿಮಗೆ ನನ್ನ ಮಾತು ಇಷ್ಟವಾಗಿಲ್ಲವೆಂದು ತೋರುತ್ತದೆ. ನಿಮಗೆ ನನ್ನ ಮೇಲೆ ಕೋಪವಿರಬೇಕು. ಆಗ ಹಝ್ರತ್ ಅಬೂಬಕರ್(ರ) ಹೇಳಿದರು: ಅಲ್ಲಾಹನಾಣೆ, ನಾನು ನಿಮ್ಮ ಮಾತಿನಿಂದ ಕೋಪಗೊಂಡಿಲ್ಲ. ನೀವು ನನ್ನ ಅಭಿಲಾಷೆಯ ಕಾರಣದಿಂದ ನಿಮ್ಮ ಆಸೆಯನ್ನು ಬಿಡಬೇಕು ಎಂದು ನಾನು ಬಯಸುವುದಿಲ್ಲ. ಏಕೆಂದರೆ, ನಿಮ್ಮ ಈ ಅಭಿಲಾಷೆ ಅಲ್ಲಾಹನ ಅನುಸರಣೆಯ ಕಡೆಗೆ ಕರೆಯುತ್ತಿದೆ. ಹಝ್ರತ್ ಬಿಲಾಲ್(ರ) ಹೇಳಿದರು: ನೀವು ಬಯಸುವಿರಾದರೆ, ನಾನು ನಿಮ್ಮ ಬಳಿ ಇರುವೆನು. ಹಝ್ರತ್ ಅಬೂಬಕರ್(ರ) ಹೇಳಿದರು: ನಿಮ್ಮ ಆಸೆ ಜಿಹಾದ್ ಮಾಡುವುದಾಗಿದ್ದರೆ, ಇಲ್ಲೇ ತಂಗಿರಲು ನಾನು ನಿಮಗೆ ಎಂದಿಗೂ ಆದೇಶ ನೀಡಲಾರೆನು. ಅಧ಼ಾನ್ ನೀಡಲಿಕ್ಕಾಗಿ ಮಾತ್ರ ನಾನು ನಿಮ್ಮನ್ನು ಬಯಸುತ್ತೇನೆ. ಹೇ ಬಿಲಾಲ್, ನಿಮ್ಮ ಅಗಲುವಿಕೆಯಿಂದ ನನಗೆ ಭಯದ ಅನುಭವ ಉಂಟಾಗುತ್ತದೆ. ಆದರೆ ಖಿಯಾಮತ್ ತನಕ ಭೇಟಿಯಾಗದ ಒಂದು ಅಗಲುವಿಕೆ ಅವಶ್ಯ. ಎಲೈ ಬಿಲಾಲ್, ನೀವು ಸತ್ಕರ್ಮ ಮಾಡುತ್ತಾ ಹೋಗಿರಿ, ನೀವು ಈ ಲೋಕವನ್ನು ಬಿಟ್ಟು ಹೋಗುವಾಗ ಇದು ನಿಮ್ಮ ಯಾತ್ರಾ ಸಾಮಾನಾಗುವುದು. ನೀವು ಜೀವಂತರಾಗಿರುವ ತನಕ ಇದು ನಿಮ್ಮ ನೆನಪನ್ನು ಉಳಿಸುವುದು ಮತ್ತು ನೀವು ನಿಧನರಾದರೆ, ಅದರ ಅತ್ಯುತ್ತಮ ಪ್ರತಿಫಲ ನಿಮಗೆ ಸಿಗುವುದು.

ಹಝ್ರತ್ ಬಿಲಾಲ್(ರ) ಹೀಗೆ ಹೇಳಿದರು: ನಾನು ಹಝ್ರತ್ ಪೈಗಂಬರ್(ಸ)ರ ನಂತರ ಬೇರೆ ಯಾರಿಗೆ ಬೇಕಾಗಿಯೂ ಅಧ಼ಾನ್ ನೀಡಲು ಬಯಸುವುದಿಲ್ಲ.

ಅನಂತರ ಅವರು ಹಝ್ರತ್ ಸಈದ್ ಬಿನ್ ಆಮಿರ್ ಬಿನ್ ಹದ್ಇೀಮ್‌ರ ಜೊತೆಗೆ ಹೊರಟು ಹೋದರು. (ಅಲ್‌ಇಕ್ತಿಫಾ ಬಿಮಾ ತಝುಮ್ಮನ ಮಿನ್ ಮಗಾಝಿ..... ಸಂಪುಟ–2, ಭಾಗ–1, ಪುಟ–130–132, ಆಲಿಮುಲ್ ಕುತುಬ್ ಬೈರೂತ್ 1997)

ಅಧ಼ಾನ್‌ಗಾಗಿ ಮಾತ್ರ ಇದನ್ನು ನಿಲ್ಲಿಸುವುದಾದರೆ, ನಾನು ಅಧಾನ್ ನೀಡುವುದಿಲ್ಲ ಎಂಬುದು ನನ್ನ ಆಶಯವಾಗಿದೆ ಏಕೆಂದರೆ ನಾನು ಪ್ರವಾದಿ(ಸ)ರವರ ನಂತರ ಯಾರಿಗಾದರೂ ಅಧಾನ್ ನೀಡಬೇಕೆಂದು ನನ್ನ ಮನಸ್ಸು ಓಪ್ಪುವುದಿಲ್ಲ. ತದನಂತರ, ಇತರ ಜನರು ಹಝ್ರತ್ ಅಬೂಬಕರ್(ರ) ಅವರ ಸುತ್ತಲೂ ಜಮಾಯಿಸಿದರು. ಅವರು ಹಝ್ರತ್ ಮುಆವಿಯಾ(ರ) ಅವರನ್ನು ಅವರ ಮೇಲೆ ನೇಮಿಸಿದರು ಮತ್ತು ಅವರ ಸಹೋದರ ಹಝ್ರತ್ ಯಾಝೀದ್(ರ) ಅವರನ್ನು ಭೇಟಿಯಾಗಲು ಆದೇಶಿಸಿದರು. ಹಝ್ರತ್ ಮುವಾವಿಯಾ(ರ) ಹೊರಟು ಹಝ್ರತ್ ಯಾಝೀದ್(ರ) ಅವರನ್ನು ಭೇಟಿಯಾದರು. ಹಝ್ರತ್ ಮುಆವಿಯಾ(ರ) ಅವರು ಹಝ್ರತ್ ಖಾಲಿದ್ ಬಿನ್ ಸಈದ್(ರ) ಅವರನ್ನು ಹಾದುಹೋದಾಗ, ಅವರ ಉಳಿದ ಸೈನ್ಯವೂ ಹಝ್ರತ್ ಮುವಾವಿಯಾ(ರ) ಅವರೊಂದಿಗೆ ಬಂದು ಸೇರಿದರು. (ತಾರಿಖ್ ಅಲ್–ತಬರಿ, ಭಾಗ–2, ಪುಟ–333, ದಾರ್ ಅಲ್–ಕುತುಬ್ ಅಲ್–ಇಲ್ಮೀಯಾ, ಬೈರುತ್, ಲೆಬನಾನ್, 2012)

ನಂತರ ಹಂಝು ಬಿನ್ ಮಾಲಿಕ್ ಹಮ್ದಾನಿಯವರು ಸೈನ್ಯದೊಂದಿಗೆ ಹಝ್ರತ್ ಅಬೂಬಕರ್(ರ) ಅವರ ಸೇವೆಗೆ ಬಂದರು. ಈ ಸೈನ್ಯದ ಸಂಖ್ಯೆ ಸುಮಾರು ಒಂದು ಸಾವಿರ ಅಥವಾ ಅದಕ್ಕಿಂತ ಹೆಚ್ಚಾಗಿತ್ತು. ಹಝ್ರತ್ ಅಬೂಬಕರ್(ರ) ಅವರ ಸಂಖ್ಯೆ ಮತ್ತು ಸಿದ್ಧತೆಯನ್ನು ನೋಡಿದಾಗ, ಅವರು ತುಂಬಾ ಸಂತೋಷಪಟ್ಟು ಹೇಳಿದರು: ಮುಸ್ಲಿಮರ ಮೇಲೆ ಅಲ್ಲಾಹನ ಈ ಉಪಕಾರಕ್ಕಾಗಿ ಎಲ್ಲಾ ಸ್ತುತಿಗಳು ಅಲ್ಲಾಹನಿಗೆ ಸಲ್ಲುತ್ತವೆ. ಸರ್ವಶಕ್ತನಾದ ಅಲ್ಲಾಹನು ಯಾವಾಗಲೂ ಈ ಜನರ ಮೂಲಕ ಮುಸ್ಲಿಮರಿಗೆ ಸಹಾಯ ಮಾಡುತ್ತಾನೆ ಮತ್ತು ಅವರಿಗೆ ಸೌಕರ್ಯವನ್ನು ಒದಗಿಸುತ್ತಾನೆ. ಅದರ ಮೂಲಕ ಮುಸ್ಲಿಮರು ಅವರ ಬೆನ್ನನ್ನು ಬಲಪಡಿಸುತ್ತದೆ ಮತ್ತು ಅವರ ಶತ್ರುಗಳ ಬೆನ್ನು ಮುರಿಯುತ್ತದೆ.

ನಂತರ ಹಂಝಾ ಅವರು ಹಝ್ರತ್ ಅಬೂಬಕ್ಕರ್(ರ) ಅವರನ್ನು ಕೇಳಿದರು: ನಿಮ್ಮ(ರ) ಹೊರತಾಗಿ ನನ್ನ ಮೇಲೆ ಅಮೀರನ್ನಾಗಿ ಯಾರಾದರೂ ಇರುತ್ತಾರೆಯೇ? ಹಝ್ರತ್ ಅಬೂಬಕರ್ ಹೇಳಿದರು: ಹೌದು, ನಾವು ಮೂವರು ಅಮೀರರನ್ನು ನೇಮಿಸಿದ್ದೇವೆ, ನೀವು ಯಾರೊಂದಿಗೆ ಬೇಕಾದರೂ ಹೋಗಬಹುದು. ನಂತರ ಹಂಝಾ ಮುಸ್ಲಿಮರನ್ನು ಭೇಟಿಯಾಗಿ ಈ ಮಹನೀಯರಲ್ಲಿ ಯಾರು ಉತ್ತಮರು ಮತ್ತು ಪವಿತ್ರ ಪ್ರವಾದಿ(ಸ)ರವರ ಒಡನಾಟದ ವಿಷಯದಲ್ಲಿ ಉತ್ತಮರು ಯಾರು ಎಂದು ವಿಚಾರಿಸಿದಾಗ, ಅವರಿಗೆ ಹಝ್ರತ್ ಅಬು ಉಬೈದಾ ಬಿನ್ ಜರ್ರಾಹ್(ರ) ಎಂದು ಹೇಳಿದರು. ಹಾಗಾಗಿ ಅವರನ್ನು ಭೇಟಿಯಾಗಲು ಹೋದರು. ಇದು ಆ ಜನರ ಪ್ರವಾದಿ (ಸಲ್ಲಲ್ಲಾಹು ಅಲೈಹಿವಸಲ್ಲಮ್) ಅವರ ಪ್ರೀತಿಯ ಅಭಿವ್ಯಕ್ತಿಯಾಗಿದೆ, ಯಾರು ಪವಿತ್ರ ಪ್ರವಾದಿ(ಸ) ಅವರಿಗೆ ಹತ್ತಿರವಾಗಿದ್ದರೂ ಅವರೊಂದಿಗೆ ಇರಬೇಕು ಎಂದು ಬಯಸುತ್ತಿದ್ದರು.

ಅದರ ನಂತರ ಯೋಧರ ಸಂಘಗಳು ಕ್ರಮವಾಗಿ ಮದೀನಕ್ಕೆ ಬರಲು ಶುರುವಾದುವು ಮತ್ತು ಹಝ್ರತ್ ಅಬುಬಕರ್(ರ) ಅವರನ್ನು ಯೋಜನೆಯಮೆರೆಗೆ ಕಳುಹಿಸುತ್ತಲೇ ಇದ್ದರು. ಮತ್ತೊಂದೆಡೆ, ಹಝ್ರತ್ ಅಬು ಉಬೈದಾ(ರ) ಅವರು ಹಝ್ರತ್ ಅಬುಬಕರ್(ರ) ಅವರಿಗೆ ಸಮಾನವಾಗಿ ಬರೆಯುವುದನ್ನು ಮುಂದುವರೆಸಿದರು. ರೋಮನ್ನರು ಮತ್ತು ಅವರ ಅಂಚಿಗೆ ಸೇರಿದ ಗೋತ್ರಗಳು ಮುಸ್ಲಿಮರ ವಿರುದ್ಧ ಹೋರಾಡಲು ಭಾರೀ ಸಂಖ್ಯೆಯಲ್ಲಿ ಒಗ್ಗೂಡುತ್ತಿದ್ದಾರೆ ಹಾಗಾಗಿ ಈ ಸಂದರ್ಭದಲ್ಲಿ ನಾನು ಏನು ಮಾಡಬೇಕು ಎಂದು ಹೇಳಿ. (ಅಲ್–ಇಕ್ತಿಫಾ ಬಾಮಾ ತಝುಮ್ಮನ ಮಿನ್ ಮುಘಾಜಿ ರಸೂಲುಲ್ಲಾ... ಸಂಪುಟ–2, ಭಾಗ–1, ಪುಟಗಳು 133–136, ಆಲಂ ಅಲ್–ಕಿತಾಬ್ ಬೈರುತ್ 1997)

ಹಝ್ರತ್ ಅಬೂ ಉಬೈದ(ರ) ನಿರಂತರವಾಗಿ ಪತ್ರಗಳನ್ನು ಬರೆದ ಕಾರಣದಿಂದ ಹಝ್ರತ್ ಖಾಲಿದ್ ಬಿನ್ ವಲೀದ್(ರ)ರನ್ನು ಸಿರಿಯಗೆ ಕಳುಹಿಸಲು ತೀರ್ಮಾನಿಸಲಾಯಿತು. ಹಝ್ರತ್ ಖಾಲಿದ್(ರ) ಆ ಸಮಯದಲ್ಲಿ ಇರಾಕಿನಲ್ಲಿದ್ದರು. ಸಿರಿಯಗೆ ಹೋಗಲು ಮತ್ತು ಅಲ್ಲಿಯ ಇಸ್ಲಾಮಿನ ಸೈನಿಕರ ನಾಯಕತ್ವವನ್ನು ವಹಿಸಿಕೊಳ್ಳಲು ಹಝ್ರತ್ ಖಾಲಿದ್(ರ)ರಿಗೆ ಹಝ್ರತ್ ಅಬೂಬಕರ್(ರ) ನಿರ್ದೇಶನ ನೀಡಿದಾಗ ಹಝ್ರತ್ ಅಬೂ ಉಬೈದ(ರ)ರಿಗೆ ಅವರು ಹೀಗೆ ಪತ್ರ ಬರೆದರು: ಸಿರಿಯದಲ್ಲಿ ಮುಸ್ಲಿಮರ ಯುದ್ಧದ ನೇತೃತ್ವವನ್ನು ಹಝ್ರತ್ ಖಾಲಿದ್ ಬಿನ್ ವಲೀದ್(ರ)ರಿಗೆ ನಾನು ಒಪ್ಪಿಸಿದ್ದೇನೆ. ನೀವು ಅವರನ್ನು ವಿರೋಧಿಸಬೇಡಿರಿ, ಅವರ ಮಾತನ್ನು ಆಲಿಸಿರಿ ಮತ್ತು ಅವರ ಆದೇಶವನ್ನು ಅನುಸರಿಸಿರಿ. ನಾನು ಅವರನ್ನು ನಿಮ್ಮ ಮೇಲೆ ಅಧಿಕಾರಿಯನ್ನಾಗಿ ನೇಮಿಸಲು ಕಾರಣ ಅವರು ನಿಮಗಿಂತ ಶ್ರೇಷ್ಠರಾಗಿರುವರು ಎಂದರ್ಥವಲ್ಲ. ಬದಲಾಗಿ ಅವರು ಯುದ್ಧತಂತ್ರಗಳನ್ನು ನಿಮಗಿಂತ ಹೆಚ್ಚು ಬಲ್ಲವರು ಆಗಿರುವರು. ಅಲ್ಲಾಹನು ನಮಗೂ ನಿಮಗೂ ಒಳಿತು ದಯಪಾಲಿಸಲಿ. ವಸ್ಸಲಾಮ್. (ಅಲ್‌ಇಕ್ತಿಫಾ ಬಿಮಾ ತಝುಮ್ಮನ ಮಿನಲ್ ಮಗಾಝಿ ರಸೂಲಲ್ಲಾಹ್....... ಸಂಪುಟ–2, ಭಾಗ–1, ಪುಟ–148, ಆಲಿಮುಲ್ ಕುತುಬ್ ಬೈರೂತ್ 1997) (ತಾರೀಖ್ ಅಲ್‌ಖಮೀಸ್, ಸಂಪುಟ–3, ಪುಟ–220)

ಇರಾಕ್‌ನಿಂದ ಸಿರಿಯಾಕ್ಕೆ ಹಝ್ರತ್ ಖಾಲಿದ್(ರ) ನಿರ್ಗಮಿಸಿದ ಬಗ್ಗೆ, ಹಝ್ರತ್ ಅಬೂಬಕರ್(ರ) ಅವರ ಪತ್ರವನ್ನು ಹಝ್ರತ್ ಖಾಲಿದ್(ರ) ಸ್ವೀಕರಿಸಿದಾಗ, ಅವರು ಎಂಟು ನೂರು ಅಥವಾ ಆರು ನೂರು ಅಥವಾ ಐದು ನೂರು ಅಥವಾ ಸಾವಿರ, ಒಂಬತ್ತು ಸಾವಿರದವರೆಗೆ ವಿವಿಧ ವರದಿಗಳಿವೆ ಎಂದು ಬರೆಯಲಾಗಿದೆ. ಅವರು ತಮ್ಮ ಆ ಪಡೆಯೊಂದಿಗೆ ಸಿರಿಯಾಗೆ ತೆರಳಿದರು. ಕೆಲವು ವರದಿಗಳಲ್ಲಿ ನೂರಾರು ಎಂದು ಬರುತ್ತದೆ, ಕೆಲವುಗಳಲ್ಲಿ ಸಾವಿರಗಳಲ್ಲಿ ಇವೆ. ಆದಾಗ್ಯೂ, ಅವರು ಸಿರಿಯಾಗೆ ತೆರಳಿದರು. ಹಝ್ರತ್ ಖಾಲಿದ್ ಬಿನ್ ವಲೀದ್(ರ) ಕರಾಕಿರ್ ಸ್ಥಳವನ್ನು ತಲುಪಿದಾಗ, ಅವರು ಅಲ್ಲಿದ್ದ ಜನರ ಮೇಲೆ ದಾಳಿ ಮಾಡಿದರು ಮತ್ತು ಮರುಭೂಮಿಯನ್ನು ದಾಟಿ ಮತ್ತು ಅತ್ಯಂತ ಕಷ್ಟಕರವಾದ ಪ್ರಯಾಣವನ್ನು ಮಾಡಿದ ನಂತರ ಅವರು ತನ್ನ ಕಪ್ಪು ಬಾವುಟವನ್ನು ಬೀಸುತ್ತಾ ಡಮಾಸ್ಕಸ್ ಬಳಿಯ ಸನೀಯತ್ ಅಲ್–ಉಕಾಬ್ ತಲುಪಿದರು.

ಇದಕ್ಕೆ ಸಂಬಂಧಿಸಿದಂತೆ, ಈ ಧ್ವಜದ ಬಗ್ಗೆ ಬರೆಯಲಾಗಿದೆ ಅದು ಪ್ರವಾದಿ(ಸ) ಅವರ ಧ್ವಜವಾಗಿತ್ತು ಅದರ ಹೆಸರು ಉಕಾಬ್ ಎಂದಾಗಿತ್ತು. ಈ ಧ್ವಜದ ಕಾರಣದಿಂದಾಗಿ, ಈ ಘಾಟಿಯ ಹೆಸರನ್ನು ಥಾನಿಯಾ–ಉಲ್–ಉಕಾಬ್ ಎಂದೂ ಕರೆಯಲಾಗುತ್ತಿತ್ತು.
(ಅಲ್–ಕಮಲ್ ಫಿ ಅಲ್–ತಾರಿಖ್, ಸಂಪುಟ–2, ಪುಟಗಳು 256–258, ದಾರುಲ್ ಕಿತಾಬ್ ಅಲ್–ಇಲಮಿಯಾ ಬೈರುತ್ 2006)

(ಹಝ್ರತ್ ಅಬೂಬಕರ್ ಸಿದ್ದೀಖ್(ರ) ಅಕ್ಬರ್, ಮುಹಮ್ಮದ್ ಹುಸೈನ್ ಹೈಕಲ್, ಅನುವಾದ ಶೇಖ್ ಮಯಹಮ್ಮದ್ ಅಹ್ಮದ್ ಪನೀಪತಿ, ಪುಟ-350. ಇಲ್ಮೊ ಇರ್ಫಾನ್ ಪಬ್ಲೀಷರ್ಸ್ ಲಾಹೋರ್ 2004)

ಅದರ ನಂತರ, ಹಝ್ರತ್ ಖಾಲಿದ್(ರ) ಡಮಾಸ್ಕಸ್‌ನ ಪೂರ್ವ ದ್ವಾರದಿಂದ ಒಂದು ಮೈಲಿ ದೂರದಲ್ಲಿದ್ದರು. ಹಝ್ರತ್ ಅಬು ಉಬೈದಾ(ರ) ಅವರನ್ನು ಇಲ್ಲಿ ಭೇಟಿಯಾದರು ಮತ್ತು ಶತ್ರುಗಳ ಮುತ್ತಿಗೆಯು ಅದೇ ದಿನದಲ್ಲಿ ಪ್ರಾರಂಭವಾಯಿತು ಎಂದು ಕೆಲವು ವರದಿಗಳಲ್ಲಿ ಉಲ್ಲೇಖಿಸಲಾಗಿದೆ. ಕೆಲವು ವರದಿಗಳಲ್ಲಿ ಹಝ್ರತ್ ಖಾಲಿದ್(ರ) ಡಮಾಸ್ಕಸ್‌ನ ಮುಂದೆ ದೀರ್ಘಕಾಲ ಉಳಿಯದೆ ಮುಂದೆ ಹೋಗಿ ಕನಾತ್-ಎ-ಬುಸ್ರಾವನ್ನು ತಲುಪಿದರು ಎಂದು ಉಲ್ಲೇಖಿಸಲಾಗಿದೆ. ಹಝ್ರತ್ ಖಾಲಿದ್ ಬಿನ್ ವಲೀದ್(ರ) ಮುಸ್ಲಿಮರೊಂದಿಗೆ ಬುಸ್ರಾವನ್ನು ತಲುಪಿದಾಗ, ಎಲ್ಲಾ ಸೈನ್ಯಗಳು ಇಲ್ಲಿ ಜಮಾಯಿಸಿದರು ಮತ್ತು ಅವರೆಲ್ಲರೂ ಅವರನ್ನು ಇಲ್ಲಿ ಯುದ್ಧದಲ್ಲಿ ತಮ್ಮ ಅಮೀರ್‌ನನ್ನಾಗಿ ಮಾಡಿದರು. ಅವರು ನಗರವನ್ನು ಮುತ್ತಿಗೆ ಹಾಕಿದರು. ಈ ಯುದ್ಧದ ನಾಯಕ ಹಝ್ರತ್ ಯಝೀದ್ ಬಿನ್ ಅಬು ಸುಫ್ಯಾನ್(ರ) ಎಂದು ಕೆಲವರು ಹೇಳುತ್ತಾರೆ, ಏಕೆಂದರೆ ಅದು ಡಮಾಸ್ಕಸ್‌ನ ನಿಯಂತ್ರಣದಲ್ಲಿದೆ, ಅದರಲ್ಲಿ ಅವರು ಗವರ್ನರ್ ಮತ್ತು ನಾಯಕರಾಗಿದ್ದರು. ಈ ಸ್ಥಳದ ನಿವಾಸಿಗಳು ಮುಸ್ಲಿಮರಿಗೆ ಜಿಝ್ಯ ಕೊಡುವೆವು ಮತ್ತು ಮುಸ್ಲಿಮರು ಅವರ ಜೀವಗಳಿಗೆ, ಸಂಪತ್ತುಗಳಿಗೆ ಮತ್ತು ಮಕ್ಕಳಿಗೆ ಅಭಯ ನೀಡಬೇಕು ಎಂಬುವುದಾಗಿ ಅಲ್ಲಿಯ ನಿವಾಸಿಗಳು ಒಪ್ಪಂದ ಮಾಡಿಕೊಂಡರು. (ಫ್‌ತೂಹುಲ್ ಬಲದಾನ್ ಲಿಲ್ ಬಲಾಝುರಿ, ಪುಟ-174, ಅನುವಾದ ಅಬು;ಲ್ ಖೈರ್ ಮೌದೂದಿ, ನಫೀಸ್ ಅಕಾಡಮಿ ಲಾಹೋರ್ 1986) (ಹಝ್ರತ್ ಅಬೂಬಕರ್ ಸಿದ್ದೀಖ್(ರ) ಮುಹಮ್ಮದ್ ಹುಸೈನ್ ಹೈಕಲ್, ಅನುವಾದ ಶೇಖ್ ಮುಹಮ್ಮದ್ ಅಹ್ಮದ್ ಪಾನೀಪತಿ, ಪುಟ-351, ಇಲ್ಮೊ ಇರ್ಫಾನ್ ಪಬ್ಲೀಷರ್ಸ್ ಲಾಹೋರ್ 2004)

ಮುಂದಿನದು ಅಜ್‌ನಾದೈನ್ ಅಥವಾ ಅಜ್ನಾದೀನ್ ಯುದ್ಧವಾಗಿದೆ. ಅದರ ಬಗ್ಗೆ ಹೀಗೆ ಬರೆಯಲಾಗಿದೆ: ಇದು ಪ್ಯಾಲೆಸ್ಟೈನ್‌ನ ಉಪನಗರಗಳಲ್ಲಿ ಒಂದು ಪ್ರಸಿದ್ಧ ಊರಿನ ಹೆಸರಾಗಿದೆ. (ಮುಜಮುಲ್ ಬಲದಾನ್, ಸಂಪುಟ-1, ಪುಟ-129, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಬಸ್ರಾದ ವಿಜಯದ ನಂತರ ಹಝ್ರತ್ ಅಬೂ ಉಬೈದ(ರ), ಹಝ್ರತ್ ಶುರಹ್‌ಬೀಲ್(ರ), ಹಝ್ರತ್ ಯಝೀದ್(ರ)ರನ್ನು ಜೊತೆಗೆ ಸೇರಿಸಿಕೊಂಡು ಹಝ್ರತ್ ಖಾಲಿದ್(ರ) ಹಝ್ರತ್ ಅಮ್ರ್ ಬಿನ್ ಆಸ್(ರ)ರ ನೆರವಿಗಾಗಿ ಪೆಲಸ್ತೀನಿಗೆ ಹೊರಟರು. ಆ ಸಮಯದಲ್ಲಿ ಹಝ್ರತ್ ಅಮ್ರ್(ರ) ಪೆಲಸ್ತೀನಿನ ತಗ್ಗು ಪ್ರದೇಶದಲ್ಲಿ ಇದ್ದರು. ಇಸ್ಲಾಮಿನ ಸೇನೆಯೊಂದಿಗೆ ಬಂದು ಸೇರಲು ಅವರು ಬಯಸುತ್ತಿದ್ದರು. ಆದರೆ ರೋಮಿನ ಸೇನೆ ಅವರನ್ನು ಹಿಂಬಾಲಿಸುತ್ತಿತ್ತು ಮತ್ತು ಅವರನ್ನು ಯುದ್ಧ ಮಾಡುವಂತೆ ಮಾಡುವ ಪ್ರಯತ್ನದಲ್ಲಿತ್ತು. ಮುಸ್ಲಿಮರ ಆಗಮನದ ಬಗ್ಗೆ ರೋಮನರಿಗೆ ಸುದ್ದಿ ಮುಟ್ಟಿದಾಗ ಅವರು ಅಜ್ನಾದೀನಿನ ಕಡೆಗೆ ಸಾಗಿದರು. ಇಸ್ಲಾಮಿನ ಸೈನ್ಯದ ಆಗಮನದ ಬಗ್ಗೆ ಹಝ್ರತ್ ಅಮ್ರ್(ರ)ರಿಗೆ ಗೊತ್ತಾದಾಗ ಅವರು ಅಲ್ಲಿಂದ ಹೊರಟು ಇಸ್ಲಾಮಿನ ಸೈನ್ಯವನ್ನು ಭೇಟಿಯಾದರು. ಅನಂತರ ಎಲ್ಲರೂ ಅಜ್ನಾದೀನ್ ಪ್ರದೇಶದಲ್ಲಿ ಒಟ್ಟುಸೇರಿದರು ಮತ್ತು ರೋಮನರ ಎದುರಾಗಿ ಪಂಕ್ತಿಬದ್ಧರಾದರು. (ತಾರೀಖ್ ಅತ್ತಬರಿ, ಸಂಪುಟ-2, ಪುಟ-346-347, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1987) (ಅಲ್‌ಖಲೀಫತುಲ್ ಅವ್ವಲ್ ಅಬೂಬಕರ್ ಸಿದ್ದೀಖ್(ರ) ಶಖ್ಸಿಯ್ಯತ್ ಔರ್ ಕಾರ್ನಾಮೆ, ಅಸ್ಸಲಾಬಿ, ಪುಟ-312, ದಾರುಲ್ ಮಾರಿಫ)

ಇನ್ನೊಂದು ವರದಿಯ ಪ್ರಕಾರ ಹಝ್ರತ್ ಖಾಲಿದ್(ರ) ಅವರು ಅಜ್ನಾದೈನ್‌ಗೆ ಹೋಗುವ ಮೊದಲು ಬುಸ್ರಾ ಬದಲಿಗೆ ಡಮಾಸ್ಕಸ್ ಅನ್ನು ಮುತ್ತಿಗೆ ಹಾಕುತ್ತಿದ್ದರು ಮತ್ತು ಹಝ್ರತ್ ಅಬು ಉಬೈದಾ(ರ) ಅವರು ಸಹ ಜೊತೆಗಿದ್ದರು. ಈ ಮುತ್ತಿಗೆಯ ಸಮಯದಲ್ಲಿ, ಡಮಾಸ್ಕಸ್‌ನ ಜನರಿಗೆ ಸಹಾಯ ಮಾಡಲು ಹರ್ಕಲ್ ಸೈನ್ಯವನ್ನು ಕಳುಹಿಸಿದನು, ಅವರೊಂದಿಗೆ ಮುಸ್ಲಿಮರು ಘರ್ಷಣೆ ಮಾಡಿದರು, ಇದನ್ನು ಡಮಾಸ್ಕಸ್ ವಿಜಯದ ಅಡಿಯಲ್ಲಿ ವಿವರಿಸಲಾಗುವುದು.(ಹಝ್ರತ್ ಸಯ್ಯದುನಾ ಅಬೂಬಕರ್ ಸಿದ್ದೀಖ್(ರ) ಮುಹಮ್ಮದ್ ಹುಸೈನ್ ಹೈಕಲ್, ಪುಟ-379-380, ಬುಕ್ ಕಾರ್ನರ್ ಶೋ ರೂಂ ಜ್ಹೇಲಮ್)

ಆದಾಗ್ಯೂ, ಡಮಾಸ್ಕಸ್‌ನ ಮುತ್ತಿಗೆಯ ಸಮಯದಲ್ಲಿ, ಹಝ್ರತ್ ಖಾಲಿದ್(ರ) ಮತ್ತು ಹಜರತ್ ಅಬು ಉಬೈದಾ(ರ) ತಿಳಿದು ಬಂದ ವಿಷಯವೇನೆಂದರೆ ಹಿಮ್ಸ್‌ನ ದೊರೆ ಹಝ್ರತ್ ಶುರಹ್‌ಬೀಲ್ ಬಿನ್ ಹಸ್ನಾ(ರ) ಅವರ ಮಾರ್ಗವನ್ನು ಕತ್ತರಿಸಲು ಒಂದು ಸೈನ್ಯವನ್ನು ಒಟ್ಟುಗೂಡಿಸಿದ್ದಾನೆ ಆ ಸಂದರ್ಭದಲ್ಲಿ ಅವರು ಬುಸ್ರದಲ್ಲಿಯೇ ಇದ್ದರು. ಅದೇ ರೀತಿ ರೋಮನ್ನರ ಒಂದು ದೊಡ್ಡ ಸೈನ್ಯವು ಅಜ್ನಾದೈನ್‌ನಲ್ಲಿ ಬಂದು ಇಳಿದಿದ್ದಾರೆ ಎಂದು ತಿಳಿದು ಬಂತು. ಈ ಸುದ್ದಿಯು ಹಝ್ರತ್ ಖಾಲಿದ್(ರ) ಮತ್ತು ಹಝ್ರತ್ ಅಬು ಉಬೈದಾ(ರ) ಅವರನ್ನು ಚಿಂತೆಗೀಡುಮಾಡಿತು ಏಕೆಂದರೆ ಅವರು ಆ ಸಮಯದಲ್ಲಿ ಡಮಾಸ್ಕಸ್‌ನ ಜನರೊಂದಿಗೆ ಯುದ್ಧದಲ್ಲಿ ತೊಡಗಿದ್ದರು. ಹಝ್ರತ್ ಖಾಲಿದ್(ರ) ಮತ್ತು ಹಝ್ರತ್ ಅಬು ಉಬೈದಾ(ರ) ಈ ಕುರಿತು ಪರಸ್ಪರ ಸಮಾಲೋಚನೆ ನಡೆಸಿದರು. ಹಝ್ರತ್ ಅಬು ಉಬೈದಾ(ರ) ಹೇಳಿದರು, "ಶತ್ರುಗಳು ಅವನನ್ನು ತಲುಪುವ ಮೊದಲು ನಾವು ಇಲ್ಲಿಂದ ಹೋಗಿ ಹಝ್ರತ್ ಶುರಹ್‌ಬೀಲ್ ಅನ್ನು ತಲುಪಬೇಕು" ಎಂದು ನನ್ನ ಅಭಿಪ್ರಾಯ. ಹಝ್ರತ್ ಖಾಲೀದ್(ರ) ಅವರು ಹಝ್ರತ್ ಶುರಹ್‌ಬೀಲ್ ಕಡೆಗೆ ಹೋದರೆ ಅಜ್ನಾದೈನ್‌ನಲ್ಲಿರುವ ರೋಮನ್ ಸೈನ್ಯವು ನಮ್ಮನ್ನು ಹಿಂಬಾಲಿಸುತ್ತದೆ, ಆದ್ದರಿಂದ ಅಜ್ನಾದೈನ್‌ನಲ್ಲಿರುವ ಅದೇ ದೊಡ್ಡ ಸೈನ್ಯವನ್ನು ಗುರಿಯಾಗಿಟ್ಟುಕೊಂಡು ಹಝ್ರತ್ ಶುರಹ್‌ಬೀಲ್‌ಗೆ ಸಂದೇಶವನ್ನು ಕಳುಹಿಸಬೇಕು ಎಂದು ನನ್ನ ಅಭಿಪ್ರಾಯವಾಗಿದೆ ಎಂದು ಹೇಳಿದರು. ಅವರ ಕಡೆಗೆ ಶತ್ರುಗಳ ತಂತ್ರದ ಬಗ್ಗೆ ಮತ್ತು ಅಜ್ನಾದೈನ್‌ನಲ್ಲಿ ನಮ್ಮೊಂದಿಗೆ ಬಂದು ಸೇರಲು ಹೇಳಿರಿ. ಅಂತೆಯೇ, ನಾವು ಹಝ್ರತ್ ಯಾಝೀದ್ ಬಿನ್ ಅಬು ಸುಫ್ಯಾನ್(ರ) ಮತ್ತು ಹಝ್ರತ್ ಅಮ್ರ್(ರ) ಅವರನ್ನು ಅಜ್ನಾದೈನ್‌ಗೆ ಬಂದು ಸೇರಲು ಕಳುಹಿಸಿದ್ದೇವೆ ಮತ್ತು ನಂತರ ನಾವು ನಮ್ಮ ಶತ್ರುಗಳೊಂದಿಗೆ ಹೋರಾಡುತ್ತೇವೆ. ಈ ಬಗ್ಗೆ ಹಝ್ರತ್ ಅಬು ಉಬೈದಾ(ರ) ಅವರು ಈ ಅಭಿಪ್ರಾಯವು ತುಂಬಾ ಒಳ್ಳೆಯದು, ಅಲ್ಲಾಹನು ಇದರಲ್ಲಿ ಅನುಗ್ರಹವನ್ನು ನೀಡಲಿ ಎಂದು ಹೇಳಿದರು. ಇದರ ಮೇಲೆ ಕಾರ್ಯನಿರ್ವಹಿಸಿರಿ.

ಒಂದು ವರದಿಯ ಪ್ರಕಾರ, ಹಝ್ರತ್ ಅಬು ಉಬೈದಾ(ರ) ಅವರು ಹಜರತ್ ಖಾಲಿದ್(ರ) ಅವರಿಗೆ ಸಲಹೆ ನೀಡಿದರು, ನಮ್ಮ ಸೈನ್ಯವು ಸಿರಿಯಾದ ವಿವಿಧ ಸ್ಥಳಗಳಲ್ಲಿ ಚದುರಿಹೋಗಿದೆ. ಆದುದರಿಂದ ಅವರೆಲ್ಲರಿಗೂ ಅಜ್ನಾದೈನ್ ಸ್ಥಳಕ್ಕೆ ಬಂದು ಭೇಟಿಯಾಗಬೇಕೆಂದು ಪತ್ರ ಬರೆಯಬೇಕು ಎಂದು ಸಲಹೆ ನೀಡಿದರು. ಹಾಗಾಗಿ ಹಝ್ರತ್ ಖಾಲಿದ್(ರ) ದಮಾಸ್ಕಸ್ ನಿಂದ ಅಜ್ನಾದೈನ್‌ಗೆ ಹೋಗಲು ಯೋಚಿಸಿದಾಗ ಎಲ್ಲ ಅಮೀರರಿಗೆ ಅಜ್ನಾದೈನ್‌ನಲ್ಲಿ ಒಗ್ಗೂಡಲು ಪತ್ರ ಬರೆದರು. ಹಝ್ರತ್ ಖಾಲಿದ್(ರ) ಮತ್ತು ಹಝ್ರತ್ ಅಬು ಉಬೈದಾ(ರ) ಕೂಡ ಡಮಾಸ್ಕಸ್ ಮುತ್ತಿಗೆಯನ್ನು ಜನರೊಂದಿಗೆ ಬಿಟ್ಟು ಅಜ್ನಾದೈನ್‌ನ ಜನರ ಕಡೆಗೆ ಅತೀ ವೇಗದಿಂದ ಹೊರಟರು. ಹಝ್ರತ್ ಅಬು ಉಬೈದಾ(ರ) ಸೇನೆಯ ಹಿಂಭಾಗದಲ್ಲಿದ್ದರು. ಡಮಾಸ್ಕಸ್‌ನ ಜನರು ಹಝ್ರತ್ ಅಬು ಉಬೈದಾ(ರ) ಅವರನ್ನು ಹಿಂಬಾಲಿಸಿದರು ಮತ್ತು ಅವರನ್ನು ಸುತ್ತುವರೆದರು, ಅವರು ಇನ್ನೂರು ಜನರೊಂದಿಗೆ ಇದ್ದರು. ವಾಸ್ತವವಾಗಿ, ಇದು ಮಹಿಳೆಯರು, ಮಕ್ಕಳು ಮತ್ತು ಆಸ್ತಿಯನ್ನು ಒಳಗೊಂಡಿರುವ ಒಂದು ಪಡೆಯಾಗಿತ್ತು. ಒಂದು ವರದಿಯ ಪ್ರಕಾರ, 1000 ಸವಾರರು ಸಹ ಅವರನ್ನು ಮೇಲ್ವಿಚಾರಣೆ ಮಾಡಲು ಮತ್ತು ರಕ್ಷಿಸಲು ಅಲ್ಲಿದ್ದರು. ಡಮಾಸ್ಕಸ್‌ನ ಜನರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಆದಾಗ್ಯೂ, ಹಃಝ್ರತ್ ಅಬು ಉಬೈದಾ(ರ) ಅವರೊಂದಿಗೆ ತೀವ್ರವಾಗಿ ಹೋರಾಡಿದರು. ಈ ಸುದ್ದಿಯು ಸವಾರರೊಂದಿಗೆ ಸೈನ್ಯದ ಮುಂಭಾಗದಲ್ಲಿದ್ದ ಹಝ್ರತ್ ಖಾಲಿದ್‌ಗೆ ತಲುಪಿದಾಗ, ಅವರು ಹಿಂತಿರುಗಿದರು ಮತ್ತು ಅವನೊಂದಿಗೆ ಇತರರೂ ಹಿಂತಿರುಗಿದರು. ನಂತರ ಅಶ್ವಸೈನ್ಯವು ರೋಮನ್ನರನ್ನು ಹಲ್ಲೆ ಮಾಡಿ ಮೂರು ಮೈಲುಗಳಷ್ಟು ಹಿಂದಕ್ಕೆ ಓಡಿಸಿತು, ಅವರು ಮತ್ತೆ ಡಮಾಸ್ಕಸ್ಗೆ ಪ್ರವೇಶಿಸುವವರೆಗೂ ಒಬ್ಬರ ಮೇಲೆ ಒಬ್ಬರು ಬೀಳುತ್ತಿದ್ದರು. ಮತ್ತೊಂದೆಡೆ, ಅಜ್ನಾದೈನ್‌ನಲ್ಲಿ ನೆಲೆಸಿದ್ದ ರೋಮನ್ ಸೈನ್ಯವು ತಮ್ಮ ಎರಡನೇ ಸೈನ್ಯಕ್ಕೆ ಪತ್ರವನ್ನು ಕಳುಹಿಸಿತು ಮತ್ತು ಅವರನ್ನೂ ಅಜ್ನಾದೈನ್‌ಗೆ ಬರುವಂತೆ ಸೂಚಿಸಿತು. ರೋಮನ್ನರ ಈ ಸೈನ್ಯವು ಹಝ್ರತ್ ಶುರಹ್‌ಬೀಲ್ ಮೇಲೆ ದಾಳಿ ಮಾಡುವ ಉದ್ದೇಶದಿಂದ ಬುಸ್ರಾ ಕಡೆಗೆ ಹೋಗುತ್ತಿತ್ತು, ಆದ್ದರಿಂದ ಸೈನ್ಯವೂ ಅಜ್ನಾದೈನ್‌ಗೆ ಬಂದಿತು. ಅದೇ ರೀತಿಯಲ್ಲಿ, ಹಝ್ರತ್ ಖಾಲಿದ್(ರ) ಅವರ ಸೂಚನೆಯ ಮೇರೆಗೆ, ಎಲ್ಲಾ ಇಸ್ಲಾಮಿಕ್ ಸೈನ್ಯಗಳು ಸಹ ಅಜ್ನಾದೈನ್‌ನಲ್ಲಿ ಒಟ್ಟುಗೂಡಿದವು. (ತಾರೀಖ್ ಅಲ್‌ಖಮೀಸ್, ಸಂಪುಟ-3, ಪುಟ-228ತ230, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2009) (ಮರ್ದಾನೆ ಅರಬ್, ಪುಟ-214,216)

ರೋಮನ್‌ನ ಸೇನಾಧಿಪತಿಯು ಮುಸ್ಲಿಮರಿಗೆ ಏನನ್ನಾದರೂ ನೀಡುವ ಮೂಲಕ ಅವರನ್ನು ಹಿಂದಕ್ಕೆ ಕಳುಹಿಸಲು ಬಯಸಿದ್ದನು ಏಕೆಂದರೆ ಇರಾನಿಯನ್ನರಂತೆ ಅವರು ಹಸಿವಿನಿಂದ ಮತ್ತು ಬೆತ್ತಲೆ ಜನರು ಎಂದು ಭಾವಿಸಿದ್ದನು. ಬಡವರು ತಮ್ಮ ದೇಶದಿಂದ ಲೂಟಿ ಮಾಡಲು ಬಂದಿದ್ದಾರೆ. ಶತಮಾನಗಳ ಅಸಂಸ್ಕೃತ, ಅಜ್ಞಾನಿ, ನಿರ್ಗತಿಕ ಅರಬ್ಬರಿಗಿಂತ ಉನ್ನತ

ಉದ್ದೇಶವನ್ನು ಅವನು ಊಹಿಸಲು ಸಾಧ್ಯವಾಗಲಿಲ್ಲ. ಆದ್ದರಿಂದ ಅವನು ಹಝ್ರತ್ ಖಾಲಿದ್(ರ) ಅವರಿಗೆ ಅವನು ಮತ್ತು ಅವನ ಸೈನ್ಯವು ಹೀಗೆ ಕಾಣಿಕೆಯನ್ನು ನೀಡಿದರು: ಒಂದು ವೇಳೆ ನೀವೆಲ್ಲರು ಮರಳಿ ಹೋದರೆ ನಿಮ್ಮಲ್ಲಿ ಪ್ರತಿಯೊಬ್ಬ ಸೈನಿಕನಿಗೆ ಒಂದು ಮುಂಡಾಸು, ಒಂದು ಜೊತೆ ಬಟ್ಟೆ ಮತ್ತು ಚಿನ್ನದ ದಿನಾರ್ ನೀಡಲಾಗುವುದು. ಸೇನೆಯ ಕಮಾಂಡರ್‌ಗೆ ಹತ್ತು ಜೋಡಿ ಬಟ್ಟೆಗಳು ಮತ್ತು ನೂರು ಚಿನ್ನದ ದಿನಾರ್‌ಗಳು ಮತ್ತು ಖಲೀಫಾಗೆ ನೂರು ಜೋಡಿ ಬಟ್ಟೆಗಳು ಮತ್ತು ಒಂದು ಸಾವಿರ ದಿನಾರ್‌ಗಳು ನೀಡಲಾಗುವುದು ಎಂದು ಪ್ರಸ್ತಾಪ ನೀಡಿದರು. ಹೀಗೆ ಇವರು ದರೋಡೆಕೋರರು ಎಂದು ಹೇಳಿದನು. ಇಷ್ಟನ್ನು ನೀಡಿ ಕಳುಹಿಸಿ. ಅದರ ಬಗ್ಗೆ ಗೊತ್ತಾದಾಗ ಹಝ್ರತ್ ಖಾಲಿದ್(ರ) ಈ ಕಾಣಿಕೆಯನ್ನು ಬಹಳ ತುಚ್ಛವಾಗಿ ಕಂಡು ತಿರಸ್ಕರಿಸಿದರು ಮತ್ತು ಬಹಳ ಕಠುವಾಗಿ ಹೇಳಿದರು: ರೋಮನ್ನರೇ! ನಾವು ನಿಮ್ಮ ದಾನವನ್ನು ತಿರಸ್ಕಾರದಿಂದ ತಿರಸ್ಕರಿಸುತ್ತೇವೆ ಏಕೆಂದರೆ ಶೀಘ್ರದಲ್ಲೇ ನಾವು ನಿಮ್ಮ ಸಂಪತ್ತು, ನಿಮ್ಮ ಕುಟುಂಬಗಳು ಮತ್ತು ನಿಮ್ಮ ಜಾತಿಗಳ ಮಾಲೀಕರಾಗುತ್ತೇವೆ.
(ಅಶ್ರಹ್ ಮುಬಶ್ಶಿರಹ್, ಬಶೀರ್ ಸಾಜಿದ್, ಪುಟ 156–157, ಅಲ್ ಬದ್ರ್ ಪಬ್ಲಿಕೇಷನ್ಸ್ ಲಾಹೋರ್)

ಇರುಪಕ್ಷಗಳ ಸೈನ್ಯ ಸಮೀಪವಾದಾಗ, ರೋಮನರ ಒಬ್ಬ ಸರದಾರ ಅರೇಬಿಯನಾದ ಒಬ್ಬ ವ್ಯಕ್ತಿಯನ್ನು ಕರೆದು ಮುಸ್ಲಿಮರ ನಡುವೆ ನುಗ್ಗಿ ಒಂದು ದಿನ ರಾತ್ರಿ ತಂಗಲು ಮತ್ತು ಮುಸ್ಲಿಮರ ಬಗ್ಗೆ ಸುದ್ದಿ ತರಲು ಹೇಳಿದನು. ಅವನು ಮುಸ್ಲಿಮನಾಗಿರಲಿಲ್ಲ. ಅವನು ಮುಸ್ಲಿಮರ ಎಡೆಯಲ್ಲಿ ನುಗ್ಗಿದನು. ಅರೇಬಿಯದ ವ್ಯಕ್ತಿಯಾದ ಕಾರಣದಿಂದ ಯಾರಿಗೂ ಅವನು ಅಪರಿಚಿತನೆಂದು ತೋರಲಿಲ್ಲ. ಒಂದು ದಿನರಾತ್ರಿ ಅವನು ತಂಗಿದನು. ಅನಂತರ ರೋಮನ್ ಸರದಾರನ ಬಳಿಗೆ ಮರಳಿ ಹೋದನು. ಏನು ಸುದ್ದಿ ತಂದಿದ್ದೀಯ ಎಂದು ಅವನು ಕೇಳಿದನು. ಅವನು ಹೇಳಿದನು: ಸುದ್ದಿ ಕೇಳುತ್ತಿರುವಿರಿ ಎಂದಾದರೆ, ಸುದ್ದಿ ಏನೆಂದರೆ, ಅವರು ರಾತ್ರಿ ಸಮಯದಲ್ಲಿ ಆರಾಧನೆ ಮಾಡುತ್ತಾರೆ ಮತ್ತು ದಿನದಲ್ಲಿ ಯುದ್ಧ ಮಾಡುತ್ತಾರೆ. ಅವರ ನಡುವೆ ನ್ಯಾಯಪಾಲನೆ ಮಾಡಲಿಕ್ಕೋಸ್ಕರ ಅರಸನ ಮಗನು ಕೂಡ ಕಳ್ಳತನ ಮಾಡಿದರೆ ಅವನ ಕೈಯನ್ನು ಕಡಿಯುತ್ತಾರೆ. ವ್ಯಭಿಚಾರ ಮಾಡಿದರೆ ಕಲ್ಲೆಸೆದು ಕೊಲ್ಲುತ್ತಾರೆ.

ರೋಮನ್ ಸರದಾರ ಹೇಳಿದನು: ನೀನು ಹೇಳುತ್ತಿರುವುದು ಸತ್ಯವೆಂದಾದರೆ, ಭೂಮಿಯ ಮೇಲೆ ಅವರನ್ನು ಮುಖಾಮುಖಿಯಾಗುವುದಕ್ಕಿಂತ ಉತ್ತಮ ಭೂಮಿಯೊಳಗೆ ನುಗ್ಗುವುದು ಆಗಿದೆ. ನನ್ನ ಸ್ವಂತ ಪರಿಸ್ಥಿತಿಗೆ ನನಗೆ ಬಿಡಲು ಅಲ್ಲಾಹನು ನನಗೆ ಅನುಗ್ರಹವನ್ನು ನೀಡಬೇಕೆಂದು ನಾನು ಬಯಸುತ್ತೇನೆ, ಅಲ್ಲಾಹನು ಅವರ ವಿರುದ್ಧ ನನಗೆ ಸಹಾಯ ಮಾಡಬಾರದು ಅಥವಾ ನನ್ನ ವಿರುದ್ಧ ಅವರಿಗೆ ಸಹಾಯ ಮಾಡಬಾರದು. (ತಾರಿಖ್ ಅಲ್–ತಬರಿ, ಸಂಪುಟ–2, ಪುಟ–347, ದಾರ್ ಅಲ್–ಕಿತಾಬ್ ಅಲ್–ಇಲಮಿಯಾ ಬೈರುತ್ 2012) ಇದನ್ನು ತಾರಿಖ್ ಅಲ್–ತಬರಿಯಲ್ಲಿ ಬರೆಯಲಾಗಿದೆ.

ಆದಾಗ್ಯೂ, ಬೆಳಗ್ಗಿನ ಹೊತ್ತು ಜನರು ಪರಸ್ಪರ ಹತ್ತಿರವಾದಾಗ, ಹಝ್ರತ್ ಖಾಲಿದ್(ರ) ಹೊರಬಂದು ಸೈನ್ಯವನ್ನು ಸಂಘಟಿಸಿದರು. ಹಝ್ರತ್ ಖಾಲಿದ್ ಅವರು ಜಿಹಾದ್ ಮಾಡಲು ಪ್ರೋತ್ಸಾಹಿಸುತ್ತಾ ಜನರ ನಡುವೆ ನಡೆಯುತ್ತಿದ್ದರು ಮತ್ತು ಒಂದೇ ಸ್ಥಳದಲ್ಲಿ ನಿಲ್ಲದೆ ಮುಸ್ಲಿಂ ಮಹಿಳೆಯರು ದೃಢವಾಗಿ ನಿಲ್ಲುವಂತೆ ಮತ್ತು ಜನರ ಹಿಂದೆ ನಿಲ್ಲುವಂತೆ ಆದೇಶಿಸಿದರು. ಮತ್ತು ಅಲ್ಲಾಹನನ್ನು ಕರೆಯಿರಿ ಮತ್ತು ಅವನಲ್ಲಿಯೇ ಪ್ರಾರ್ಥಿಸಿ, ಮತ್ತು ಮುಸ್ಲಿಂ ವ್ಯಕ್ತಿಯು ಅವರ ಬಳಿಯಿಂದ ಹಾದುಹೋದಾಗ, ಅವರು ತಮ್ಮ ಮಕ್ಕಳನ್ನು ಅವರ ಕಡೆಗೆ ಎತ್ತಿಕೊಂಡು ಅವರಿಗೆ ಹೇಳಲಿ: ತಮ್ಮ ಮಕ್ಕಳನ್ನು ಹಾಗೂ ತಮ್ಮ ಮಹಿಳೆಯರನ್ನು ಉಳಿಸಲು ಹೋರಾಡಿ. ಹಝ್ರತ್ ಖಾಲಿದ್(ರ.ಅ) ಪ್ರತಿ ಸೈನ್ಯದ ಬಳಿ ನಿಂತು ಹೀಗೆ ಹೇಳುತ್ತಿದ್ದರು: ಓ ಅಲ್ಲಾಹನ ಸೇವಕರೇ! ಅಲ್ಲಾಹನಿಗೆ ಭಯಪಡಿರಿ ಮತ್ತು ಅಲ್ಲಾಹನ ಮಾರ್ಗದಲ್ಲಿ ಹೋರಾಡಿರಿ ಮತ್ತು ಅಲ್ಲಾಹನನ್ನು ತಿರಸ್ಕರಿಸಿದವರೊಂದಿಗೆ ಹೋರಾಡಿರಿ ಮತ್ತು ನಿಮ್ಮ ಹಿಮ್ಮಡಿಯಿಂದ ಹಿಂತಿರುಗಬೇಡಿ ಮತ್ತು ನಿಮ್ಮ ಶತ್ರುಗಳಿಂದ ಭಯಪಡಬೇಡಿ, ಆದರೆ ಭಯವು ಮುಗಿಯುವವರೆಗೆ ಸಿಂಹಗಳಂತೆ ಮುನ್ನಡೆಯಿರಿ, ಹೋಗಿ ಮತ್ತು ನೀವು ಸ್ವತಂತ್ರ ಗೌರವಾನ್ವಿತ ಜನರಾಗಿದ್ದೀರಿ. ನಿಮಗೆ ಇಹಲೋಕವೂ ನೀಡಲಾಗಿದೆ ಮತ್ತು ಪರಲೋಕದ ಪ್ರತಿಫಲವನ್ನು ಅಲ್ಲಾಹನು ನಿಮಗೆ ಕಡ್ಡಾಯಗೊಳಿಸಿದ್ದಾನೆ. ನೀವು ನೋಡುವ ಶತ್ರುಗಳ ಸಮೃದ್ಧಿಯು ನಿಮಗೆ ಭಯವನ್ನು ಉಂಟುಮಾಡಲು ಬಿಡಬೇಡಿ. ಖಂಡಿತವಾಗಿಯೂ ಅಲ್ಲಾಹನು ತನ್ನ ಶಿಕ್ಷೆಯನ್ನು ಕಳುಹಿಸುವವನು. ನಾನು ದಾಳಿ ನಡೆಸಿದಾಗ ನೀವೂ ಸಹ ದಾಳಿ ಮಾಡಬೇಕು ಎಂದು ಹಝ್ರತ್ ಖಾಲಿದ್(ರ) ಜನರಿಗೆ ಹೇಳಿದರು. (ತಾರಿಖ್ ಅಲ್–ಖಾಮಿಸ್, ಸಂಪುಟ–3, ಪುಟಗಳು 230–231, ದಾರುಲ್ ಕಿತಾಬ್ ಅಲ್–ಉಲಮಿಯಾ ಬೈರುತ್ 2009)

ತದನಂತರ ಉಭಯ ಸೇನೆಗಳ ನಡುವೆ ಘೋರ ಯುದ್ಧ ನಡೆಯಿತು. ಹಝ್ರತ್ ಸಈದ್ ಬಿನ್ ಝೈದ್(ರ) ಅವರು ಮುಸ್ಲಿಮರನ್ನು ಉತ್ತೇಜಿಸುವ ಮೂಲಕ ಅವರನ್ನು ಪ್ರೋತ್ಸಾಹಿಸಿದರು: ಓ ಜನರೇ! ಅಲ್ಲಾಹನ ಮುಂದೆ ನಿಮ್ಮ ಸಾವನ್ನು ನೆನಪಿಸಿಕೊಳ್ಳಿ ಮತ್ತು ಯುದ್ಧದಿಂದ ಓಡಿಹೋಗಿ ನರಕಕ್ಕೆ ಅರ್ಹರಾಗಬೇಡಿ. ಓ ಧರ್ಮ ರಕ್ಷಕರೇ! ಮತ್ತು ಓ ಖುರ್‌ಆನ್ ಪಠಿಸುವವರೇ! ತಾಳ್ಮೆಯಿಂದಿರಿ, ತಾಳ್ಮೆಯಿಂದಿರಿ! ಯುದ್ಧವು ಪ್ರಾರಂಭವಾದಾಗ ಮತ್ತು ಹೋರಾಟವು ತೀವ್ರವಾಗಿದ್ದಾಗ, ರೋಮನ್ನರು ಓಡಿಹೋಗಿ ತಮ್ಮ ಜೀವವನ್ನು ಉಳಿಸಿಕೊಂಡರು. ಅವರು ತಮ್ಮ ಸ್ಥಳವನ್ನು ತಲುಪಿದಾಗ, ವರ್ದಾನ್ ತನ್ನ ಜನರ ಮುಂದೆ ಭಾಷಣ ಮಾಡುತ್ತ ಹೇಳಿದನು ಈ ಸ್ಥಿತಿ ಮುಂದುವರೆದರೆ, ಈ ದೇಶ ಮತ್ತು ಸಂಪತ್ತು ನಿಮ್ಮಿಂದ ದೂರ ಹೋಗುತ್ತದೆ. ನಿಮ್ಮ ಹೃದಯದಿಂದ ತುಕ್ಕು ತೊಳೆಯುವುದು ಇನ್ನೂ ಉತ್ತಮವಾಗಿದೆ. ಈ ಕುರುಬರು ಮತ್ತು ಈ ಹಸಿದ ಬೆತ್ತಲೆ ಗುಲಾಮ ಅರಬ್ಬರು ನಮ್ಮೊಂದಿಗೆ ಹೋರಾಡುತ್ತಾರೆ ಎಂಬ ಆಲೋಚನೆ ನಮಗೆ ಇರಲಿಲ್ಲ. ಕ್ಷಾಮ ಮತ್ತು ಬರ ಅವರನ್ನು ನಮ್ಮ ಕಡೆಗೆ ಓಡಿಸಿತು ಮತ್ತು ಈಗ ಅವರು ಇಲ್ಲಿಗೆ ಬಂದು ಹಣ್ಣುಗಳು ಮತ್ತು ಬೀಜಗಳನ್ನು ತಿನ್ನುತ್ತಾರೆ, ಬಾರ್ಲಿಯ ಬದಲಿಗೆ ಗೋಧಿ ರೊಟ್ಟಿಯನ್ನು ಪಡೆದರು. ವಿನೆಗರ್ ಬದಲಿಗೆ ಜೇನುತುಪ್ಪವನ್ನು ತಿನ್ನುತ್ತುದ್ದಾರೆ. ಅಂಜೂರದ ಹಣ್ಣುಗಳು, ದ್ರಾಕ್ಷಿಗಳು ಮತ್ತು ಉತ್ತಮವಾದ ವಸ್ತುಗಳನ್ನು ಆನಂದಿಸುತ್ತಿದ್ದಾರೆ. ನಂತರ ಅವರು ಕೆಲವು ಮುಖ್ಯಸ್ಥರ ಅಭಿಪ್ರಾಯವನ್ನು ಕೇಳಿದಾಗ ಓರ್ವ ಮುಖ್ಯಸ್ಥನು ನೀವು ಮುಸ್ಲಿಮರನ್ನು ಸೋಲಿಸಲು ಬಯಸಿದರೆ, ಅವರ ಅಮೀರ್‌ನನ್ನು ಏನಾದರೂ ತಂತ್ರ ಮತ್ತು ನೆಪದಿಂದ ಕರೆದು ಕೊಲ್ಲಬಿಡಿ ಹೀಗೆ ಮಾಡಿದರೆ ಉಳಿದವರೆಲ್ಲರೂ ಓಡಿಹೋಗುತ್ತಾರೆ ಎಂದು ಸಲಹೆ ನೀಡಿದನು.

ನೀವು ಮೊದಲು ರಾಷ್ಟದ ಹತ್ತು ಸೈನಿಕರನ್ನು ಹೊಂಚುದಾಳಿಯಲ್ಲಿ ಕೂರಿಸಲು ಕಳುಹಿಸಿ ನಂತರ ಮುಸ್ಲಿಮರ ಅಮೀರ್‌ನನ್ನು ಒಬ್ಬರೇ ಚರ್ಚೆ ಮತ್ತು ಸಂಧಾನಕ್ಕೆ ಕರೆಯಿರಿ. ಅವನು ಮಾತನಾಡಲು ಬಂದಾಗ, ಸೈನಿಕರು ಹೊಂಚು ಹಾಕಿ ಅವನನ್ನು ಕೊಲ್ಲುಹಾಕುತ್ತಾರೆ.

ಆದ್ದರಿಂದ ರೋಮನ್ನರ ಅಮೀರ್ ಒಬ್ಬ ನಿರರ್ಗಳ ಮತ್ತು ವಾಗ್ಮಿ ವ್ಯಕ್ತಿಯನ್ನು ಹಝ್ರತ್ ಖಾಲಿದ್(ರ) ಬಳಿಗೆ ಕಳುಹಿಸಿದನು. ಸಂದೇಶವಾಹಕನು ಮುಸ್ಲಿಮರನ್ನು ತಲುಪಿದಾಗ, ಅವನು ಜೋರಾಗಿ ಕೂಗಿದನು, "ಓ ಅರಬ್ಬರೇ!" ರಕ್ತಪಾತ ಮತ್ತು ಈ ಕೊಲೆಗೆ ನೀವು ಸಮಾಧಾನಗೊಳ್ಳುವುದಿಲ್ಲವೇ? ನಾವು ಸಮನ್ವಯ ಪ್ರಸ್ತಾಪದ ಬಗ್ಗೆ ಯೋಚಿಸಿದ್ದೇವೆ. ಆದ್ದರಿಂದ ನಿಮ್ಮ ಮುಖ್ಯಸ್ಥರು ನನ್ನೊಂದಿಗೆ ಮಾತನಾಡಲು ಮುಂದಾಗುವುದು ಸೂಕ್ತ. ಹಝ್ರತ್ ಖಾಲಿದ್(ರ) ಮುಂದೆ ಬಂದು ನೀವು ತಂದ ಸಂದೇಶವನ್ನು ವಿವರಿಸಿ ಆದರೆ ಸತ್ಯವನ್ನು ನೆನಪಿನಲ್ಲಿಡಿ ಎಂದು ಹೇಳಿದರು. ನಮ್ಮ ಅಮೀರ್ ರಕ್ತಪಾತವನ್ನು ಇಷ್ಟಪಡದ ಕಾರಣ ನಾನು ಬಂದಿದ್ದೇನೆ ಎಂದು ಹೇಳಿದನು. ಇದುವರೆಗೆ ಮೃತಪಟ್ಟವರ ಬಗ್ಗೆ ಅವರು ದುಃಖಿತರಾಗಿದ್ದಾರೆ. ಆದುದರಿಂದ ಒಂದಿಷ್ಟು ಸಂಪತ್ತನ್ನು ಜನರಿಗೆ ನೀಡಿ ಸಂಧಿ ಆಗುವಂತೆ ಒಪ್ಪಂದ ಮಾಡಿಕೊಳ್ಳಿ ಎಂದು ಅಭಿಪ್ರಾಯಪಟ್ಟಿದ್ದಾರೆ. ಸಂಭಾಷಣೆಯ ಸಮಯದಲ್ಲಿ, ಸರ್ವಶಕ್ತನಾದ ಅಲ್ಲಾಹನು ಅವರ ಬಳಿ ಬಂದ ಸಂದೇಶವಾಹಕನ ಹೃದಯದಲ್ಲಿ ಎಂತಹ ಭಯವನ್ನು ಹಾಕಿದನು ಎಂದರೆ ಅವನು ತನ್ನ ಕುಟುಂಬ ಮತ್ತು ಅವನ ಕುಟುಂಬದ ರಕ್ಷಣೆಗಾಗಿ ಹಝ್ರತ್ ಖಾಲಿದ್(ರ) ಅವರಿಗೆ ತನ್ನ ಮುಖ್ಯಸ್ಥನ ಸಂಪೂರ್ಣ ಯೋಜನೆಯನ್ನು ವಿವರಿಸಿದನು. ಹಝ್ರತ್ ಖಾಲಿದ್(ರ) ಅವರ ಮೇಲೆ ರಹಸ್ಯವಾಗಿ ದಾಳಿ ಮಾಡುವುದು ಹೇಗೆಂದು ಅವನಿಗೆ ತಿಳಿದಿತ್ತು. ಹಝ್ರತ್ ಖಾಲಿದ್(ರ) ಹೇಳಿದರು, “ನೀವು ದೇಶದ್ರೋಹ ಮಾಡದಿದ್ದರೆ, ನಾನು ನಿಮಗೆ ಮತ್ತು ನಿಮ್ಮ ಕುಟುಂಬಗಳಿಗೆ ಶಾಂತಿ ನೀಡುತ್ತೇನೆ.” ನಂತರ ಅವನು ಹಿಂತಿರುಗಿ ತನ್ನ ಮುಖ್ಯಸ್ಥನಿಗೆ ಹಝ್ರತ್ ಖಾಲಿದ್(ರ) ತನ್ನೊಂದಿಗೆ ಮಾತನಾಡಲು ಸಿದ್ಧರಾಗಿದ್ದಾರೆ ಎಂದು ಹೇಳಿದನು. ಆಗ ಅವನು ತುಂಬಾ ಸಂತೋಷಪಟ್ಟನು ಮತ್ತು ತನ್ನ ಹತ್ತು ಸೈನಿಕರಿಗೆ ದಿಬ್ಬದ ಹಿಂದೆ ಅಡಗಿಕೊಳ್ಳಲು ಮತ್ತು ಸಭೆಗೆ ನಿಗದಿಪಡಿಸಿದ ಸ್ಥಳದಲ್ಲಿ ಹೊಂಚುದಾಳಿಯನ್ನು ಇಡಲು ಆದೇಶಿಸಿದನು. ಹಝ್ರತ್ ಖಾಲಿದ್(ರ) ಅವರು ಹೇಳಿದಂತೆ ಅವರ ಯೋಜನೆ ತಿಳಿದಿತ್ತು. ಹಾಗಾಗಿ ಹಝ್ರತ್ ಝುರಾರ್ ಸೇರಿದಂತೆ ಹತ್ತು ಮಂದಿ ಮುಸ್ಲಿಮರನ್ನು ಶತ್ರುಗಳು ಹೊಂಚು ಹಾಕಿದ ಸ್ಥಳಕ್ಕೆ ಕಳುಹಿಸಿದರು. ಮುಸ್ಲಿಮರು ಆ ಸ್ಥಳವನ್ನು ತಲುಪಿ ರೋಮನ್ ಸೈನಿಕರನ್ನು ಕರೆದೊಯ್ದು ಅವರೆಲ್ಲರನ್ನು ಕೊಂದು ಅವರ ಸ್ಥಾನವನ್ನು ಪಡೆದರು. ಹಝ್ರತ್ ಖಾಲಿದ್(ರ) ರೋಮನ್ನರ ಅಮೀರ್ ಜೊತೆ ಮಾತನಾಡಲು ಹೋದರು. ಎರಡು

ಕಡೆಯ ಸೈನ್ಯಗಳು ಎದುರುಬದುರಾಗಿ ಸಿದ್ಧವಾಗಿ ನಿಂತಿದ್ದವು. ರೂಮನ್ ಅಮೀರ್ ಕೂಡ ಅಲ್ಲಿಗೆ ತಲುಪಿದನು. ಹಝ್ರತ್ ಖಾಲಿದ್(ರ) ಅವರೊಂದಿಗೆ ಮಾತನಾಡುವಾಗ ಹೇಳಿದರು: ನೀವು ಇಸ್ಲಾಂ ಧರ್ಮವನ್ನು ಸ್ವೀಕರಿಸಿದರೆ, ನೀವು ನಮ್ಮ ಸಹೋದರರಾಗುತ್ತೀರಿ, ಇಲ್ಲದಿದ್ದರೆ ಜಿಝ್ಯ ಪಾವತಿಸಿ ಅಥವಾ ಯುದ್ಧಕ್ಕೆ ಸಿದ್ಧರಾಗಿರಿ.

ರೋಮನ್‌ನ ಅಮೀರ್ ಹೊಂಚು ಹಾಕಿದ ಸೈನಿಕರನ್ನು ನೊಂಬಿದ್ದನು. ಆದ್ದರಿಂದ ಅವನು ತಕ್ಷಣವೇ ಹಝ್ರತ್ ಖಾಲಿದ್(ರ) ಅವರ ಮೇಲೆ ಕತ್ತಿಯಿಂದ ದಾಳಿ ಮಾಡಿ ಅವರ ಎರಡೂ ತೋಳುಗಳನ್ನು ಹಿಡಿದುಕೊಂಡನು. ಹಝ್ರತ್ ಖಾಲಿದ್(ರ) ಅವರ ಮೇಲೂ ದಾಳಿ ಮಾಡಿದರು. ರೋಮನ್ ಕಮಾಂಡರ್ ತನ್ನ ಸೈನಿಕರಿಗೆ, "ಬೇಗ ಓಡಿ, ನಾನು ಮುಸ್ಲಿಮರ ಕಮಾಂಡರ್ ಅನ್ನು ಸೆರೆಹಿಡಿದಿದ್ದೇನೆ" ಎಂದು ಕೂಗಿದನು. ದಿಬ್ಬದ ಹಿಂದಿನಿಂದ ಈ ಶಬ್ದವನ್ನು ಕೇಳಿದ ಸಹಚರರು ತಮ್ಮ ಕತ್ತಿಗಳನ್ನು ಎಳೆದುಕೊಂಡು ಅವನ ಕಡೆಗೆ ಧಾವಿಸಿದರು. ಮೊದಮೊದಲು ಇವರೇ ನನ್ನ ಜನರು ಎಂದು ಭಾವಿಸಿದ ವರ್ದಾನ್ ಹಝ್ರತ್ ಝಿರಾರ್‌ರನ್ನು ಕಂಡಾಗ ಪ್ರಜ್ಞೆ ತಪ್ಪಿದ ನಂತರ ಹಝ್ರತ್ ಧೀರಾರ್ ಮತ್ತು ಇತರ ಸೈನಿಕರು ಸೇರಿ ತಮ್ಮ ಕೆಲಸ ಮುಗಿಸಿದರು. ರೋಮನ್ನರು ತಮ್ಮ ಅಮೀರ್‌ನ ಸಾವಿನ ಬಗ್ಗೆ ತಿಳಿದಾಗ, ಅವರ ಧೈರ್ಯ ಕುಸಿಯಿತು. (ಮೌಲಾನಾ ಫಜಲ್ ಮುಹಮ್ಮದ್ ಯೂಸುಫ್‌ಝೈ ಅವರಿಂದ ಫತುಹಾತ್ ಶಾಮ್‌ನಿಂದ ಆಯ್ದುಕೊಳ್ಳಲಾಗಿದೆ, ಪುಟ 97 ರಿಂದ 104, ಮಕ್ತಬ ಈಮಾನ್ ವ ಯಖೀನ್, 2011)

ನಂತರ ಜನರು ಪರಸ್ಪರ ಯುದ್ಧವಾಡಿಕೊಂಡರು ಮತ್ತು ಯುದ್ಧವು ಪ್ರಾರಂಭವಾಯಿತು. ರೋಮನ್ನರ ಮತ್ತೊಬ್ಬ ನಾಯಕ ಮುಸಲ್ಮಾನರ ಹೋರಾಟದ ಪರಿಸ್ಥಿತಿಯನ್ನು ಕಂಡು ತನ್ನ ಜನರಿಗೆ "ನನ್ನ ತಲೆಯನ್ನು ಬಟ್ಟೆಯಿಂದ ಕಟ್ಟಿಬಿಡಿ" ಎಂದು ಹೇಳಿದನು. ಅವರೆಲ್ಲರು ಅವನಿಗೆ ಏಕೆ? ಎಂದು ಕೇಳಿದರು. ಈ ದಿನವು ಬಹಳ ಕೆಟ್ಟ ದಿನವಾಗಿದೆ ಇದನ್ನು ನೋಡುವುದಕ್ಕೆ ಆಗುತ್ತಿಲ್ಲ ಎಂದು ಹೇಳಿದರು. ಮುಸಲ್ಮಾನರು ಆತನ ಶಿರಚ್ಛೇದ ಮಾಡಿದಾಗ ಆತನ ಶಿರವು ಬಟ್ಟೆಯಲ್ಲಿ ಸುತ್ತಿ ಹಾಕಲಾಗಿತ್ತು ಎಂದು ವರದಿಗಾರರು ಹೇಳುತ್ತಾರೆ. (ತಾರಿಖ್ ಅಲ್-ತಬರಿ, ಸಂಪುಟ-2, ಪುಟ-347, ದಾರ್ ಅಲ್-ಕಿತಾಬ್ ಅಲ್-ಇಲಮಿಯಾ ಬೈರುತ್ 1987)

ಈ ಯುದ್ಧದಲ್ಲಿ ರೋಮನ್ನರ ಸಂಖ್ಯೆ ಸುಮಾರು ಒಂದು ಲಕ್ಷವಾಗಿತ್ತು. (ಫತೂಹುಲ್ ಬಲದಾನ್ ಅಲ್‌ಇಮಾಮ್ ಅಬಿ ಅಲ್‌ಹಸನ್ ಅಲ್‌ಬಲಾಝುರಿ, ಪುಟ-74, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2000) ಮುಸ್ಲಿಮರ ಸಂಖ್ಯೆ ಮೂವತ್ತು ಸಾವಿರವಾಗಿತ್ತು. (ಅಲ್‌ಖಲೀಫತುಲ್ ಅವ್ವಲ್ ಅಬೂಬಕರ್ ಸಿದ್ದೀಖ್(ರ), ಪುಟ-312, ದಾರುಲ್ ಮಾರಿಫ ಬೈರೂತ್ 2006) ಮತ್ತು ಒಂದು ವರದೊಯ ಪ್ರಕಾರ ಮೂವತ್ತೈದು ಸಾವಿರವಾಗಿತ್ತು. (ಬಶೀರ್ ಸಾಜಿದ್ ಅವರಿಂದ ಅಶ್ರಹ್ ಮುಬಾಶ್ರಾ, ಪುಟ-805, ಅಲ್ ಬದ್ರ್ ಪಬ್ಲಿಕೇಷನ್ಸ್ ಲಾಹೋರ್ 2000) ಈ ಯುದ್ಧದಲ್ಲಿ ಮೂರು ಸಾವಿರ ರೋಮನ್ನರು ಕೊಲ್ಲಲ್ಪಟ್ಟರು ಮತ್ತು ಅವರ ಸೋಲಿಸಲ್ಪಟ್ಟ ಸೈನ್ಯವು ಇತರ ಅನೇಕ ನಗರಗಳಲ್ಲಿ ಆಶ್ರಯ ಪಡೆಯಬೇಕಾಯಿತು. (ತ ' ರಿ ೀ ಖ ್ ಅಲ್‌ಖಮೀಸ್, ಸಂಪುಟ-3, ಪುಟ-231, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2009)

ಅಜ್‌ನಾದೀನನ ವಿಜಯದ ನಂತರ ಹಝ್ರತ್ ಖಾಲಿದ್ ಬಿನ್ ವಲೀದ್(ರ) ಪತ್ರದ ಮೂಲಕ ಈ ಸುವಾರ್ತೆಯನ್ನು ಹಝ್ರತ್ ಅಬೂಬಕರ್(ರ)ರಿಗೆ ತಿಳಿಸಿದರು. ಅದರ ಪಠ್ಯ ಹೀಗಿದೆ: ಅಸ್ಸಲಾಮು ಅಲೈಕುಮ್- ನಮ್ಮ ಮತ್ತು ಅವಿಶ್ವಾಸಿಗಳ ನಡುವೆ ಯುದ್ಧವಾಯೊತು ಮತ್ತು ಅವರು ಅಜ್ನಾದೈನಿನಲ್ಲಿ ನಮಗಿಂತ ದೊಡ್ಡ ಸೈನ್ಯವನ್ನು ಸಂಗ್ರಹಿಸಿದ್ದರು ಎಂದು ನಾನು ನಿಮಗೆ ತಿಳಿಸುತ್ತಿದ್ದೇನೆ. ಅವರು ತಮ್ಮ ಶಿಲುಬೆಗಳನ್ನು ಎತ್ತು ಹಿಡಿದಿದ್ದರು ಮತ್ತು ತಮ್ಮ ಗ್ರಂಥಗಳನ್ನು ಎತ್ತು ಹಿಡಿದಿದ್ದರು ಮತ್ತು ಅವರು ನಮ್ಮನ್ನು ನಾಶಪಡಿಸುವವರೆಗೆ ಅಥವಾ ನಮ್ಮ ನಗರಗಳಿಂದ ನಮ್ಮನ್ನು ಓಡಿಸುವವರೆಗೂ ಅವರು ತಪ್ಪಿಸಿಕೊಳ್ಳುವುದಿಲ್ಲ ಎಂದು ಅವರು ಅಲ್ಲಾಹನ ಮೇಲೆ ಪ್ರಮಾಣ ಮಾಡಿದರು ಮತ್ತು ನಾವು ಸಹ ಸರ್ವಶಕ್ತನದ ಅಲ್ಲಾಹನಲ್ಲಿ ದೃಢವಾಗಿ ಭರವಸೆಯಿಂದ ಹೊರಬಂದೆವು. ನಂತರ ನಾವು ಸ್ವಲ್ಪ ಕಾಲ ಅವರನ್ನು ಈಟಿಗಳಿಂದ ಹೊಡೆದೆವು, ನಂತರ ನಾವು ನಮ್ಮ ಕತ್ತಿಗಳನ್ನು ತೆಗೆದುಕೊಂಡು ಒಂಟೆಯನ್ನು ವಧಿಸಲು ಎಷ್ಟು ಸಮಯ ತೆಗೆದುಕೊಳ್ಳುತ್ತದೆಯೋ ಅಷ್ಟು ಸಮಯದವರೆಗೆ ನಾವು ಶತ್ರುಗಳನ್ನು ಹೊಡೆದೆವು.

ನಂತರ ಅಲ್ಲಾಹನು ತನ್ನ ಸಹಾಯವನ್ನು ಕಳುಹಿಸಿದನು ಮತ್ತು ಅವನು ತನ್ನ ವಾಗ್ದಾನವನ್ನು ಪೂರೈಸಿದನು ಮತ್ತು ಅವಿಶ್ವಾಸಿಗಳನ್ನು ಸೋಲಿಸಿದನು ಮತ್ತು ನಾವು ಅವರನ್ನು ಎಲ್ಲಾ ವಿಶಾಲವಾದ ರೀತಿಯಲ್ಲಿ, ಪ್ರತಿಯೊಂದು ಕಣಿವೆಯಲ್ಲಿ ಮತ್ತು ಪ್ರತಿಯೊಂದು ತಗ್ಗು ಪ್ರದೇಶದಲ್ಲಿ ವಧಿಸಿದ್ದೇವೆ. ನಿಮ್ಮ ಧರ್ಮಕ್ಕೆ ಪರಮಾಧಿಕಾರವನ್ನು ನೀಡಲು ಮತ್ತು ನಮ್ಮ ಶತ್ರುವನ್ನು ಅವಮಾನಿಸಲು ಮತ್ತು ನಮ್ಮ ಸ್ನೇಹಿತರನ್ನು ಚೆನ್ನಾಗಿ ನಡೆಸಿಕೊಳ್ಳುವುದಕ್ಕಾಗಿ ಎಲ್ಲಾ ಸ್ತುತಿಗಳು ಅಲ್ಲಾಹನಿಗೆ ಸಲ್ಲುತ್ತವೆ. ಹಝ್ರತ್ ಅಬೂಬಕ್ಕರ್(ರ) ಅವರ ಮುಂದೆ ಈ ಪತ್ರವನ್ನು ಓದಿದಾಗ, ಆ ಸಮಯದಲ್ಲಿ ಅವರು ಮರಣಾ ಸನ್ನಿಧಿಯಲ್ಲಿದ್ದರು. ಈ ವಿಜಯವು ಅವರಿಗೆ ಸಂತೋಷವನ್ನು ನೀಡಿತು ಮತ್ತು ಅವರು ಹೇಳಿದರು ಅಲ್ಹಮ್ದುಲಿಲ್ಲಾಹ್! ಮುಸಲ್ಮಾನರಿಗೆ ಸಹಾಯ ಮಾಡಿದ ಮತ್ತು ಆ ಮೂಲಕ ನನ್ನ ಕಣ್ಣುಗಳನ್ನು ತಂಪಾಗಿಸಿದ ಅಲ್ಲಾಹನಿಗೆ ಎಲ್ಲಾ ಸ್ತುತಿಗಳು.
(ತಾರಿಖ್ ಅಲ್-ಖಾಮಿಸ್, ಸಂಪುಟ-3, ಪುಟಗಳು 231-232, ದಾರುಲ್-ಕಿತಾಬ್ ಅಲ್-ಇಲ್‌ಮಿಯಾ ಬೈರುತ್ 2009)

ಅಜ್ನದೈನ್ನ ಯುದ್ಧ ಯಾವಾಗ ನಡೆಯಿತು ಎಂಬುದರ ಬಗ್ಗೆಯೂ ಗೊಂದಲವಿದೆ. ಕೆಲವರ ಪ್ರಕಾರ ಇದು ಹಝ್ರತ್ ಉಮರ್(ರ) ಕಾಲದಲ್ಲಿ ನಡೆದಿತ್ತು. ಇದರ ಬಗ್ಗೆ ವಿವರಣೆ ಏನು ಎಂದು ನಾನು ವಿವರಿಸುತ್ತೇನೆ. ಪ್ರಶ್ನೆ ಉದ್ಭವಿಸಿದಂತೆ, ಅದು ಯಾವಾಗ ಸಂಭವಿಸಿತು? ಆದ್ದರಿಂದ ವಿಭಿನ್ನ ವರದಿಗಳಿವೆ. ವರದಿಗಳ ಪ್ರಕಾರ, ಈ ಯುದ್ಧವು ಹಝ್ರತ್ ಅಬುಬಕರ್(ರ) ಹದಿಮೂರು ಹಿಜ್ರಿಯಲ್ಲಿ ನಿಧನ ಹೊಂದಿದ ಇಪ್ಪತ್ನಾಲ್ಕು ದಿನಗಳು ಅಥವಾ ಇಪ್ಪತ್ತು ದಿನಗಳು ಅಥವಾ ಮೂವತ್ನಾಲ್ಕು ದಿನಗಳ ಮೊದಲು ನಡೆಯಿತು. (ತಾರೀಖ್ ಅಲ್‌ಖಮೀಸ್, ಸಂಪುಟ-3, ಪುಟ-232, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2009) (ಫತೂಹುಲ್ ಬಲದಾನ್ ಅಲ್‌ಇಮಾಮ್ ಅಬಿ ಅಲ್‌ಹಸನ್ ಅಲ್‌ಬಲಾಝುರಿ, ಪುಟ-74, ದಾರುಲ್ ಕುತುಬ್ ಇಲ್‌ಮಿಯ ಬೈರೂಯ್ 2000)

ಮತ್ತು ಕೆಲವು ಇತಿಹಾಸಕಾರರ ಪ್ರಕಾರ, ಈ ಯುದ್ಧವು 15 ಹಿಜ್ರಿಯಲ್ಲಿ ಹಝ್ರತ್ ಉಮರ್(ರ) ರವರ ಖಿ;ಲಾಫತ್ ಕಾಲದಲ್ಲಿ ನಡೆಯಿತು. (ಅಲ್-ಕಾಮಲ್ ಫಿ ಅಲ್-ತಾರಿಖ್, ಸಂಪುಟ-2, ಪುಟ-266, ದಾರ್ ಅಲ್-ಕಿತಾಬ್ ಅಲ್-ಇಲ್‌ಮಿಯಾ ಬೈರುತ್ 2002)

ಆದಾಗ್ಯೂ, ನಮ್ಮ ಸಂಶೋಧಕರ ಸಂಶೋಧನೆ ಮತ್ತು ಅವರ ಅಭಿಪ್ರಾಯವು ಇದಾಗಿದೆ ಮತ್ತು ಈ ಅಭಿಪ್ರಾಯವು ಸರಿಯಾಗಿದೆ ಎಂದು ತೋರುತ್ತದೆ, ಇದು ಹೆಚ್ಚಾಗಿ ಅಜ್ನಾದೈನ್ ಸ್ಥಳದಲ್ಲಿ ಎರಡು ಬಾರಿ ಯುದ್ಧ ನಡೆದಿರುವ ಸಾಧ್ಯತೆಯಿದೆ. ಮೊದಲ ಬಾರಿಗೆ ಹಝ್ರತ್ ಅಬುಬಕರ್(ರ) ಅವರ ಖಲೀಫತ್ ಸಮಯದಲ್ಲಿ ಮತ್ತು ಎರಡನೇ ಬಾರಿ ಹಝ್ರತ್ ಉಮರ್(ರ) ಅವರ ಖಿಲಾಫತ್ ಅವಧಿಯಲ್ಲಿ, ಏಕೆಂದರೆ ಕೆಲವು ಇತಿಹಾಸ ಪುಸ್ತಕಗಳಲ್ಲಿ, ಇಸ್ಲಾಮಿಕ್ ಪಡೆಗಳನ್ನು ಎರಡೂ ಸಂದರ್ಭಗಳಲ್ಲಿ ಪ್ರತ್ಯೇಕವಾಗಿ ವಿವರಿಸಲಾಗಿದೆ. ಹದಿಮೂರು ಹಿಜ್ರಿಯಲ್ಲಿನ ಯುದ್ಧದ ಸೇನಾಧಿಪತಿಯು ಹಝ್ರತ್ ಖಾಲಿದ್ ಬಿನ್ ವಲೀದ್(ರ) ಮತ್ತು ಹದಿನೈದರಲ್ಲಿ ಯುದ್ಧದ ಸೇನಾಧಿಪತಿ ಹಝ್ರತ್ ಅಮ್ರ್ ಬಿನ್ ಅಸ್(ರ) ಆಗಿದ್ದರು. ಆದಾಗ್ಯೂ, ಅಲ್ಲಾಹನಿಗೆ ಚೆನ್ನಾಗಿ ತಿಳಿದಿದೆ- ವಲ್ಲಾಹು ಅಅ್‌ಲಮು.

ಡಮಸ್ಕಸ್ ವಿಜಯದ ಬಗ್ಗೆಗಿನ ವಿವರಣೆ ಮುಂದಿನ ಬಾರಿ ಇನ್‌ಶಾ ಅಲ್ಲಾಹ್ ಪ್ರಸ್ತಾಪಿಸಲಾಗುವುದು.

********************

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಅಂಗಡಿಗಳ ಗುಂಪಾಗಿದೆ. ಅವರಲ್ಲಿ ಒಬ್ಬರು ಸಾಹುಕಾರ, ಒಬ್ಬನು ಬಟ್ಟೆಗೆ ಬಣ್ಣ ಹಾಕುವನು, ಒಬ್ಬನು ಎಣ್ಣೆಯ ವ್ಯಾಪಾರಿ, ನಮಗೆ ತಿಳಿದಿರುವ ಮಟ್ಟಿಗೆ ಅವರಲ್ಲಿ ಒಬ್ಬನು ಸಹ ವೇದಗಳನ್ನು ಓದಲಿಲ್ಲ. ಆ ಜನರ ತುಲನೆಯಲ್ಲಿ ಈ ಸಜ್ಜನ ನವ ಮುಸ್ಲಿಮ್ ಆರ್ಯರು ಅಜ್ಞಾನಿಗಳೆಂದು ಹೇಳಬಹುದೇ? ಅವರಲ್ಲಿ ಕೆಲವರು ಬಿಎ ವರೆಗೆ ವಿದ್ಯೆ ಪಡೆದವರಾಗಿದ್ದಾರೆ. ಇಂಗ್ಲೀಷ್ ಮತ್ತು ಉರ್ದು ವೇದಗಳ ಅನುವಾದ ಓದುತ್ತಾರೆ ಮತ್ತು ಹಗಲಿರುಳು ಧರ್ಮದ ಶಿಕ್ಷಣ ಪಡೆಯುತ್ತಾರೆ.

ಅದಲ್ಲದೇ ನಮ್ಮ ದಾವೆ ಕೇವಲ ಖಾದಿಯಾನಿಗೆ ಸೀಮಿತಗೊಂಡಿಲ್ಲ. ಬದಲು ನಾವು ಈ ವಿಷಯವನ್ನು ಪೂರ್ಣ ರೀತಿಯಲ್ಲಿ ಬಲ್ಲೆವು. ಎಲ್ಲ ನಗರ ಮತ್ತು ಹಳ್ಳಿಯ ಆರ್ಯ ಸಮಾಜದವು ಇಂತಹುದೆ ನಿಧಿಯಿಂದ ತುಂಬಿ ಹೋಗಿವೆ. ಈ ಭಾವನೆ ಎಂದೂ ಸರಿಯಾಗಿಲ್ಲ. ಆ ಜನರು ಸನಾತನ ಧರ್ಮವನ್ನು ಬಿಟ್ಟ ನಂತರವೂ ನೇರ ವಿರೋಧಗಳ ನಡುವೆಯೂ ಆರ್ಯ ಸಮಾಜ ಸ್ವೀಕರಿಸಬಹುದು. ಮೊದಲು ಅವರು ತನ್ನ ಮನೆಯಿಂದ ನಾಲ್ಕು ವೇದಗಳನ್ನು ಓದಿ ಬಂದಿದ್ದರೆ ನಾವು ಪ್ರಬಲವಾಗಿ ಹೇಳುತ್ತೇವೆ. ಇಡೀ ಪಂಜಾಬ್ ಮತ್ತು ಭಾರತದಲ್ಲಿ ಕೆಲವರನ್ನು ಬಿಟ್ಟರೆ, ಅವರಿಗೆ ಬೆರಳಣಿಕೆಯಲ್ಲಿ ಗಣಿಸಬಹುದು, ಎಲ್ಲ ಆರ್ಯರ ಸಮೂಹ ಅಂತಹದೇ ಆಗಿದೆ. ಅವರಲ್ಲಿ ಒಬ್ಬನು ಅಂಗಡಿಯವನು ಅಥವ ಸಾಹುಕಾರನು

ಆರ್ಯರಲ್ಲಿ ಹೆಸರು ಬರೆಸಿದ್ದಾನೆ. ಸ್ವಯಂ ದೊಡ್ಡ ಹೊಟ್ಟೆ ಮತ್ತು ಉದ್ದ ಮೀಸೆ ಹಾಗೂ ಅಂಗಡಿಯ ಲೆಕ್ಕ ಬಿಟ್ಟರೆ ಬೇರೆ ಏನೂ ಗೊತ್ತಿಲ್ಲ.

**ಆರ್ಯರಲ್ಲಿ ಐದು ಪ್ರತಿಶತದಷ್ಟಾದರೂ ಸಂಸ್ಕೃತದಲ್ಲಿ ವೇದಗಳನ್ನು ಬಲ್ಲವರಿದ್ದರೆ ಅವರಿಗೆ ಒಂದು ಸಾವಿರ ರೂಪಾಯಿ ಗೌರಾನ್ವಿತ ಬಹುಮಾನ.**

ನನ್ನ ಈ ಮಾತುಗಳು ಸತ್ಯ ಬೋಧನೆಯಿಂದಾಗಿವೆ. ಅಲ್ಲದೆ ನಾನು ಆರ್ಯ ಸಾಹೇಬರುಗಳಿಗೆ ಒಂದು ಸಾವಿರ ರೂಪಾಯಿ ಬಹುಮಾನ ನೀಡಲು ಸಿದ್ಧನಿದ್ದೇನೆ. ಅವರು ನನ್ನ ಮುಂದೆ ಸಾಬೀತುಪಡಿಸಬೇಕು. ಬ್ರಿಟಿಷ್ ಇಂಡಿಯಾದಲ್ಲಿ ಅವರ ಪಟ್ಟಿಯಲ್ಲಿರುವ ಪುರುಷರಾಗಿರಲಿ, ಮಹಿಳೆಯರಾಗಿರಲಿ, ಆರ್ಯ ಸಮಾಜದವರು ಎಂದು ಹೇಳಿಕೊಳ್ಳುವ ಕನಿಷ್ಟಪಕ್ಷ 100 ರಲ್ಲಿ ಐದು ಇಂತಹ ಪಂಡಿತರಿಗೆ ನಾಲ್ಕು ವೇದಗಳು ಸಂಸ್ಕೃತದಲ್ಲಿ ತಿಳದಿರಬೇಕು. ಬೇಕಾದರೆ ನಾನು ಯಾವುದೇ ಸರಕಾರಿ ಬ್ಯಾಂಕಿನಲ್ಲಿ ಈ ರೂಪಾಯಿಗಳನ್ನು ಜಮಾ ಮಾಡುವೆ. ಈಗ ಹೇಳಿರಿ. ಇದು ಎಷ್ಟು ನಾಚಿಕೆಯ ವಿಷಯುವಾಗಿದೆ. ಸ್ವಯಂ ತಪ್ಪಿತಸ್ಥರಾಗಿ ಬೇರೆಯವರಿಗೆ ಉಪದೇಶ ಮಾಡಲು ಹೊರಟಿದ್ದಾರೆ. ಲಜ್ಜೆ ಮತ್ತು ಸತ್ಯದಿಂದ ಕಾರ್ಯಕೈಗೊಳ್ಳುತ್ತಿದ್ದರೆ ಇಂತಹ ಆರೋಪಗಳ ಅವಶ್ಯಕತೆ ಇರಲಿಲ್ಲ. ಅದು ಸ್ವಯಂ ಆರ್ಯ ಸಮಾಜದವರ ಮೇಲೆಯೇ ಸಾದರಗೊಳ್ಳುತ್ತದೆ. (ಅದೇ ಪುಟ 368–370).

ಹಾಗೆ ಆರ್ಯ ಸಮಾಜದಲ್ಲಿ ಸೇರುವವರ ಸ್ಥಿತಿ ಹೀಗಿದ್ದರೆ ಮತ್ತೆ ಯಾವ ವಿದ್ಯಾವಂತ ನವ ಮುಸ್ಲಿಮ್ ಆರ್ಯನ ಮೇಲೆ ಈ ರೀತಿಯ ಆರೋಪ ಮಾಡಲು ಸಾಧ್ಯ. ಮೊದಲು ಅವರು ಹಿಂದೂಗಳಾಗಿದ್ದರು. ಮತ್ತೆ ಸನಾತನ ಧರ್ಮ ಮತ್ತು ಆರ್ಯರ ತತ್ವಗಳನ್ನು ಸರಿಯಾಗಿ ತಿಳಿದು ಅದರ ತುಲನೆ ಇಸ್ಲಾಮ್ ದರ್ಮ ತತ್ವಗಳಿಗೆ ಮಾಡಿ, ಸತ್ಯ ಮತ್ತು ದೇವನಿಷ್ಠೆ ಅನುಭವಿಸಿ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ್ದಾರೆ. ಕೇವಲ ಅಲ್ಲಾಹನಿಗೋಸ್ಕರ ದುಃಖಗಳನ್ನು ಸಹಿಸಿ ಮತ್ತು ಪತ್ನಿಯರಿಂದ, ಸಹೋದರರಿಂದ, ಮಿತ್ರರಿಂದ ಬೇರ್ಪಟ್ಟರು. ಸಮುದಾಯದ ಬೈಗಳಗಳನ್ನು ಆಲಿಸಿದರು. ಈ ನವ ಮುಸ್ಲಿಂ ಆರ್ಯರ ಧರ್ಮ ಪರಿವರ್ತನೆಯನ್ನು ಕೇವಲ ದೇಹೆಚ್ಚೆಗೋಸ್ಕರ ಎನ್ನುವ ಹಿಂದೂಗಳ ಈ ಆರೋಪ ಹೊಸದೇನಲ್ಲ. ಬದಲು ಪುರಾತನ ಕಾಲದಿಂದ ಆ ಧರ್ಮದ ದ್ವೇಷ ಸಾಧಕರ ಗುಣವಾಗಿದೆ. ಯಾರಾದರೂ ಸಮಂಜಸ ಉತ್ತರವನ್ನು ನೀಡಲಿಲ್ಲ ಎಂದರೆ ಹೇಳುತ್ತಾರೆ. ಸಂಪತ್ತಿಗಾಗಿ ಅಥವಾ ಸ್ತ್ರಿಯರಿಗಾಗಿ ಹಿಂದೂ ಧರ್ಮವನ್ನು ತ್ಯಜಿಸಿದ್ದಾರೆ ಎಂದು. ಹೀಗೂ ಹೇಳುತ್ತಾರೆ. ಮುಸಲ್ಮಾನ ಅರಸರ ಬಲಾತ್ಕಾರದಿಂದಗಿ ಕೋಟಿಗಟ್ಟಲೆ ಹಿಂದೂಗಳು ಮುಸ್ಲಿಮರಾಗಿದ್ದರೆ ಎಂದು. (ಅದೇ ಪುಟ 370).

ಮುಂದಿನ ಸಂಚಿಕೆಯಲ್ಲಿ ನಾವು ಇನ್‌ಶಾಅಲ್ಲಾಹ್ ಸಯ್ಯದ್‌ನಾ ಹಝ್ರತ್ ಮಸೀಹ್‌ಮೌಊದ್(ಅ) ರವರ ಇನ್ನೊಂದು ಬಹುಮಾನದ ಪಂಥಾಹ್ವಾನವನ್ನು ಓದುಗರ ಸೇವೆಯಲ್ಲಿ ಪ್ರಸ್ತುತಪಡಿಸುವೆವು.

**(ಮನ್ಸೂರ್ ಅಹ್ಮದ್ ಮನ್ಸೂರ್)**

**ರಾಷ್ಟ್ರೀಯ ಏಕತೆಯ ಸ್ಥಾಪನೆಗೆ ಒಪ್ಪಂದಗಳ ಅನುಸರಣೆ ಅತ್ಯಗತ್ಯವಾಗಿರುತ್ತದೆ**
**ಆದ್ದರಿಂದ, ಒಬ್ಬ ವ್ಯಕ್ತಿಯು ತನ್ನ ಒಪ್ಪಂದಗಳನ್ನು ಯಾವುದೇ ರೀತಿಯಲ್ಲಿ ಪೂರೈಸಬೇಕು**
**ನಂಬಿಕೆಯನ್ನು ಸ್ಥಾಪಿಸಬೇಕು ಮತ್ತು ಜನರು ಕಷ್ಟದ ಸಮಯದಲ್ಲಿ ಪರಸ್ಪರ ಸಹಾಯ ಮಾಡಲು ಸಿದ್ಧರಿರಬೇಕು ಆಗ ರಾಷ್ಟದ ಅಭಿವೃದ್ಧಿ ಸಾಧ್ಯ**

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರಃ ನಹಲ್‌ನ ಆಯತ್ 93 **ವಲಾ ತಕೂನೂ ಕಲ್ಲತಿ ನಖಝತ್ ಗಝ್‌ಲಹಾ ಮಿಮ್ ಬಅ್‌ದಿ ಖುವ್ವತಿನ್ ಅನ್‌ಕಾಸ; ತತ್ತಖಿಝೂನ ಈಮಾನಕುಮ್ ದಖಲಮ್ ಬೈನಕುಮ್ ಅನ್ ತಕೂನ ಉಮ್ಮತುನ್ ಹಿಯಾ ಅರ್‌ಬಾ** ಮಿನ್ ಉಮ್ಮತಿನ್; ಇನ್ನಮಾ ಯಬ್ಲೂಕುಮುಲ್ಲಾಹು ಬಿಹೀ; **ವಲಯುಮೈಯ್ಯಿನನ್ನ ಲಕುಮ್ ಯೌಮಲ್ ಖಿಯಾಮತಿ ಮಾ ಕುನ್ತುಮ್ ಫೀಹೀ ತಖ್ತಲಿಫೂನ**. ನ ವ್ಯಾಖ್ಯನ ಮಾಡುತ್ತ ಹೇಳುತ್ತಾರೆ:

ಈ ಆಯತ್ ಅನ್ನು ಹೊಸ ವಿಷಯ ಎಂದು ಪರಿಗಣಿಸಬಹುದು ಹಾಗೂ ಹಿಂದಿನ ಆಯತ್ತಿನ ವಿಷಯುದ ಮುಂದುವರಿಕೆ ಎಂದೂ ಹೇಳಬಹುದು. ಮೊದಲ ಆಯತ್ತಿನ ವಿಷಯವೆಂದು ಪರಿಗಣಿಸಿದರೆ, ಅದು ಪರಸ್ಪರ ಒಪ್ಪಂದಗಳನ್ನು ಸಂಪೂರ್ಣವಾಗಿ ನೆರವೇರಿಸಿರಿ ಎಂಬ ಅರ್ಥ ನೀಡುತ್ತದೆ. ನೀವು ಈ ಒಪ್ಪಂದಗಳನ್ನು ಮುರಿದರೆ, ಅಲ್ಲಾಹನು ನಿಮ್ಮನ್ನು ಸೃಷ್ಟಿಸಿದ ಬಲವಾದ ಜಮಾಅತ್ ನಾಶವಾಗುತ್ತದೆ ಮತ್ತು ಪರಸ್ಪರರ ವಿಶ್ವಾಸಾರ್ಹತೆ ಕಳೆದುಹೋಗುತ್ತದೆ.

ರಾಷ್ಟ್ರೀಯ ಏಕತೆಯ ಸ್ಥಾಪನೆಗೆ ಒಪ್ಪಂದಗಳ ಅನುಸರಣೆ ಬಹಳ ಮುಖ್ಯ. ಏಕೆಂದರೆ ಜಮಾಅತ್ತಿನ ಸ್ಥಾಪನೆಯು ಪರಸ್ಪರ ಉತ್ತಮ ನಡವಳಿಕೆಯನ್ನು ಆಧರಿಸಿದೆ. ಜನರು ಒಪ್ಪಂದಗಳಿಗೆ ಬದ್ಧರಾಗಿರುವವರೆಗೆ ಉತ್ತಮ ನಡವಳಿಕೆ ಇರುತ್ತದೆ. ಜನರು ಒಪ್ಪಂದಗಳನ್ನು ಪೂರೈಸದಿದ್ದಾಗ, ಮೊದಲು ಕೆಟ್ಟ ಇಚ್ಛೆ ಮತ್ತು ನಂತರ ಅನುಮಾನ ಉಂಟಾಗುತ್ತದೆ, ಮತ್ತು ಒಬ್ಬ ವ್ಯಕ್ತಿಯ ಕೆಟ್ಟ ಕ್ರಿಯೆಯ ಪರಿಣಾಮವಾಗಿ, ನೂರಾರು ಜನರು ರಾಷ್ಟ್ರೀಯ ವ್ಯವಸ್ಥೆಯ ಪ್ರಯೋಜನಗಳಿಂದ ವಂಚಿತರಾಗುತ್ತಾರೆ. ಆದ್ದರಿಂದ, ಒಬ್ಬ ವ್ಯಕ್ತಿಯು ತನ್ನ ಒಪ್ಪಂದಗಳನ್ನು ಯಾವುದೇ ರೀತಿಯಲ್ಲಿ ಪೂರೈಸಬೇಕು, ಇದರಿಂದ ನಂಬಿಕೆಯನ್ನು ಸ್ಥಾಪಿಸಲಾಗುತ್ತದೆ ಮತ್ತು ಜನರು ಕಷ್ಟದ ಸಮಯದಲ್ಲಿ ಪರಸ್ಪರ ಸಹಾಯ ಮಾಡಲು ಸಿದ್ಧರಾಗಿದ್ದರೆ ರಾಷ್ಟ್ರವು ಅಭಿವೃದ್ಧಿ ಹೊಂದುತ್ತದೆ.

ವೈಯುಕ್ತಿಕ ಪ್ರತಿಜ್ಞೆಯ ಹೊರತಾಗಿ, ರಾಷ್ಟ್ರೀಯ ಪ್ರತಿಜ್ಞೆಯೂ ಇರುತ್ತದೆ, ಅಂದರೆ ಜನರು ಓರ್ವ ವ್ಯಕ್ತಿಯ ಕೈಯಲ್ಲಿ ರಾಷ್ಟ್ರೀಯ ಅಭಿವೃದ್ಧಿಗಾಗಿ ಪ್ರತಿಜ್ಞೆ ಮಾಡುತ್ತಾರೆ ಅದನ್ನು ಖಿಲಾಫತ್ ಎಂದು ಕರೆಯುತ್ತಾರೆ. ಆ ಒಪ್ಪಂದವೂ ಇದರಲ್ಲಿ ಸೇರಿದೆ ಮತ್ತು ಈ ಆಯತ್ತಿನಲ್ಲಿ ಅದರ ಬಗ್ಗೆ ಸುಳಿವು ಇದೆ, ಸರ್ವಶಕ್ತನಾದ ಅಲ್ಲಾಹನು ನಿಮ್ಮನ್ನು ಪಕ್ಷವನ್ನಾಗಿ ಮಾಡಿ ವ್ಯವಸ್ಥೆಯನ್ನು ಸ್ಥಾಪಿಸಿದ್ದಾನೆ ಮತ್ತು ನೀವು ಈ ವ್ಯವಸ್ಥೆಯನ್ನು ಪಾಲಿಸುವುದಾಗಿ ಪ್ರಮಾಣ ಮಾಡಿದ್ದೀರಿ ಎಂದು ಅದು ಹೇಳುತ್ತದೆ. ಈಗ ನೀವು ಇದರ ಕಡೆ ಗಮನಿಸುತ್ತಾ ಇರಿ, ಇಲ್ಲದಿದ್ದರೆ ನಿಮ್ಮ ತ್ಯಾಗದಿಂದ ಸ್ಥಾಪಿತವಾದ ಇಸ್ಲಾಮಿನ ಠೀವಿಯು ಕಣ್ಮರೆಯಾಗುತ್ತಲೇ ಹೋಗುತ್ತದೆ. ನಂತರ ನೀವು ಹೊಸದಾಗಿ ಕೆಲಸ ಮಾಡಬೇಕಾಗುತ್ತದೆ, ಇದು ಒಂದು ದೊಡ್ಡ ರಾಜಕೀಯ ಅಂಶವಾಗಿದೆ, ಕೆಲವು ಜನರ ಭಿನ್ನಭಿಪ್ರಾಯಗಳಿಂದಾಗಿ ಸಂಪೂರ್ಣ ವ್ಯವಸ್ಥೆಯು ನಾಶವಾಗುತ್ತದೆ ಮತ್ತು ರಾಷ್ಟ್ರದ ಜನರ ಶ್ರಮ ವ್ಯರ್ಥವಾಗುತ್ತದೆ ಹಾಗೂ ಹೊಸದಾಗಿ ಶ್ರಮ ಮತ್ತು ಬಲಿದಾನಗಳ ಅಗತ್ಯವು ಕಾಣಿಸಿಕೊಳ್ಳುತ್ತದೆ. ಆದರೆ ಮುರಿದು ಹೋದ ವಸ್ತು ಮತ್ತೆ ಜೋಡಿಸಲು ಸಾಧ್ಯವಿಲ್ಲದಂತೆ ಮತ್ತು ಹರಿದು ಹೋದ ಹೃದಯಗಳು ಯಾವಾಗಲೂ ಸಂಪರ್ಕದಲ್ಲಿದ್ದಂತೆ ಮತ್ತೆ ಒಟ್ಟಿಗೆ ಬರುವುದಿಲ್ಲ. ಆದ್ದರಿಂದ, ಈ ಒಪ್ಪಂದವನ್ನು ಸ್ಥಾಪಿಸಲು ಸಾಕಷ್ಟು ಶ್ರಮ ಬೇಕಾಗುತ್ತದೆ.

ಈ ಆಯತ್ತಿನ ಪದಗಳಿಂದ, ಇದು ಅನ್ಯಜನರೊಂದಿಗಿನ ಒಪ್ಪಂದಗಳನ್ನೂ ಉಲ್ಲೇಖಿಸುತ್ತದೆ ಎಂದು ತಿಳಿಯುತ್ತದೆ. ಈ ವಿಷಯದ ಪರಿಭಾಷೆಯಲ್ಲಿ, ಈ ಆಯತ್ ಅನ್ನು ಶಾಶ್ವತ ಲೇಖನವೆಂದು ಘೋಷಿಸಬೇಕು. ಅಂದರೆ, **ಲಾ ತಕೂನು ಇಂದ** ಹೊಸ ಲೇಖನದ ಪ್ರಾರಂಭವೆಂದು ಪರಿಗಣಿಸಲಾಗುತ್ತದೆ ಮತ್ತು ಇದರರ್ಥ ಸರ್ವಶಕ್ತನಾದ ಅಲ್ಲಾಹನ ಪ್ರತಿಜ್ಞೆ ಹಾಗೂ ಒಬ್ಬರ ಆಂತರಿಕ ಪ್ರತಿಜ್ಞೆಗಳನ್ನು ಪಾಲಿಸುವುದು ಹೇಗೆ ಅಗತ್ಯವೋ ಅದೇ ರೀತಿ ಅನ್ಯ ರಾಷ್ಟ್ರಗಳಿಂದ ಅಥವಾ ಸಮೂದಾಯಗಳಿಂದ ಮಾಡಿದ ಒಪ್ಪಂದಗಳನ್ನು ಪಾಲಿಸುವುದು ಸಹ ಅಗತ್ಯವಾಗಿದೆ. ಈ ಒಪ್ಪಂದಗಳನ್ನು ನೋಡಿಕೊಳ್ಳಿ, ಇಲ್ಲದಿದ್ದರೆ ಪ್ರಪಂಚದ ಶಾಂತಿ ನಾಶವಾಗುತ್ತದೆ. ಆದ್ದರಿಂದ, **ದಖಲ** ಎಂಬ ಪದವು ಅದೇ ವಿಷಯವನ್ನು ಸೂಚಿಸುತ್ತದೆ ಮತ್ತು **ಕಲ್ಲತಿ ನಖಝತ್ ಗಝ್‌ಲಹಾ ಮಿಮ್ ಬಅ್‌ದಿ ಖುವ್ವತಿನ್** ಎಂದರೆ ಶಾಂತಿ ಸ್ಥಾಪನೆಯ ನಂತರ, ದುಷ್ಕೃತ್ಯದ ನೋಟವನ್ನು ಸೃಷ್ಟಿಸಬೇಡಿ.

**(ತಫ್ಸೀರ್ ಕಬೀರ್, ಸಂಪುಟ–4, ಪುಟ–229, ಪ್ರಕಟಿತ ಖಾದಿಯಾನ್ 2010)**

**ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ವಾರ್ಷಿಕ ಇಜ್ತೆಮಾ ನಡೆಯುವ ದಿನಾಂಕಗಳು**

ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಆಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 21, 22 ಮತ್ತು 23ನೇ ಅಕ್ಟೋಬರ್ 2022 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

**ಲಜ್ನಾ ಇಮಾಅಲ್ಲಾಹ್ ಆಹಾರ ಬ್ಯಾಂಕ್‌ಗಳು ಮತ್ತು ಆಶ್ರಮಗಳಿಗೆ ತನ್ನ ಸಂಗ್ರಹವನ್ನು ಹೆಚ್ಚಿಸಬೇಕಾಗಿದೆ**

**ಆಫ್ರಿಕಾದ ಹಿಂದುಳಿದ ಜನರಿಗೆ ಹೊಸ ಕೌಶಲ್ಯಗಳನ್ನು ಕಲಿಸಲು ಸಹ ಪ್ರಯತ್ನಗಳನ್ನು ಮಾಡಬೇಕು**

**ಪ್ರತಿಯೊಬ್ಬ ಅಮಿಲಾ ಸದಸ್ಯರು ಇಸ್ಲಾಮಿನ ಸಂದೇಶವನ್ನು ವಿಶಾಲ ವಲಯದಲ್ಲಿ ಹರಡಲು ಪ್ರಯತ್ನಿಸಬೇಕು ಮತ್ತು ಪ್ರತಿ ವರ್ಷ ಕನಿಷ್ಠ ಒಂದು ಬೈಅತ್ ಪಡೆಯಲು ಪ್ರಯತ್ನಿಸಬೇಕು.**

**ಅಹ್ಮದಿ ಹೆಣ್ಣುಮಕ್ಕಳ ನೈತಿಕ ಶಿಕ್ಷಣದಲ್ಲಿ, "ನಾಚಿಕೆ ವಿಶ್ವಾಸದ ಒಂದು ಭಾಗ" ಎಂಬ ಪ್ರವಾದಿ(ಸ)ರವರ ಹೇಳಿಕೆಯನ್ನು ಒಳಗೊಂಡಿರಬೇಕು.**

**ನೂರಕ್ಕೆ ನೂರರಷ್ಟು ಲಜ್ನಾ ಇಮಾಅಲ್ಲಾಹ್ ಸದಸ್ಯರು ಐದು ಹೊತ್ತಿನ ನಮಾಝುನ್ನು ನಿರ್ವಹಿಸುವುದಕ್ಕೆ ಒಗ್ಗಿಕೊಳ್ಳಬೇಕು**

**ಲಜ್ನಾ ಇಮಾಅಲ್ಲಾಹದ ನೂರು ಪ್ರತಿಶತ ಸದಸ್ಯರು ಪ್ರತಿದಿನ ಪವಿತ್ರ ಖುರ್‌ಆನ್ ಅನ್ನು ನಿಯಮಿತವಾಗಿ ಪಠಿಸಬೇಕು**

**ಕನಿಷ್ಠ 70% ಮನೆಗಳಲ್ಲಿ, ಅಹ್ಮದಿ ಕುಟುಂಬಗಳು ಹದೀಸ್‌ಗಳನ್ನು ಅಧ್ಯಯನ ಮಾಡಬೇಕು ಮತ್ತು ಹಝ್ರತ್ ಅಖದ್ದಸ್ ಮಸೀಹ್ ಮೌಊದ್(ಅ) ಅವರ ಪುಸ್ತಕಗಳನ್ನು ಓದಬೇಕು**

**ಲಜ್ನಾ ಇಮಾಅಲ್ಲಾಹ್‌ದ 100% ಸದಸ್ಯರು ಶುಕ್ರವಾರದಂದು ನಿಯಮಿತವಾಗಿ ನನ್ನ ಖುತುಬ ಜುಮುಅವನ್ನು ಪಠಿಸಬೇಕು**

## ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ಅವರೊಂದಿಗೆ ರಾಷ್ಟ್ರೀಯ ಮಜ್ಲಿಸ್ ಅಮೀಲಾ ಲಜ್ನಾ ಇಮಾಅಲ್ಲಾಹ್ ಯುಕೆ ಆನ್‌ಲೈನ್ ಸಭೆ

ಜನವರಿ 2, 2021 ರಂದು, ನ್ಯಾಷನಲ್ ಅಮೀಲಾ ಲಜ್ನಾ ಇಮಾಅಲ್ಲಾಹ್ ಯುಕೆ ಸದಸ್ಯರು ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲ ಬಿನಸ್ರಿಹಿಲ್ ಅಝೀಝ್ ಅವರೊಂದಿಗೆ ಆನ್‌ಲೈನ್‌ನಲ್ಲಿ ಭೇಟಿಯಾಗುವ ಸೌಭಾಗ್ಯ ಪಡೆದರು. ಈ ಸಭೆಗಾಗಿ ಹುಝೂರ್ ಅನ್ವರ್(ಅತಬಿಅ) ಇಸ್ಲಾಮಾಬಾದ್ (ಟಿಲ್ಫೋರ್ಡ್) ನಲ್ಲಿರುವ ಅವರ ಕಚೇರಿಯಲ್ಲಿ ಆಸೀನರಾದರು, ಮಜ್ಲಿಸ್ ಅಮಿಲಾದ ಸದಸ್ಯರು ತಾಹಿರ್ ಹಾಲ್, ಮಸ್ಜಿದ್ ಬೈತುಲ್ ಫುತೂಹ್ ಲಂಡನ್‌ನಿಂದ ಭಾಗವಹಿಸಿದ್ದರು.

ಭೇಟಿಯ ಸಂದರ್ಭದಲ್ಲಿ ಹುಝೂರ್ ಅನ್ವರ್(ಅತಬಿಅ) ಅವರು ಲಜ್ನಾ ಇಮಾಅಲ್ಲಾಹ್‌ದ ಸದಸ್ಯರ ಹೊಣೆಗಾರಿಕೆಯ ಕಡೆಗೆ ಅವರ ಗಮನ ಸೆಳೆಯುತ್ತ ತಮ್ಮ ಇಲಾಖೆಗಳ ಸುಧಾರಣೆಗೆ ಸೂಚನೆಗಳನ್ನು ನೀಡಿದರು.

ಹುಝೂರ್ ಅನ್ವರ್(ಅತಬಿಅ) ಹೇಳಿದರು: ಲಜ್ನಾ ಇಮಾಅಲ್ಲಾಹ್ ಯುಕೆಗೆ ಖಿದ್ಮತೆ ಖಲ್ಕ್ (ಜನಸೇವೆ)ನ ಕಾರ್ಯಗಳಿಗಾಗಿ ತಮ್ಮ ಪ್ರಯತ್ನಗಳನ್ನು ವಿಸ್ತರಿಸಿ ವೇಗ ಹೆಚ್ಚಿಸಿ ಜನಸೇವೆ ಮಾಡಬೇಕಾಗಿದೆ. ಉದಾಹರಣೆಗೆ, ಲಜ್ನಾ ಇಮಾಅಲ್ಲಾಹ್ಲ್ ಆಹಾರ ಬ್ಯಾಂಕ್‌ಗಳು ಮತ್ತು ಇತರ ಆಶ್ರಮಗಳಿಗೆ ತಮ್ಮ ಸಂಗ್ರಹವನ್ನು ಹೆಚ್ಚಿಸಬೇಕಾಗಿದೆ. ಹುಝೂರ್ ಅನ್ವರ್(ಅತಬಿಅ) ಅವರು ಮುಂದೆ ಹೇಳಿದರು: ತಮ್ಮ ಸ್ವಂತ ಕಾಲಿನ ಮೇಲೆ ನಿಲ್ಲುವಂತೆ ಆಫ್ರಿಕಾದ ಹಿಂದುಳಿದ ಜನರಿಗೆ ಹೊಸ ಕೌಶಲ್ಯಗಳನ್ನು ಕಲಿಸಲು ಪ್ರಯತ್ನಿಸಬೇಕು.

ಈ ವರ್ಷ ಲಜ್ನ ಇಮಾಅಲ್ಲಾಹ್‌ದ ವಾರ್ಷಿಕ ಇಜ್ತಿಮಾ ನಡೆಯದ ಕಾರಣ ಉಳಿದ ಹಣವನ್ನು ಸೇವಾ ಯೋಜನೆಗೆ ನೀಡಬೇಕು, ಅಂದರೆ ಲಜ್ನಾ ಇಮಾಅಲ್ಲಾಹ್ ಯುಕೆ ಸೆರಾಲಿಯೋನ್‌ನಲ್ಲಿ ನಿರ್ಮಿಸಲು ಅವಕಾಶವನ್ನು ಪಡೆಯುತ್ತಿರುವ ಹೆರಿಗೆ ಆಸ್ಪತ್ರೆಗೆ ನೀಡಬೇಕು ಎಂದು ಹುಝೂರ್ ಅನ್ವರ್(ಅತಬಿಅ) ಹೇಳಿದರು. ಈ ಯೋಜನೆಗೆ ಸಂಬಂಧಿಸಿದಂತೆ ಹುಝೂರ್ ಅನ್ವರ್(ಅತಬಿಅ) ಅವರು ಹೇಳಿದರು: ಅಹ್ಮದಿ ಮುಸ್ಲಿಂ ಮಹಿಳಾ ವೈದ್ಯರು ಕೆಲವು ವರ್ಷಗಳ ಕಾಲ ತಮ್ಮ ಸಮಯವನ್ನು ತ್ಯಾಗ ಮಾಡಿ ಸೆರಾಲಿಯೋನ್‌ನ ಆಸ್ಪತ್ರೆಯಲ್ಲಿ ನೀವು ನಿರ್ಮಿಸುತ್ತಿರುವ ಸೇವೆಯನ್ನು ನಿರ್ವಹಿಸುತ್ತಾರೆ ಎಂದು ನಾನು ಭಾವಿಸುತ್ತೇನೆ. ಈ ಆಸ್ಪತ್ರೆಯ ನಿರ್ಮಾಣ ಪೂರ್ಣಗೊಂಡ ನಂತರ, ಲಜ್ನಾ ಇಮಾಅಲ್ಲಾಹ್ ಅದನ್ನು ನಡೆಸುತ್ತಾರೆ ಮತ್ತು ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿಯನ್ನು ಒದಗಿಸುವ ಜವಾಬ್ದಾರಿಯೂ ನಿಮ್ಮ ಮೇಲಿದೆ.

ಹುಝೂರ್ ಅನ್ವರ್(ಅತಬಿಅ) ತಬ್ಲೀಗ್‌ನ ಬಗ್ಗೆ ಕುರಿತು ಹೇಳಿದರು: ಲಜ್ನಾ ಇಮಾಅಲ್ಲಾಹ್ ಅವರು ನಿಜವಾದ ಇಸ್ಲಾಂ ಧರ್ಮದ ಬೋಧನೆಗಳೊಂದಿಗೆ ಜನರನ್ನು ಬೆಳಗಿಸಬೇಕು ಮತ್ತು ರಾಷ್ಟ್ರೀಯ ಅಮೀಲಾ ಸದಸ್ಯರು ಈ ನಿಟ್ಟಿನಲ್ಲಿ ಮುಂಚೂಣಿಯಲ್ಲಿ ನಿಲ್ಲಬೇಕು.

ಹುಝೂರ್ ಅನ್ವರ್(ಅತಬಿಅ) ಅವರು ಹೇಳಿದರು: ಲಜ್ನಾ ಇಮಾಅಲ್ಲಾಹ್‌ದ ಪ್ರತಿಯೊಬ್ಬ ಸದಸ್ಯರು ಇಸ್ಲಾಂ ಧರ್ಮದ ಸಂದೇಶವನ್ನು ವ್ಯಾಪಕವಾಗಿ ಹರಡಲು ಶ್ರಮಿಸಬೇಕು ಮತ್ತು ಪ್ರತಿ ವರ್ಷ ಕನಿಷ್ಠ ಒಂದು ಬೈಅತ್‌ನ್ನು ಪಡೆಯಲು ಪ್ರಯತ್ನಿಸಬೇಕು. ರಾಷ್ಟ್ರೀಯ ಪ್ರಚಾರ(ತಬ್ಲೀಗ್ ಸೆಕ್ರೇಟರಿ) ಕಾರ್ಯದರ್ಶಿ ಮಜ್ಲಿಸ್-ಎ-ಅಮ್ಮೆಲಾ ಸದಸ್ಯರನ್ನು ಪ್ರೇರೇಪಿಸಲು ಪ್ರಯತ್ನಿಸಬೇಕು ಮತ್ತು ತಬ್ಲೀಗ್‌ನಲ್ಲಿ ಬದ್ಧತೆಯಿಂದ ಭಾಗವಹಿಸಬೇಕು.

ಹುಝೂರ್ ಅನ್ವರ್(ಅತಬಿಅ) ಹೇಳಿದರು: ಯುಕೆಯಲ್ಲಿ ಇಸ್ಲಾಮಿಕ್ ಬೋಧನೆ ಮಾಡುತ್ತಿರುವ ಅನೇಕ ಶಿಕ್ಷಕರಿಗೆ ಇಸ್ಲಾಂ ಧರ್ಮದ ಬಗ್ಗೆ ನಿಜವಾದ ತಿಳುವಳಿಕೆ ಇಲ್ಲ, ಇದು ಲಜ್ನಾ ಇಮಾಅಲ್ಲಾಹ್ ನೋಡಬೇಕಾದ ಸಮಸ್ಯೆಯಾಗಿದೆ. ಆದ್ದರಿಂದ ನಿಜವಾದ ಇಸ್ಲಾಮಿಕ್ ಬೋಧನೆಗಳ ಬಗ್ಗೆ ಶಾಲೆಗಳು ಮತ್ತು ಅವರ ಶಿಕ್ಷಕರಿಗೆ ಅರಿವು ಮೂಡಿಸಲು ಲಜ್ನಾ ಇಮಾಅಲ್ಲಾಹ್ ಅಭಿಯಾನವನ್ನು ಪ್ರಾರಂಭಿಸಬೇಕಾಗಿದೆ.

ಹುಝೂರ್ ಅನ್ವರ್(ಅತಬಿಅ) ಅವರು ಅಹ್ಮದಿ ಮುಸ್ಲಿಂ ಹುಡುಗಿಯರು ಮತ್ತು ಮಹಿಳೆಯರ ನೈತಿಕ ಮತ್ತು ಆಧ್ಯಾತ್ಮಿಕ ತರಬೇತಿಯ ಮಹತ್ವವನ್ನು ಒತ್ತಿ ಹೇಳಿದರು. ಅಹ್ಮದಿ ಮುಸ್ಲಿಂ ಹೆಣ್ಣುಮಕ್ಕಳಿಗೆ ಸಂಬಂಧಿಸಿದಂತೆ, ಹುಝೂರ್ ಅನ್ವರ್(ಅತಬಿಅ) ಅವರು ತಮ್ಮ ನೈತಿಕ ಶಿಕ್ಷಣದಲ್ಲಿ "ನಾಚಿಕೆ ವಿಶ್ವಾಸದ ಭಾಗವಾಗಿದೆ" ಎಂಬ ಪ್ರವಾದಿ(ಸ) ರವರ ಹೇಳಿಕೆಯನ್ನು ಒಳಗೊಂಡಿರಬೇಕು ಎಂದು ಹೇಳಿದರು.

ಲಜ್ನಾ ಇಮಾಅಲ್ಲಾಹ್ ಅವರ ಎಲ್ಲಾ ಸದಸ್ಯರ ನೈತಿಕ ತರಬೇತಿಯ ಬಗ್ಗೆ ಹುಝೂರ್ ಅನ್ವರ್(ಅತಬಿಅ) ಹೇಳಿದರು: ಲಜ್ನಾ ಇಮಾಅಲ್ಲಾಹ್ ಅವರ ಶೇಕಡಾ 100% ರಷ್ಟು ಸದಸ್ಯರು ಐದು ಬಾರಿ ನಮಾಝ್ ನಿರ್ವಹಿಸಲು ಒಗ್ಗಿಕೊಳ್ಳಬೇಕು ಮತ್ತು ಸಹಜವಾಗಿ ಅವರ ಮಕ್ಕಳೂ ನಮಾಝ್‌ಗೆ ಒಗ್ಗಿಕೊಳ್ಳುತ್ತಾರೆ ಎಂದು ಹೇಳಿದರು. ಎರಡನೆಯದಾಗಿ, ಲಜ್ನಾ ಇಮಾಅಲ್ಲಾಹ್‌ನ ಸದಸ್ಯರು ನೂರು ಪ್ರತಿಶತ ಸದಸ್ಯರು ಪ್ರತಿದಿನ ಪವಿತ್ರ ಖುರ್‌ಆನ್ ಅನ್ನು ನಿಯಮಿತವಾಗಿ ಪಠಿಸಬೇಕು. ಕನಿಷ್ಠ 70% ಅಹ್ಮದಿ ಕುಟುಂಬಗಳು ಹದೀಸ್‌ಗಳನ್ನು ಅಧ್ಯಯನ ಮಾಡಬೇಕು ಮತ್ತು ಹಝ್ರತ್ ಅಖದ್ದಸ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಗ್ರಂಥಗಳನ್ನು ಓದಬೇಕು ಮತ್ತು ಲಜ್ನಾ ಇಮಾಅಲ್ಲಾಹ್‌ನ 100% ಸದಸ್ಯರು ನನ್ನ ಶುಕ್ರವಾರದ ಧರ್ಮೋಪದೇಶವನ್ನು(ಖುತುಬ ಜುಮುಅ) ನಿಯಮಿತವಾಗಿ ಪಠಿಸಬೇಕು.

**(ಅಕ್ಟೋಬರ್ 5, 2021 ರ ಅಲ್-ಫಝ್ಲ್ ಇಂಟರ್ನ್ಯಾಷನಲ್)**

### *127 ನೇ ಜಲ್ಸಾ ಸಾಲಾನ ಖಾದಿಯಾನ್*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 127ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 23, 24 ಮತ್ತು 25ನೇ ಡಿಸೆಂಬರ್ 2022 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.03, Thursday, 29 September 2022, Issue No. 39

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.600/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಐರ್ಲ್ಯಾಂಡ್ನ ಪ್ರವಾಸ (ಸೆಪ್ಟೆಂಬರ್ 2014)*

**(ಬದರ್ ಸಂಚಿಕೆ 38ರ ಉಳಿದ ಭಾಗ)**

**24 ಸೆಪ್ಟೆಂಬರ್ 2014 ಬುಧವಾರ**

ಹುಝೂರೆ ಅನ್ವರ್ ಮುಂಜಾನೆ ಆರು ಗಂಟೆಗೆ ಆಗಮಿಸಿ ಫಜರ್ ನಮಾಝ್ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರೆ ಅನ್ವರ್ ತನ್ನ ವಸತಿ ನಿಲಯಕ್ಕೆ ತೆರಳಿದರು.

ಮುಂಜಾನೆ ಹುಝೂರೆ ಅನ್ವರ್ ಅಂಚೆಪತ್ರಗಳನ್ನು ಮತ್ತು ವರದಿಗಳನ್ನು ಪರಿಶೀಲಿಸಿದರು ಮತ್ತು ನಿರ್ದೇಶನಗಳನ್ನು ನೀಡಿದರು.

ಸಂಸದ್ ಭವನದಲ್ಲಿ speaker ಮತ್ತು ಇತರ ಸಂಸದ್ ಸದಸ್ಯರೊಂದಿಗೆ ಹುಝೂರೆ ಅನ್ವರ್ ಅವರ ಭೇಟಿ

ಇಂದು ಕಾರ್ಯಕ್ರಮದನ್ವಯ ಸಂಸದ್ ಭವನಕ್ಕೆ ತೆರಳಬೇಕಾಗಿತ್ತು. ಅಲ್ಲಿ ನ್ಯಾಷನಲ್ ಅಸೆಂಬ್ಲಿ ಐರ್ಲ್ಯಾಂಡ್‌ನ ಸ್ಪೀಕರ್ ಮತ್ತು ಇತರ ಸಂಘದ ಸದಸ್ಯರ ಮತ್ತು ಸೆನೆಟರ್‌ರೊಂದಿಗೆ ಹುಝೂರೆ ಅನ್ವರ್ ಅವರೊಂದಿಗೆ ಭೇಟಿಯ ಕಾರ್ಯಕ್ರಮ ನಿಗಧಿಯಾಗಿತ್ತು.

ಹತ್ತು ಗಂಟೆ ಇಪ್ಪತ್ತು ನಿಮಿಷಕ್ಕೆ ಹುಝೂರೆ ಅನ್ವರ್ ಹೋಟೆಲಿನಿಂದ ಹೊರಗೆ ಆಗಮಿಸಿದರು ಮತ್ತು ಸಂಸದ್ ಭವನಕ್ಕೆ ತೆರಳಿದರು. ಸರಕಾರದ ವತಿಯಿಂದ ಹುಝೂರೆ ಅನ್ವರ್ ಅವರಿಗೆ ಪರಿಪೂರ್ಣ ರೀತಿಯ ಸುರಕ್ಷೆ ನೀಡಲಾಗಿತ್ತು. ಪೋಲೀಸರ ನಾಲ್ಕು ಮೊಟಾರ್ ಸಾಯಿಕಲ್ ಹುಝೂರೆ ಅನ್ವರ್ ಅವರ ತಂಡಕ್ಕೆ Escort ಮಾಡಲು ಮೊದಲಿನಿಂದಲೇ ಹೋಟೆಲ್ ತಲುಪಿದ್ದರು. ಆಗಮಿಸುವ ಮೊದಲೇ ಓರ್ವ ಪೋಲೀಸ್ ಅಧಿಕಾರಿ ವಾಹನ ಚಾಲಕರಿಗೆ ವಿಶೇಷ ನಿರ್ದೇಶನಗಳನ್ನು ನೀಡಿದ್ದರು. ಯಾವ ರೀತಿ ತಂಡ ಹೋಗಬೇಕಾಗಿದೆ ಮತ್ತು ವಿಶೇಷ ರೀತಿಯ ನಿರ್ದೇಶನ ನೀಡಲಾಗಿತ್ತು. ರಸ್ತೆಯಲ್ಲಿ ಎಲ್ಲೂ ಯಾವ ಜಾಗದಲ್ಲೂ ರೆಡ್ ಲೈನ್ಸ್ ಆಗಿರಲಿ ಅಥವಾ Roundabout ಬರಲಿ ನೀವು ಎಲ್ಲಿಯೂ ನಿಲ್ಲಬಾರದು. ಬದಲು ಸತತವಾಗಿ ನಡೆಯಬೇಕಾಗಿದೆ. ಪೋಲೀಸ್ ಸ್ವಯಂ ಎಲ್ಲಾ ವೃತ್ತಗಳಲ್ಲಿ ಮತ್ತು ಇತರ ಸ್ಥಳಗಳಲ್ಲಿ ದಾರಿ ಮುಕ್ತವಾಗಿರಿಸುವುದು. ಹಾಗೆ ಪೋಲಿಸ್ escort ಮಾಡುತ್ತಾ ಎಲ್ಲಾ ಕಡೆ ದಾರಿ ಮುಕ್ತವಾಗಿರಿಸಿದರು. 11 ಗಂಟೆಗೆ ಹುಝೂರೆ ಅನ್ವರ್ (ಅಬಿಅ) ಸಂಸದ್ ಭವನಕ್ಕೆ ಆಗಮಿಸಿದರು.

ಸುರಕ್ಷ ಅಧಿಕಾರಿ Capt. John Flaherty ಅವರು ಸಂಸದ್ ಭವನದಿಂದ ಹೊರಗೆ ಬಂದು ಹುಝೂರರನ್ನು ಬರಮಾಡಿಕೊಂಡರು ಮತ್ತು ಶುಭಕೋರಿದರು. ಮತ್ತು ಹುಝೂರ್‌ರನ್ನು ತಮ್ಮ ಜೊತೆಯಲ್ಲಿ ಸಂಸತ್ ಭವನದ ಒಳಗೆ ಕರೆದುಕೊಂಡು ಹೋದರು.

ನೆಷ್ನಲ್ ಅಸೆಂಬ್ಲಿಯ ಸ್ಪೀಕರ್ Hon bean Banneet ಮೊದಲೇ ಹುಝೂರ್‌ರವರ ಆಗಮನಕ್ಕಾಗಿ ಕಾಯುತ್ತಿದ್ದರು. ಅವರು ಹುಝೂರರನ್ನು ತುಂಬಾ ಉತ್ಸಾಹದಿಂದ ಸ್ವಾಗತ ಕೋರಿದರು. ಮತ್ತು ಹೇಳಿದರು. ಐರ್ಲ್ಯಾಂಡ್‌ನಲ್ಲಿ ನನಗೆ ಜಮಾಅತ್ ಅಹ್ಮದಿಯಾ ಕುರಿತು ಪರಿಚಯವಿದೆ ಮತ್ತು ನಾನು ಸಮುದಾಯದ ಕಾರ್ಯಗಳನ್ನು ಗೌರವದ ದೃಷ್ಟಿಯಿಂದ ಕಾಣುತ್ತೇನೆ. ನಿಮ್ಮ ಸಮುದಾಯವು ಅಲ್ಪ ಸಂಖ್ಯೆಯಲ್ಲಿದ್ದರು. ತುಂಬಾ ಸಕ್ರಿಯ ಮತ್ತು ಚತುರತೆ ಹೊಂದಿದೆ. ನಾನು ಇಲ್ಲಿ ಜಮಾಅತಿನ ವಾರ್ಷಿಕ ಸಮಾರಂಭದಲ್ಲೂ ಭಾಗವಹಿಸಿರುತ್ತೇನೆ ಮತ್ತು ಜಮಾಅತಿನ Motto, "Love for All Hatred for none" ನಿಂದ ತುಂಬಾ ಪ್ರಭಾವಿತನಾಗಿದ್ದೇನೆ.

ಅವರು ಹೇಳಿದರು. ಅವರು ಅದಕ್ಕಿಂತ ಮುಂಚೆ ರಕ್ಷಣಾ ಮಂತ್ರಿಯಾಗಿದ್ದರು. ಸ್ಪೀಕರ್ ಹೇಳಿದರು ಅವರು ಆಫ್ರಿಕಾ ದೇಶದ ರುವಾಂಡದ ಪ್ರವಾಸ ಮಾಡಿದ್ದರು. ಆಗ ಅವರು ಆಫ್ರಿಕಾದ ಕೆಲ ಸಮಸ್ಯೆಗಳ ಮತ್ತು ಕಷ್ಟಗಳ ಬಗ್ಗೆ ವಿಚಾರಿಸಿದರು.

ಆಗ ಹುಝೂರೆ ಅನ್ವರ್ ಹೇಳಿದರು. ನಾನು ಸ್ವಯಂ ಆಫ್ರಿಕಾದಲ್ಲಿದ್ದೆ. ಎಂಟು ವರ್ಷ ಘಾನಲ್ಲಿದ್ದೆ. ಹುಝೂರೆ ಅನ್ವರ್ ಜಮಾಅತಿನ ಪ್ರಗತಿಯನ್ನು ವಿವರಿಸುತ್ತ ಹೇಳಿದರು. ಆಫ್ರಿಕಾದಲ್ಲಿ ಜಮಾಅತ್ ದೊಡ್ಡ ಸಂಖ್ಯೆಯಲ್ಲಿ ಶಾಲೆಗಳನ್ನು ಮತ್ತು ಆಸ್ಪತ್ರೆಗಳನ್ನು ಸ್ಥಾಪಿಸಿದೆ ಮತ್ತು ಬಡಜನರಿಗೆ ಶಿಕ್ಷಣ ಮತ್ತು ಉಚಿತ ಚಿಕಿತ್ಸೆಯ ಸವಲತ್ತುಗಳನ್ನು ಒದಗಿಸಿದೆ. ಅದೇ ರೀತಿ ಆಫ್ರಿಕಾದಲ್ಲಿ ಬಡ ಜನರಿಗೆ ಕುಡಿಯಲು ಸ್ವಚ್ಛ ನೀರು ಒದಗಿಸುವ ಮತ್ತು ವಿದ್ಯುತ್ ಒದಗಿಸುವ ಕಾರ್ಯವೂ ಸಹ ನಡೆಯುತ್ತಿದೆ.

ಹುಝೂರೆ ಅನ್ವರ್ ಜಮಾಅತಿನ ವಿವಿಧ ಸಾಮಾಜಿಕ ಕಾರ್ಯಗಳ ಬಗ್ಗೆ ವಿವರಿಸುತ್ತಾ ಆಫ್ರಿಕಾದ ವಿವಿಧ ದೇಶಗಳಲ್ಲಿ ನಾವು Model village ಗಳನ್ನು ನಿರ್ಮಿಸುತ್ತಿದ್ದೇವೆ. ಮತ್ತು ಕುಡಿಯಲು ಸ್ವಚ್ಛ ನೀರಿನ ಟ್ಯಾಪ್‌ಗಳು ಒದಗಿಸಲಾಗುತ್ತಿದೆ. ಸೋಲಾರ್ ಸಿಸ್ಟಮ್ ಮೂಲಕ ವಿದ್ಯುತ್ ಒದಗಿಸಿ ಕೊಡಲಾಗುತ್ತದೆ. ಮಸೀದಿ ಮತ್ತು ಸಮುದಾಯ ಕೇಂದ್ರಗಳನ್ನು ಸಹ ನಿರ್ಮಿಸಲಾಗಿದೆ. ಊರಿನ ಜನರಿಗೆ ತಮ್ಮ ಅವಶ್ಯಕತೆ ಅನುಸಾರ ಕೃಷಿ ಮಾಡಲು ಗ್ರೀನ್ ಹೌಸ್‌ಗಳನ್ನು ಸಹ ನಿರ್ಮಿಸಲಾಗಿದೆ. ಅದೇ ರೀತಿ Pave street ಸಹ ನಿರ್ಮಿಸಲಾಗಿದೆ.

ಹುಝೂರೆ ಅನ್ವರ್ ಹೇಳಿದರು. ನಮ್ಮ ಎಲ್ಲ ಸಾಮಾಜಿಕ ಕಾರ್ಯಕ್ರಮಗಳು ಜಾತಿಮತ ವರ್ಣಗಳ ಭೇದವಿಲ್ಲದೇ ನಡೆಯುತ್ತವೆ. ಎಲ್ಲಾ ವ್ಯಕ್ತಿಗಳು ಅವರ ಸಂಬಂಧ ಯಾವ ಧರ್ಮದೊಂದಿಗಿದ್ದರು ಅವರು ಪ್ರಯೋಜನ ಪಡೆಯಬಹುದಾಗಿದೆ.

ಸ್ಪೀಕರರು ಹೇಳಿದರು. ನಮ್ಮ ಕೆಲ ಐರಿಷ್ ಮಿಷನರಿಗಳು ಸಹ ಆಫ್ರಿಕಾಕ್ಕೆ ಹೋಗುತ್ತಾರೆ. ಮತ್ತು ನಾವು ಸಹ ಅಲ್ಲಿ ಕೆಲ ಶಾಲೆಗಳನ್ನು ತೆರೆದಿದ್ದೇವೆ. ಮತ್ತು ಆ ಶಾಖೆಗಳಿಂದ ವಿದ್ಯೆ ಪಡೆದ ಜನರು ವಿವಿಧ ಭಾಗಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಐರ್ಲ್ಯಾಂಡ್ ಜಮಾಆತಿನ ಅಧ್ಯಕ್ಷರು ಸಹ ಆ ಭೇಟಿಯಲ್ಲಿ ಜೊತೆಗಿದ್ದರು. ಅಧ್ಯಕ್ಷರು ಹೇಳಿದರು. ಜಮಾಅತಿನ ಅಹ್ಮದಿಯಾ ಶಾಲೆಗಳು ಅಲ್ಲಾಹನ ಅನುಗ್ರಹದಿಂದ ತುಂಬಾ ಹೆಸರು ಗಳಿಸಿವೆ. ಆ ಶಾಲೆಗಳಿಂದ ಕಲಿತ ಜನರು ಸರಕಾರದ ವಿವಿಧ ವಿಭಾಗಗಳಲ್ಲಿ, ಉನ್ನತ ಹುದ್ದೆಗಳಲ್ಲಿ ಕಾರ್ಯನಿರತನಾಗಿದ್ದಾರೆ.

ಹುಝೂರೆ ಅನ್ವರ್ ಹೇಳಿದರು. ನಮ್ಮ ಶಾಲೆಗಳಲ್ಲಿ ಧಾರ್ಮಿಕ ಶಿಕ್ಷಣವು ನೀಡಲಾಗುತ್ತದೆ ಮತ್ತು ಅದರಲ್ಲಿ ಸ್ವಾತಂತ್ರ್ಯತೆ ಇದೆ. ಒಂದೇ ಧರ್ಮದ ಶಿಕ್ಷಣ ನೀಡಬೇಕೆಂಬ ಕಡ್ಡಾಯವೇನಿಲ್ಲ. ಎಲ್ಲಾ ಧರ್ಮಗಳ ವಿದ್ಯಾರ್ಥಿಗಳು ತಮ್ಮ ಧರ್ಮದ ಶಿಕ್ಷಣ ಪಡೆಯಬಹುದಾಗಿದೆ. ಆ ಮಾತಿನ ಮೇಲೆ ಸ್ಪೀಕರ್ ಸಾಹಿಬರು ತುಂಬಾ ಚಕಿತರಾದರು.

ಸ್ಪೀಕರ್ ಸಾಹೇಬರು ಹೇಳಿದರು. ನಾನು ಮಾನವೀಯತೆಯ ಸೇವೆಯಲ್ಲಿ ಭರವಸೆ ಹೊಂದಿದವನಾಗಿದ್ದೇನೆ. ಆಗ ಹುಝೂರ್ ಹೇಳಿದರು. ಇಸ್ಲಾಮಿನ ಶಿಕ್ಷಣವು ಅದೇ ಆಗಿದೆ. ಮನುಷ್ಯನು ದೇವರನ್ನು ಗುರುತಿಸಬೇಕು, ದೇವನೊಂದಿಗೆ ಸಂಬಂಧ ಉಂಟಾಗಬೇಕು ಮತ್ತು ಎಲ್ಲಾ ಮನುಷ್ಯರು ಬೇರೆ ಮನುಷ್ಯರ ಹಕ್ಕುಗಳನ್ನು ಪಾಲಿಸಬೇಕು ಮತ್ತು ಒಬ್ಬರು ಇನ್ನೊಬ್ಬರ ಅಗತ್ಯಗಳನ್ನು ಪೂರೈಸುವ ಕಡೆ ಗಮನ ನೀಡಬೇಕು.

ಹುಝೂರೆ ಅನ್ವರ್ ಹೇಳಿದರು. ಇಸ್ಲಾಮ್ ಅಂತೂ ತುಂಬಾ ಶಾಂತಿಪೂರ್ಣ ಧರ್ಮವಾಗಿದೆ. ಆದರೆ ಉಗ್ರವಾದಿ ಮುಸಲ್ಮಾನರು ಮತ್ತು ಭಯೋತ್ಪಾದಕರು ಇಸ್ಲಾಂ ಧರ್ಮದ ಹೆಸರನ್ನು ಕೆಡಿಸುತ್ತಿದ್ದಾರೆ. ಅದಾಗ್ಯೂ ಇಸ್ಲಾಮ್ ಧರ್ಮದ ಯಾವ ಸಂಬಂಧ ಭಯೋತ್ಪಾದಕ ಯೋಜನೆ ಇಲ್ಲ. ಯಾವ ವ್ಯಕ್ತಿಯನ್ನಾಗಲೀ ಅಥವಾ ಯಾವ ಗುಂಪನ್ನಾಗಲೀ ಅವರ ತಪ್ಪುಗಳನ್ನು ಅವರ ಧರ್ಮದ ಜೊತೆ ಸೇರಿಸುವುದು ನ್ಯಾಯವಲ್ಲ.

ಆಗ ಸ್ಪೀಕರರು ಹೇಳಿದರು. ಕೆಲ ಸ್ಥಳಗಳಲ್ಲಿ ಕ್ರೈಸ್ತರ ಮೇಲೂ ದೌರ್ಜನ್ಯಗಳಾಗುತ್ತವೆ.

ಹುಝೂರ್ ಹೇಳಿದರು. ಕ್ರೈಸ್ತರ ಕಡೆಯಿಂದನು ದೌರ್ಜನ್ಯಗಳಾಗುತ್ತವೆ. ಯಾರೂ ಸಹ ಅವರ ಧರ್ಮದೊಂದಿಗೆ ಹೆಸರನ್ನು ಜೋಡಿಸುತ್ತಿಲ್ಲ. ಆ ದೌರ್ಜನ್ಯವು ಕ್ರೈಸ್ತರು ಎಸಗಿದ್ದಾರೆ ಎಂದು.

**(ಮುಂದುವರಿಯುವುದು)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800–103–2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.